# ಜನತಾವಾಣಿ

ಸಂಪಾದಕರು : ಎಂ.ಎಸ್. ವಿಕಾಸ್

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಗುರುವಾರ, ಆಗಸ್ಟ್ 15, 2024

ಸಂಪುಟ : 51 ಸಂಚಿಕೆ : 93 ☎ 08192-254736 91642 99999 RNI No: 27369 ಪುಟ : 8 ರೂ : 5.00 www.janathavani.com janathavani@mac.com



TATA ಉತ್ಪಾದನೆ

ನಾಡಿನ ಸಮಸ್ತ ಜನತೆಗೆ ಸ್ವಾತಂತ್ರೋತ್ಸವದ ಹಾರ್ದಿಕ ಶುಭಾಶಯಗಳು

TANISHQ PRESENTS ಆರ್ನಾ

ಚಿನ್ನಾಭರಣಗಳ ತಯಾರಿಕಾ ವೆಚ್ಚದ ಮೇಲೆ ಮತ್ತು ವಜ್ರಾಭರಣಗಳ ಮೌಲ್ಯದ ಮೇಲೆ 20% ವರೆಗೆ ಕಡಿತ

ಯಾವುದೇ ಜ್ಯುವೆಲ್ಲರ್‌ರಿಂದ ಖರೀದಿಸಿದ ಹಳೆಯ ಚಿನ್ನದ ಮೇಲೆ 100% ವಿನಿಮಯ ಮೌಲ್ಯ ಪಡೆಯಿರಿ

ಈ ಕೊಡುಗೆಯು 15ನೇ ಆಗಸ್ಟ್‌ನಿಂದ 18ನೇ ಆಗಸ್ಟ್, 2024 ರವರೆಗೆ ಜಾರಿಯಲ್ಲಿರುತ್ತದೆ.

ನಂ.1, ಗ್ರೌಂಡ್ ಫ್ಲೋರ್, ತೋಶನಿ ಎಂಪೋರಿಯಾ, ಎ.ವಿ.ಕೆ. ಕಾಲೇಜು ರಸ್ತೆ, ದಾವಣಗೆರೆ.

63647-95111

www.tanishq.co.in

*ಶರತ್ತುಗಳು ಅನ್ವಯವಾಗುತ್ತವೆ.


## ಗ್ಯಾರಂಟಿ ಪರಿಷ್ಕರಣೆ ಬಗ್ಗೆ ಚರ್ಚೆಯಾಗಿಲ್ಲ

### ಗೃಹ ಸಚಿವ ಡಾ. ಜಿ.ಪರಮೇಶ್ವರ್ ಸ್ಪಷ್ಟನೆ



ಬೆಂಗಳೂರು, ಆ. 14 - ಗ್ಯಾರಂಟಿ ಯೋಜನೆಗಳ ಪರಿಷ್ಕರಣೆ ಕುರಿತು ಸರ್ಕಾರದ ಹಂತದಲ್ಲಿ ಚರ್ಚೆಯಾಗಿಲ್ಲ ಎಂದು ಗೃಹ ಸಚಿವ ಡಾ. ಜಿ.ಪರಮೇಶ್ವರ್ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಚಿವರು, ಮುಖಂಡರು ದೆಹಲಿಗೆ ಹೋದಾಗ ಎಐಸಿಸಿ ಕಚೇರಿಗೆ ಭೇಟಿ ನೀಡುವುದು ಸಂಪ್ರದಾಯ. ಇದಕ್ಕೆ ಬೇರೆ ಅರ್ಥ ಕಲ್ಪಿಸುವ ಅಗತ್ಯವಿಲ್ಲ ಎಂದರು.

ಗ್ಯಾರಂಟಿ ಯೋಜನೆಗಳು ಬಡವರಿಗೆ ಮಾತ್ರ ತಲುಪಬೇಕು ಎಂಬುದು ಬಹಳ ಜನರ ಅಭಿಪ್ರಾಯವಾಗಿದೆ. ಈಗಾಗಲೇ ಬಜೆಟ್‌ನಲ್ಲಿ ಗ್ಯಾರಂಟಿ ಯೋಜನೆ ಗಳಿಗೆ 56 ಸಾವಿರ ಕೋಟಿ ರೂ. ಮೀಸಲಿಡಲಾಗಿದೆ. ಹೀಗಾಗಿ ಗ್ಯಾರಂಟಿ ಯೋಜನೆಗಳನ್ನು ಪರಿಷ್ಕರಣೆ ಮಾಡುವುದು ಸಾಧ್ಯವಿಲ್ಲ ಎಂದರು.

ಗ್ಯಾರಂಟಿ ಯೋಜನೆಗಳ ಪರಿಷ್ಕರಣೆ ಬಗ್ಗೆ ಚರ್ಚೆಗಳಾ ಗುತ್ತಿರುವುದು ನಿಜ. ಶಾಸಕರು, ಕಾರ್ಯಕರ್ತರು ಸಾರ್ವಜನಿಕ ವಾಗಿ ಅಲ್ಲಲ್ಲಿ ಮಾತನಾಡಿರ ಬಹುದು. ಪಕ್ಷದ ವೇದಿಕೆಯಲ್ಲಿ, ಸರ್ಕಾರದ ಹಂತದಲ್ಲಿ ಚರ್ಚೆಯಾಗಿಲ್ಲ ಎಂದು ಹೇಳಿದರು. ಲೋಕಸಭಾ ಚುನಾವಣೆ ಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಶೇ.13ರಷ್ಟು ಮತ ಹೆಚ್ಚಾಗಿವೆ. ಗ್ಯಾರಂಟಿ ಯೋಜನೆಗಳಿಂದ ಮತ ಹೆಚ್ಚಾಗಿದೆ ಎಂದು ಯಾಕೆ ವಿಶ್ಲೇಷಣೆ ಮಾಡಬಾರದು? ಎಂದ (2ನೇ ಪುಟಕ್ಕೆ)

### ಗ್ಯಾರಂಟಿ ಕತ್ತರಿಯಿಲ್ಲ, ಬದಲಾವಣೆಯೂ ಇಲ್ಲ: ಡಿಕೆಶಿ

ಗ್ಯಾರಂಟಿ ಯೋಜನೆಗಳಿಗೆ ಕತ್ತರಿ ಹಾಕುವುದಿಲ್ಲ, ಇದರಲ್ಲಿ ಯಾವುದೇ ಬದಲಾವಣೆಯೂ ಇಲ್ಲ ಎಂದು ಉಪ ಮುಖ್ಯಮಂತ್ರಿ ಹಾಗೂ ಕಾಂಗ್ರೆಸ್ ರಾಜ್ಯಾಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ.

ಆದಾಯ ತೆರಿಗೆ ಪಾವತಿಸುವವರು ಹಾಗೂ ಜಿಎಸ್‌ಟಿ ಪಾವತಿಸುವವರೂ ಗ್ಯಾರಂಟಿ ಯೋಜನೆಗಳ ಲಾಭ ಪಡೆಯುತ್ತಿದ್ದಾರೆ ಎಂಬ ದೂರಿದೆ. ಈ ಬಗ್ಗೆ ಮಾತ್ರ ಪರಿಶೀಲಿಸಲಾಗುವುದು ಎಂದವರು ತಿಳಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗ್ಯಾರಂಟಿ ಯೋಜನೆಗಳಿಗಾಗಿ ಬಜೆಟ್‌ನಲ್ಲಿ 56 ಸಾವಿರ ಕೋಟಿ ರೂ.ಗಳನ್ನು ಮೀಸಲಿಟ್ಟಿದ್ದಾರೆ. ಹೀಗಾಗಿ ಗ್ಯಾರಂಟಿಗಳ ಬದಲಾವಣೆ ಇಲ್ಲವೇ ಕತ್ತರಿ (4ನೇ ಪುಟಕ್ಕೆ)

## ಎಸ್‌ಬಿಐ, ಪಿಎನ್‌ಬಿ ಠೇವಣಿ ವಾಪಸ್‌ಗೆ ರಾಜ್ಯದ ನಿರ್ಧಾರ

ಬೆಂಗಳೂರು, ಆ. 14 - ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಹಾಗೂ ಪಂಜಾಬ್ ನ್ಯಾಷನಲ್ ಬ್ಯಾಂಕ್‌ಗಳಲ್ಲಿ ಇರಿಸಿರುವ ಎಲ್ಲಾ ಠೇವಣಿಗಳನ್ನು ವಾಪಸ್ ಪಡೆಯಲು ರಾಜ್ಯ ಸರ್ಕಾರ ನಿರ್ಧರಿಸಿದೆ. ಈ ಬ್ಯಾಂಕುಗಳಲ್ಲಿ ತನ್ನ ಎಲ್ಲಾ ಇಲಾಖೆಗಳು, ಮಂಡಳಿಗಳು, ನಿಗಮಗಳು, ಸಾರ್ವಜನಿಕ ವಲಯದ ಘಟಕಗಳು ಹಾಗೂ ವಿಶ್ವವಿದ್ಯಾಲಯಗಳು ಇರಿಸಿರುವ ಠೇವಣಿಗಳನ್ನು ವಾಪಸ್ ಪಡೆಯಲು ಆದೇಶ ಹೊರಡಿಸಲಾಗಿದೆ.

ಬ್ಯಾಂಕ್ ಉದ್ಯೋಗಿಯೊಬ್ಬರು ಭಾಗಿಯಾಗಿದ್ದ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ಹಗರಣ ಬೆಳಕಿಗೆ (2ನೇ ಪುಟಕ್ಕೆ)

## ಜಿ.ಎಸ್. ರುದ್ರಯ್ಯನವರು ನಿಧನ



ನಗರದ ನಂ. 1660/27, 11ನೇ ಕ್ರಾಸ್ ತರಳಬಾಳು ಬಡಾವಣೆ, ನಿವಾಸಿ ತರಳಬಾಳು ವಿದ್ಯಾಸಂಸ್ಥೆಯ ನಿವೃತ್ತ ಪ್ರಾಧ್ಯಾಪಕರಾದ

**ಶ್ರೀ ಜಿ.ಎಸ್. ರುದ್ರಯ್ಯ**

ಅವರು ದಿನಾಂಕ 13.08.2024ರ ಮಂಗಳವಾರ ಬೆಳಿಗ್ಗೆ 8.50ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 72 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಸೇರಿದಂತೆ, ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.

ಮೃತರ ಪಾರ್ಥಿವ ಶರೀರವನ್ನು ದಿನಾಂಕ 15.08.2024ರ ಗುರುವಾರ ಬೆಳಿಗ್ಗೆ 8 ರಿಂದ ಮಧ್ಯಾಹ್ನ 12ರವರೆಗೆ ಮೃತರ ನಿವಾಸದಲ್ಲಿ ಅಂತಿಮ ದರ್ಶನಕ್ಕಾಗಿ ಇಡಲಾಗುವುದು. ನಂತರ ಶಾಮನೂರಿನ ವೀರಶೈವ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ
ಪತ್ನಿ : ಲಲಿತಾ ರುದ್ರಯ್ಯ,
ಮಕ್ಕಳಾದ ಡಾ.ಜಿ.ಆರ್. ಮಲ್ಲಿಕಾರ್ಜುನ, ಜಿ.ಆರ್. ಮಂಜುನಾಥ್
98441 59129, 98456 31673

## ನಲ್ಕುಂದ ನಾಡಿಗರ ಮಹದೇವಪ್ಪ ನಿಧನ



ದಾವಣಗೆರೆ ಕೆ.ಬಿ. ಬಡಾವಣೆ ಹಳೇ ಪೋಸ್ಟ್‌ಆಫೀಸ್ ರಸ್ತೆ ವಾಸಿ


**ನಲ್ಕುಂದ ನಾಡಿಗರ ಮಹದೇವಪ್ಪನವರು**

(ಪಿಡಬ್ಲ್ಯೂಡಿ ನಿವೃತ್ತ ಸಿವಿಲ್ ಇಂಜಿನಿಯರ್)

ದಿನಾಂಕ 14.08.2024ರ ಬುಧವಾರ ರಾತ್ರಿ 8ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 89 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಪಾರ್ಥಿವ ಶರೀರವನ್ನು ದಾವಣಗೆರೆ ಮೃತರ ಸ್ವಗೃಹದಲ್ಲಿ ಬೆಳಿಗ್ಗೆ 10ರವರೆಗೆ ಅಂತಿಮ ದರ್ಶನಕ್ಕೆ ಇರಿಸಲಾಗುವುದು. ನಂತರ ಅಂತ್ಯಕ್ರಿಯೆಯನ್ನು ದಿನಾಂಕ 15.08.2024ರ ಗುರುವಾರ ಮಧ್ಯಾಹ್ನ 3 ಗಂಟೆಗೆ ಮೃತರ ಸ್ವಗ್ರಾಮವಾದ ನಲ್ಕುಂದ ಗ್ರಾಮದ ಸ್ವಂತ ತೋಟದಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ : ನಾಡಿಗರ ವಂಶಸ್ಥರು, ನಲ್ಕುಂದ ಹಾಗೂ ಬಂಧು ಮಿತ್ರರು. ಮೊ : 84319 64189, 73383 52562

## ಅನುವಾದಕ, ಆಡಳಿತಾಧಿಕಾರಿ ಪ್ರೊ.ಎಸ್.ಬಿ. ರಂಗನಾಥ್ ಇನ್ನಿಲ್ಲ



ದಾವಣಗೆರೆ, ಆ. 14 - ನಿವೃತ್ತ ಪ್ರಾಂಶುಪಾಲರೂ, ತರಳಬಾಳು ವಿದ್ಯಾಸಂಸ್ಥೆಯ ಆಡಳಿತಾಧಿಕಾರಿಗಳೂ ಆದ ಪ್ರೊ. ಎಸ್.ಬಿ. ರಂಗನಾಥ್ ಅವರು ಇಂದು ತಡರಾತ್ರಿ 12.15ಕ್ಕೆ ನಿಧನರಾದರು.

ಕೆಲ ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಮೃತರು, ಪತ್ನಿ, ಐವರು ಪುತ್ರಿಯರು, ಓರ್ವ ಪುತ್ರ, ಇಬ್ಬರು ಸಹೋದರರು ಸೇರಿದಂತೆ ಅಪಾರ ಬಂಧು ಬಳಗ, ಅಭಿಮಾನಿಗಳು, ಶಿಷ್ಯ ವೃಂದವನ್ನು ಅಗಲಿದ್ದಾರೆ.

ಮೃತರ ಪಾರ್ಥಿವ ಶರೀರವನ್ನು ನಗರದ ತರಳಬಾಳು ಬಡಾವಣೆ 7ನೇ ಕ್ರಾಸ್‌ನಲ್ಲಿರುವ ಅವರ ಸ್ವಗೃಹ 'ಸರಸ್ವತಿ' ಯಲ್ಲಿ ನಾಳೆ ದಿನಾಂಕ 15ರ ಗುರುವಾರ ಮಧ್ಯಾಹ್ನ 1 ರವರೆಗೆ ಸಾರ್ವಜನಿಕರ ಅಂತಿಮ ದರ್ಶನಕ್ಕೆ ಇಡಲಾಗುತ್ತದೆ. ಆ ನಂತರ ಅವರ ಜನ್ಮ ಸ್ಥಳ ಚನ್ನಗಿರಿ (2ನೇ ಪುಟಕ್ಕೆ)

## ಸಾರ್ವಜನಿಕ ಪ್ರಕಟಣೆ

ದಾವಣಗೆರೆ ಸಿಟಿ, ವಾಸಿಯಾದ ಶ್ರೀ ದೊಗ್ಗಳ್ಳಿ ದಯಾನಂದ್ ಬಿನ್ ಲೇಟ್ ದೊಗ್ಗಳ್ಳಿ ಪರಮೇಶ್ವರಪ್ಪ ವಯಸ್ಸು 61 ವರ್ಷ # ನಂ. 212/2, ನರಸರಾಜ ರಸ್ತೆ, ದಾವಣಗೆರೆ ಆದ ನಾನು ಮೊ. : 8217714090. ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ನಮ್ಮ ಒಟ್ಟು ಕುಟುಂಬದ ಎಲ್ಲಾ ಆಸ್ತಿಗಳ ಮೇಲೆ ದಾವಣಗೆರೆ ಸಿವಿಲ್ ನ್ಯಾಯಾಲಯದಲ್ಲಿ ದಾವೆಗಳು ಇರುತ್ತವೆ. ಶ್ಯಾಮನೂರು-ನಾಗನೂರು ಗಡಿಯಲ್ಲಿ ಬರತಕ್ಕ ನಾಗನೂರು ಗ್ರಾಮದ ರೀ. ಸರ್ವೆ ನಂಬರ್ 136/3 ರಲ್ಲಿ ವಿಸ್ತೀರ್ಣ : 7-ಎಕರೆ, 22- ಗುಂಟೆ, ಜಮೀನು ಭಾಗ-1, ಭಾಗ-2ರಲ್ಲಿ ವಿಂಗಡಿಸಿರುವ ಜಮೀನನ್ನು ತೋರಿಸಿ ನಮಗೆ ಸಂಬಂಧವಿಲ್ಲದ ವ್ಯಕ್ತಿಗಳು ವ್ಯವಹಾರ ಮಾಡುವ ಕೆಲಸ ಮಾಡುತ್ತಿರುವುದು ನಮಗೆ ಕಂಡು ಬಂದಿರುತ್ತದೆ. ಆದ್ದರಿಂದ ಸದರಿ ಜಮೀನಿಗೆ ಸಂಬಂಧಿಸಿದಂತೆ ಯಾವುದೇ ವ್ಯವಹಾರವನ್ನು ಮಾಡಿಕೊಂಡು ಮೋಸಕ್ಕೆ ಹೋಗಬೇಡಿ ಎಂದು ಸಾರ್ವಜನಿಕರಲ್ಲಿ ಮತ್ತೊಮ್ಮೆ ತಿಳಿಯಬಯಸುತ್ತೇನೆ. ಒಂದು ವೇಳೆ ಸದರಿ ಜಮೀನಿಗೆ ಸಂಬಂಧಿಸಿದಂತೆ ಯಾವುದೇ ಕಾನೂನು ಬಾಹಿರವಾಗಿ ವ್ಯವಹಾರ ಮಾಡಿಕೊಂಡರೆ ಅದಕ್ಕೆ ನೀವುಗಳು ನೇರ ಹೊಣೆಗಾರರಾಗಿರುತ್ತೀರಿ. ನಾವುಗಳು ಸದರಿ ಜಮೀನಿಗೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿಗಳಿಗೆ ಅಧಿಕಾರ/ಜಿ.ಪಿ.ಎ/ಹಕ್ಕು/ಕರಾರು ಪತ್ರದ ಮುಖಾಂತರ ಅಧಿಕಾರ ನೀಡಿರುವುದಿಲ್ಲ. ಈ ಜಮೀನುಗಳು ಮಾರಾಟಕ್ಕೆ ಇರುವುದಿಲ್ಲ.

ಸಹಿ/- ಜಮೀನಿನ ಮೂಲ ಮಾಲೀಕರು
ದಿನಾಂಕ : 14.08.2024
ಸ್ಥಳ : ದಾವಣಗೆರೆ.

ಸಹಿ/- ಕಕ್ಷಿದಾರರ ಪರ ವಕೀಲರು
ಷಣ್ಮುಗಂ, MA LLB., KAR 2179/2000,
ವಕೀಲರು, SSV ಹಾಸ್ಟೆಲ್ ಬಿಲ್ಡಿಂಗ್,
1ನೇ ಮಹಡಿ, N.R. ರಸ್ತೆ, ದಾವಣಗೆರೆ.


manipalhospitals LIFE'S ON

ಮಣಿಪಾಲ್ ಆಸ್ಪತ್ರೆ ಯಶವಂತಪುರ, ಬೆಂಗಳೂರಿನ ಪ್ರಖ್ಯಾತ ವಾಸ್ಕ್ಯುಲರ್ ಶಸ್ತ್ರಚಿಕಿತ್ಸಾ ತಜ್ಞರು ಪ್ರತಿ ತಿಂಗಳ ಮೂರನೇ ಭಾನುವಾರದಂದು ಆರೈಕೆ ಆಸ್ಪತ್ರೆ, ದಾವಣಗೆರೆಯಲ್ಲಿ ಸಮಾಲೋಚನೆಗೆ ಲಭ್ಯವಿರುತ್ತಾರೆ

ಭಾನುವಾರ, 18ನೇ ಆಗಸ್ಟ್, 2024
ಬೆಳಗ್ಗೆ 10:00 ಘಂಟೆಯಿಂದ ಮಧ್ಯಾಹ್ನ 1:00 ಘಂಟೆಯವರೆಗೆ

Aaraike Hospitals
ಆರೈಕೆ ಆಸ್ಪತ್ರೆ
ಹದಡಿ ರಸ್ತೆ, ಸ್ಟೇಡಿಯಂ ಎದುರು, ದಾವಣಗೆರೆ

ಡಾ. ರಾಜೇಂದ್ರ ಪ್ರಸಾದ್ ಬಿ
ಎಂಬಿಬಿಎಸ್, ಎಂ.ಎಸ್, ಡಿಎನ್‌ಬಿ (ರಕ್ತನಾಳ ಶಸ್ತ್ರಚಿಕಿತ್ಸೆ), ಎಫ್‌ವಿಇಎಸ್ (ಆಸ್ಟ್ರಿಯಾ)
ಸಲಹೆಗಾರರು - ವಾಸ್ಕ್ಯುಲರ್ ಮತ್ತು ಎಂಡೋವಾಸ್ಕ್ಯುಲರ್ ಸರ್ಜರಿ
ಮಣಿಪಾಲ್ ಆಸ್ಪತ್ರೆ ಯಶವಂತಪುರ, ಬೆಂಗಳೂರು.

ಈ ಸಮಸ್ಯೆಗಳ ಕುರಿತು ತಜ್ಞರೊಂದಿಗೆ ಸಲಹೆ ಪಡೆಯಿರಿ


ಉಬ್ಬಿರುವ ರಕ್ತನಾಳಗಳು । ಕೈ ಮತ್ತು ಕಾಲುಗಳ ಊತ ಮತ್ತು ನೋವು । ಮಧುಮೇಹ ಕಾಲು । ಡಯಾಲಿಸಿಸ್ । ವಾಸಿಯಾಗದ ಗಾಯಗಳು । ಕಾಲು ಬೆರಳುಗಳ ಬಣ್ಣ ಬದಲಾವಣೆ । ಗ್ಯಾಂಗ್ರೀನ್ ಮತ್ತು ಇನ್ನೂ ಅನೇಕ ಸಮಸ್ಯೆಗಳು

Manipal Hospital Yeshwanthpur
Brigade Gateway, #26/4, 80 Feet, Dr. Rajkumar Road, Malleshwaram West, Bengaluru 560 055, Karnataka.
P 080 6165 6262

ನಿಮ್ಮ ಅಪಾಯಿಂಟ್ಮೆಂಟ್‌ಗಾಗಿ ಕರೆ ಮಾಡಿ!
Harishkumar
+91 80505 60580


॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

## ತೃತೀಯ ವರ್ಷದ ಪುಣ್ಯಸ್ಮರಣೆ



ಜನನ : 24.05.1932

ಲಿಂಗೈಕ್ಯ : 15.08.2021

## ಶರಣ ಶ್ರೀ ಹೆಚ್. ಎಂ. ಸ್ವಾಮಿಯವರು

ಕೈಗಾರಿಕೋದ್ಯಮಿಗಳು, ಗೌರವಾಧ್ಯಕ್ಷರು
ಬಸವ ಬಳಗ, ದಾವಣಗೆರೆ.

ಸದಾ ನಿಮ್ಮ ಸ್ಮರಣೆಯಲ್ಲಿ ಧರ್ಮಪತ್ನಿಯಾದ :
ಹೆಚ್.ಎಂ. ಮಂದಾಕಿನಿ ಸ್ವಾಮಿ
ಹಾಗೂ ಮಕ್ಕಳು, ಸೊಸೆಯಂದಿರು ಮತ್ತು ಮೊಮ್ಮಕ್ಕಳು.

# ಆಶ್ಲೇಷ ಆರ್ಭಟ, ನಳ ನಳಿಸುತ್ತಿರುವ ಕೆರೆಗಳು !

## ಜಗಳೂರು ತಾಲ್ಲೂಕಿನಲ್ಲಿ ಕೆಲವೇ ಗಂಟೆಗಳಲ್ಲಿ 72.25 ಮಿ.ಮೀ. ವರ್ಷಧಾರೆ

ಬಿ.ಪಿ.ಸುಭಾನ್



ಜಗಳೂರು, ಆ. 14 - ತಾಲೂಕಿನಾದ್ಯಂತ ಬುಧವಾರ ಬೆಳಗಿನ ಜಾವ 3ರಿಂದ 5.30ರವರೆಗೆ ಸುರಿದ ಆಶ್ಲೇಷ ಮಳೆಯ ಆರ್ಭಟಕ್ಕೆ ಬಹುತೇಕ ಕೆರೆ ಹಾಗೂ ಗೋಕಟ್ಟೆಗಳಿಗೆ ಹೆಚ್ಚಿನ ನೀರು ಬಂದು ರೈತರ ಮುಖದಲ್ಲಿ ಮಂದಹಾಸ ಮೂಡಿದೆ.

ಜಗಳೂರು ಮಳೆ ಮಾಪನ ಕೇಂದ್ರದ ವ್ಯಾಪ್ತಿಯಲ್ಲಿ ನಿನ್ನೆ ಒಂದೇ ದಿನ ರಾತ್ರಿ 119.8 ಮಿಲಿಮೀಟರ್ ಮಳೆಯಾಗಿದೆ. ಉಳಿದಂತೆ ಮುಗ್ಗಿದರಾಗಿಹಳ್ಳಿ ಮಳೆ ಮಾಪನ ಕೇಂದ್ರದ ವ್ಯಾಪ್ತಿಯಲ್ಲಿ 51 ಮಿ.ಮೀ., ಸಂಗೇನಹಳ್ಳಿ ಮಳೆ ಮಾಪನ ಕೇಂದ್ರದ ವ್ಯಾಪ್ತಿಯಲ್ಲಿ 45.8 ಮಿ.ಮೀ., ಸೊಕ್ಕೆ ಹೋಬಳಿ ವ್ಯಾಪ್ತಿಯಲ್ಲಿ 72.4 ಮಿ.ಮೀ. ಮಳೆಯಾಗಿದೆ. ತಾಲ್ಲೂಕಿನಾದ್ಯಂತ ಸರಾಸರಿ ನಿನ್ನೆ ರಾತ್ರಿ 72.25 ಮಿ.ಮೀ. ಮಳೆಯಾಗಿದೆ.

ಜಗಳೂರು ಪಟ್ಟಣದ ಕೆರೆಗೆ ಅತಿ ಹೆಚ್ಚು ನೀರು ಹರಿದು ಬರುತ್ತಿದೆ. ಜಾಜಿ ಹಳ್ಳ ಕಾಲುವೆ, ಗಿಡ್ಡನಕಟ್ಟೆ ಹಳ್ಳ ಮತ್ತು ಕಣಕುಪ್ಪೆ ಕಾಲುವೆಗಳಿಂದ ಬೃಹತ್ ಪ್ರಮಾಣದಲ್ಲಿ ನೀರು ಜಗಳೂರು ಕೆರೆಗೆ ಹರಿದು ಬರುತ್ತಿದೆ. ಕೆರೆ ತುಂಬಿಸುವ ಯೋಜನೆಯ ಅಡಿ ಜಗಳೂರು ಪಟ್ಟಣದ ಕೆರೆಗೆ ಹೆಚ್ಚಿನ ನೀರು ಬಂದಿದೆ. ಇದರ ಜೊತೆಗೆ ಆಶ್ಲೇಷ ಮಳೆಯ ಸಮೃದ್ಧ ಮಳೆಯಿಂದಾಗಿ ಜಗಳೂರು ಕೆರೆಯಲ್ಲಿ ಹೆಚ್ಚಿನ ನೀರು ಸಂಗ್ರಹವಾಗುತ್ತಿದೆ.

ತಾಲ್ಲೂಕಿನ ಮತ್ತೊಂದು ಬೃಹತ್ ಗಡಿಮಾಕುಂಟೆ ಕೆರೆಯಲ್ಲಿ ನಿನ್ನೆ ರಾತ್ರಿ ಸುರಿದ ಒಂದೇ ಮಳೆಗೆ ಸುಮಾರು 14 ಅಡಿಯಷ್ಟು ನೀರು ಸಂಗ್ರಹವಾಗಿದೆ ಎಂದು ಈ ಭಾಗದ ರೈತರು ಹರ್ಷ ವ್ಯಕ್ತಪಡಿಸಿದ್ದಾರೆ. 2004ರಲ್ಲಿ ಆಶ್ಲೇಷ ಮಳೆಗೆ ಒಂದೇ ದಿನ ಅತಿ ಹೆಚ್ಚಿನ ನೀರು ಬಂದು ಕೆರೆ ಏರಿ ಒಡೆದು ಹಾನಿಯಾಗಿತ್ತು. ಅಂದಿನ ಶಾಸಕ ಟಿ. ಗುರುಸಿದ್ದನಗೌಡ ಅವರು ಸಮರೋಪಾದಿಯಲ್ಲಿ ಕೆರೆ ಏರಿ ದುರಸ್ತಿಗೊಳಿಸಿ ನೀರು ಸಂಗ್ರಹಕ್ಕೆ ನೆರವಾಗಿದ್ದರು. ಅದೇ ರೀತಿ ಈ ವರ್ಷ ಆಶ್ಲೇಷ ಮಳೆಗೆ ಒಂದೇ ದಿನ ಅತಿ ಹೆಚ್ಚಿನ ನೀರು ಸಂಗ್ರಹವಾಗಿದೆ ಎನ್ನುತ್ತಾರೆ ಈ ಭಾಗದ ರೈತರು.

ಮಳೆಗಾಲಕ್ಕೆ ಮುನ್ನವೇ ಹಾಲಿ ಶಾಸಕ ಬಿ.ದೇವೇಂದ್ರಪ್ಪ ಅವರು ಬಿರುಕು ಬಿಟ್ಟಿದ್ದ ಗಡಿಮಾಕುಂಟೆ ಕೆರೆ ಏರಿಯನ್ನು ಸಮರೋಪಾದಿಯಲ್ಲಿ ಕಾಮಗಾರಿ ನಡೆಸಿ ದುರಸ್ತಿಗೊಳಿಸಿದ್ದರಿಂದ ಈ ಬಾರಿ ಹೆಚ್ಚು ನೀರು ಸಂಗ್ರಹವಾಗಿದೆ.

ಉಳಿದಂತೆ ತಾಲ್ಲೂಕಿನ ಹೊಸಕೆರೆ, ಜಮ್ಮಾಪುರ, ಕ್ಯಾಸೇನಹಳ್ಳಿ, ಮಾಚಿಕೆರೆ ಮುಂತಾದ ಕೆರೆಗಳಿಗೆ ಹೆಚ್ಚಿನ ನೀರು ಒಂದೇ ದಿನದಲ್ಲಿ ಸಂಗ್ರಹವಾಗಿದೆ.

ತಾಲ್ಲೂಕಿನ ಸಿದ್ದಿಹಳ್ಳಿಯಲ್ಲಿ ನಿರ್ಮಿಸಲಾಗುತ್ತಿರುವ ನೂತನ ಚೆಕ್ ಡ್ಯಾಮ್ ಸೇರಿದಂತೆ ದೊಣ್ಣೆಹಳ್ಳಿ ಚೆಕ್ ಡ್ಯಾಮ್, ಆಕನೂರ್ ಚೆಕ್ ಡ್ಯಾಮ್, ಬಿಳಿಚೋಡು ಚೆಕ್ ಡ್ಯಾಮ್ ಸೇರಿದಂತೆ ಬಹುತೇಕ ಗೋ ಕಟ್ಟೆಗಳಲ್ಲಿ ನೀರು ಸಂಗ್ರಹವಾಗಿದೆ. 57 ಕೆರೆ ತುಂಬಿಸುವ ಯೋಜನೆ ಅಡಿ ತಾಲ್ಲೂಕಿನ ಬಹುತೇಕ ಕೆರೆಗಳಿಗೆ ನೀರು ಹರಿಸಲಾಗಿತ್ತು. ಇದೀಗ ಬಹಳ ವರ್ಷಗಳ ನಂತರ ಸಮೃದ್ಧ ಆಶ್ಲೇಷ ಮಳೆ ಮಳೆಯಿಂದಾಗಿ ಹೆಚ್ಚಿನ ನೀರು ಸಂಗ್ರಹವಾಗಿದ್ದು, ರೈತರ ಸಂತಸವನ್ನು ಇಮ್ಮಡಿಗೊಳಿಸಿದೆ.

### ಕೆರೆಗಳನ್ನು ವೀಕ್ಷಿಸಿದ ಶಾಸಕ ದೇವೇಂದ್ರಪ್ಪ

ಬುಧವಾರ ಬೆಳಗಿನ ಜಾವ ಸುರಿದ ಭಾರೀ ಮಳೆಯಿಂದ ತಾಲ್ಲೂಕಿನ ಕೆರೆಗಳಿಗೆ ನೀರು ಭರ್ತಿ ಆದ ಹಿನ್ನೆಲೆಯಲ್ಲಿ ಶಾಸಕ ಬಿ. ದೇವೇಂದ್ರಪ್ಪ ಇಂದು ಗಡಿಮಾಕುಂಟೆ ಕೆರೆ ಮತ್ತು ಜಗಳೂರು ಪಟ್ಟಣದ ಕೆರೆಯನ್ನು ವೀಕ್ಷಿಸಿ, ಸಂತಸ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ 'ಜನತಾವಾಣಿ'ಯೊಂದಿಗೆ ಮಾತನಾಡಿದ ಶಾಸಕರು, ಕೆರೆ ತುಂಬಿಸುವ ಯೋಜನೆಯಿಂದ ಮತ್ತು ನಿನ್ನೆ ಸುರಿದ ಮಳೆಯಿಂದಾಗಿ ತಾಲ್ಲೂಕಿನ ಬಹುತೇಕ ಕೆರೆಗಳಿಗೆ ನೀರು ಹರಿದು ಬಂದಿದ್ದು ರೈತರು ಸಂತಸ ಗೊಂಡಿದ್ದಾರೆ. ಮುಂದಿನ ದಿನಗಳಲ್ಲಿ ತಾಲ್ಲೂಕಿನಲ್ಲಿ ಅಂತರ್ಜಲ ಹೆಚ್ಚಾಗಿ ರೈತರ ಬದುಕು ಹಸನಾಗಲಿದೆ ಎಂದು ಹರ್ಷ ವ್ಯಕ್ತಪಡಿಸಿದ್ದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಎಸ್‌ಸಿ ಘಟಕದ ಅಧ್ಯಕ್ಷ ಬಿ.ಮಹೇಶ್ವರಪ್ಪ, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪಲ್ಲಾಗಟ್ಟೆ ಶೇಖರಪ್ಪ, ಉಪನ್ಯಾಸಕ ತಿಪ್ಪೇಸ್ವಾಮಿ, ತಾ.ಪಂ. ಮಾಜಿ ಸದಸ್ಯ ಟಿ.ಚಿತ್ತಪ್ಪ ಮತ್ತಿತರರಿದ್ದರು.



### ಕಾಗಿನೆಲೆ ಶ್ರೀಗಳಿಗೆ ಸ್ವಾಗತ

ಬೆಂಗಳೂರು, ಆ. 14 - ಹರಿದ್ವಾರದಲ್ಲಿ ಶ್ರಾವಣ ಮಾಸದ ಅನುಷ್ಠಾನ ಪೂರ್ಣಗೊಳಿಸಿ ಮಂಗಳವಾರ ಕರ್ನಾಟಕಕ್ಕೆ ಹಿಂದಿರುಗಿದ ಕಾಗಿನೆಲೆ ಕನಕ ಗುರುಪೀಠದ ಶ್ರೀ ನಿರಂಜನಾನಂದಪುರಿ ಸ್ವಾಮೀಜಿಯವರನ್ನು ಬೆಂಗಳೂರಿನಲ್ಲಿ ಕುಂಚಿಟಿಗ ಗುರುಪೀಠದ ಶ್ರೀ ಶಾಂತವೀರ ಸ್ವಾಮೀಜಿ, ಹೊಸದುರ್ಗ ಕನಕ ಶಾಖಾ ಮಠದ ಶ್ರೀ ಈಶ್ವರಾನಂದ ಪುರಿ ಸ್ವಾಮೀಜಿ, ಮಾಜಿ ಸಚಿವ ಎಚ್ ವಿಶ್ವನಾಥ್, ರಾಜ್ಯ ಸರ್ಕಾರದ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷರಾದ ಎಚ್ ಎಂ ರೇವಣ್ಣ ಸೇರಿದಂತೆ ಸಮಾಜದ ಮುಖಂಡರು ಸ್ವಾಗತಿಸಿದರು.

### ಠೇವಣಿ ವಾಪಸ್‌ಗೆ ರಾಜ್ಯದ ನಿರ್ಧಾರ

(1ನೇ ಪುಟದಿಂದ) ಬಂದ ನಂತರ 12 ಕೋಟಿ ರೂ.ಗಳ ಠೇವಣಿ ವಾಪಸ್ ನೀಡಲು ಬ್ಯಾಂಕುಗಳು ನಿರಾಕರಿಸಿದ ನಂತರ ಈ ಕ್ರಮ ತೆಗೆದುಕೊಳ್ಳಲಾಗಿದೆ.

ಬ್ಯಾಂಕ್ ಅಧಿಕಾರಿಗಳ ಜೊತೆ ಈ ಸಂಬಂಧ ನಡೆಸಲಾದ ಭೇಟಿ ಯಾವುದೇ ಫಲ ನೀಡಿಲ್ಲ. ಪ್ರಕರಣ ಈಗ ನ್ಯಾಯಾಲಯದ ಎದುರು ತಲುಪಿದೆ. ಈ ಹಿನ್ನೆಲೆಯಲ್ಲಿ ಠೇವಣಿ ವಾಪಸ್ ಪಡೆಯಲು ನಿರ್ಧರಿಸಲಾಗಿದೆ.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಇರಿಸಿದ್ದ 10 ಕೋಟಿ ರೂ.ಗಳ ಠೇವಣಿ ಹಣ ಸಹ, ಬ್ಯಾಂಕ್ ಅಧಿಕಾರಿಗಳು ಭಾಗಿಯಾದ ಹಗರಣದ ಕಾರಣದಿಂದಾಗಿ ವಾಪಸ್ಸಾಗಿಲ್ಲ ಎಂದು ರಾಜ್ಯ ಸರ್ಕಾರದ ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ಆಡಿಟರ್ ಜನರಲ್ ಸಹ ಈ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಠೇವಣಿಗಳನ್ನು ವಾಪಸ್ ಪಡೆಯಲು ನಿರ್ಧರಿಸಲಾಗಿದೆ ಎಂದು ರಾಜ್ಯ ಹಣಕಾಸು ಕಾರ್ಯದರ್ಶಿ ಪಿ.ಸಿ. ಜಾಫರ್ ಹೊರಡಿಸಿರುವ ಸುತ್ತೋಲೆಯಲ್ಲಿ ತಿಳಿಸಲಾಗಿದೆ. ಈ ಎರಡು ಬ್ಯಾಂಕುಗಳಲ್ಲಿ ಇರಿಸಿರುವ ಠೇವಣಿ ಹಾಗೂ ಹೂಡಿಕೆಗಳನ್ನು ಅಂತ್ಯಗೊಳಿಸಬೇಕು. ಈ ಕುರಿತ ಪ್ರಮಾಣ ಪತ್ರಗಳನ್ನು ಹಣಕಾಸು ಇಲಾಖೆಗೆ ಸೆಪ್ಟೆಂಬರ್ 20ರ ಒಳಗೆ ಸಲ್ಲಿಸಬೇಕು ಎಂದು ರಾಜ್ಯ ಸರ್ಕಾರ ನಿರ್ದೇಶನ ನೀಡಿದೆ.

### ಪರಿಷ್ಕರಣೆ ಬಗ್ಗೆ ಚರ್ಚೆಯಾಗಿಲ್ಲ

(1ನೇ ಪುಟದಿಂದ) ಅವರು, ಗ್ಯಾರಂಟಿ ಯೋಜನೆ ಪರಿಷ್ಕರಣೆ ಬಗ್ಗೆ ನನ್ನ ಅಭಿಪ್ರಾಯವೊಂದೇ ಮುಖ್ಯವಾಗುವುದಿಲ್ಲ. ಒಬ್ಬೊಬ್ಬರು ಒಂದೊಂದು ಹೇಳಿಕೆಗಳನ್ನು ನೀಡುತ್ತಾ ಹೋದರೆ, ಗೊಂದಲ ಉಂಟಾಗುತ್ತದೆ ಎಂದು ಸ್ಪಷ್ಟಪಡಿಸಿದರು. ಒಳಮೀಸಲಾತಿ ಜಾರಿ ಮಾಡುವ ಕುರಿತು ಎಐಸಿಸಿಯವರು ರಾಜ್ಯ ಸರ್ಕಾರಕ್ಕೆ ಯಾವ ನಿರ್ದೇಶನ ನೀಡುತ್ತಾರೆಯೋ, ಅದರ ಪ್ರಕಾರ ಮುಂದುವರಿಯುತ್ತೇವೆ. ಈ ಬಗ್ಗೆ ಹೈಕಮಾಂಡ್ ಹಂತದಲ್ಲಿ ಚರ್ಚೆಯಾಗಬೇಕು ಎಂದು ಪರಮೇಶ್ವರ್ ಇದೇ ಸಂದರ್ಭದಲ್ಲಿ ಹೇಳಿದರು.

ಭೋವಿ ನಿಗಮದ ಮೇಲೆ ಸಿಐಡಿ ದಾಳಿ ನಡೆಸಿರುವ ಕುರಿತು ಪ್ರತಿಕ್ರಿಯಿಸಿದ ಅವರು, ಅಕ್ರಮದ ಬಗ್ಗೆ ತನಿಖೆಗೆ ಆದೇಶಿಸಲಾಗಿತ್ತು. ಇದರ ಭಾಗವಾಗಿ ದಾಳಿ ನಡೆಸಿ ಪರಿಶೀಲನೆ ನಡೆಸಿದ್ದಾರೆ. ಬಿಜೆಪಿ ಅಧಿಕಾರವಧಿಯಲ್ಲಿ ನಡೆದಿರುವ ಎಲ್ಲ ಅಕ್ರಮಗಳ ಬಗ್ಗೆ ತನಿಖೆ ಮಾಡುತ್ತೇವೆ. ಎಲ್ಲವನ್ನು ತಾರ್ಕಿಕ ಅಂತ್ಯಕ್ಕೆ ತರಬೇಕು ಎಂದು ಹೇಳಿದರು.

## ಅಯೋಧ್ಯೆ: ಭಕ್ತಿಪಥ, ರಾಮಪಥ ದೀಪಗಳ ಕಳವು

ಅಯೋಧ್ಯೆ, ಆ. 14 – ಉತ್ತರ ಪ್ರದೇಶದ ರಾಮ ನಗರಿ ಅಯೋಧ್ಯೆಯಲ್ಲಿನ ಭಕ್ತಿಪಥ ಹಾಗೂ ರಾಮಪಥಗಳಲ್ಲಿ ಅಳವಡಿಸಲಾಗಿದ್ದ ದೀಪಗಳನ್ನು ಕಳವು ಮಾಡಲಾಗಿದೆ. 50 ಲಕ್ಷ ರೂ ವೆಚ್ಚದಲ್ಲಿ ದೀಪಗಳನ್ನು ಅಳವಡಿಸಲಾಗಿತ್ತು. ಉನ್ನತ ಭದ್ರತಾ ಪ್ರದೇಶಗಳಲ್ಲಿರುವ ಈ ದೀಪಗಳನ್ನು ಕಳವು ಮಾಡಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

6,400 ರಷ್ಟು ಬಿದಿರು ಹಾಗೂ 96 ಪ್ರೊಜೆಕ್ಟರ್ ದೀಪಗಳನ್ನು ಅಳವಡಿಸಲಾಗಿತ್ತು. ಯಶ್ ಎಂಟರ್‌ಪ್ರೈಸಸ್ ಹಾಗೂ ಕೃಷ್ಣ ಆಟೋಮೊಬೈಲ್ ಸಂಸ್ಥೆಗಳು ಈ ದೀಪಗಳ ಅಳವಡಿಕೆ ಗುತ್ತಿಗೆ ಪಡೆದುಕೊಂಡಿದ್ದವು.

ರಾಮ ಪಥದಲ್ಲಿ 6400 ಬಿದಿರು ದೀಪಗಳು ಹಾಗೂ ಭಕ್ತಿಪಥದಲ್ಲಿ 96 ಪ್ರೊಜೆಕ್ಟರ್ ದೀಪಗಳನ್ನು ಅಳವಡಿಸಲಾಗಿತ್ತು. ಮಾರ್ಚ್ 19 ರವರೆಗೆ ಈ ದೀಪಗಳು ಇದ್ದವು. ಆದರೆ ಮೇ 9ರಂದು ಕೆಲ ದೀಪಗಳು ಕಾಣೆಯಾಗಿವೆ ಎಂದು ದೂರಿನಲ್ಲಿ ಹೇಳಲಾಗಿದೆ. ಈ ಹಿಂದೆಯೇ ದೀಪಗಳು ಕಾಣೆಯಾಗಿದ್ದರೂ, ಈಗ ಕಳವು ಪ್ರಕರಣ ದಾಖಲಿಸಲಾಗಿದೆ.

ಗುರುತಿಸಲಾಗದ ಕಳ್ಳರು 3,800 ಬಿದರು ದೀಪ ಹಾಗೂ 36 ಪ್ರೊಜೆಕ್ಟರ್ ದೀಪಗಳನ್ನು ಕದ್ದಿದ್ದಾರೆ ಎಂದು ದೂರಿನಲ್ಲಿ ಹೇಳಲಾಗಿದೆ.

## ಭ್ರಷ್ಟಾಚಾರ ಪ್ರಕರಣ : ಕೇಜ್ರಿವಾಲ್ ಜಾಮೀನಿಗೆ ಸುಪ್ರೀಂ ಕೋರ್ಟ್ ನಕಾರ



ನವದೆಹಲಿ, ಆ. 14 - ಸಿಬಿಐ ದಾಖಲಿಸಿರುವ ಭ್ರಷ್ಟಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರಿಗೆ ಮಧ್ಯಂತರ ಜಾಮೀನು ನೀಡಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ. ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದಂತೆ ಕೇಜ್ರಿವಾಲ್ ವಿರುದ್ಧ ಭ್ರಷ್ಟಾಚಾರ ಪ್ರಕರಣ ದಾಖಲಿಸಲಾಗಿದೆ.

ಇದೇ ಪ್ರಕರಣಕ್ಕೆ ಸಂಬಂಧಿಸಿದ ಅಕ್ರಮ ಹಣ ಪ್ರಕರಣದಲ್ಲಿ ಕೇಜ್ರಿವಾಲ್ ಅವರಿಗೆ ಮೂರು ಬಾರಿ ಮಧ್ಯಂತರ ಜಾಮೀನು ದೊರೆತಿದೆ. ಭ್ರಷ್ಟಾಚಾರ ಪ್ರಕರಣದಲ್ಲೂ ಜಾಮೀನು ನೀಡಬೇಕು ಎಂದು ಅವರ ಪರ ವಕೀಲರು ಅರ್ಜಿ ದಾಖಲಿಸಿದ್ದರು.

## ರಫ್ತು ಶೇ.1.2ರಷ್ಟು ಇಳಿಕೆ

ನವದೆಹಲಿ, ಆ. 14 - ಜುಲೈ ತಿಂಗಳಲ್ಲಿ ಭಾರತದ ರಫ್ತು ಶೇ. 1.2ರಷ್ಟು ಇಳಿಕೆಯಾಗಿದ್ದು 33.98 ಶತ ಕೋಟಿ ಡಾಲರ್‌ಗಳಿಗೆ ತಲುಪಿದೆ ಎಂದು ಕೇಂದ್ರ ಸರ್ಕಾರ ಬಿಡುಗಡೆ ಮಾಡಿರುವ ಮಾಹಿತಿ ತಿಳಿಸಿದೆ.

ಆಮದು ಶೇ.7.45 ರಷ್ಟು ಹೆಚ್ಚಾಗಿ 57.48 ಶತಕೋಟಿ ಡಾಲರ್‌ಗಳಿಗೆ ತಲುಪಿದೆ. ಇದರಿಂದಾಗಿ ವಿನಿಮಯ ಕೊರತೆ 23.5 ಶತಕೋಟಿ ಡಾಲರ್ ಆಗಿದೆ.

## ಅಂಬ್ಲಿ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ



**ಹರಪನಹಳ್ಳಿ**

ಹರಪನಹಳ್ಳಿ, ಆ.14- ಅಂಬ್ಲಿ ದೊಡ್ಡ ಭರ್ಮಪ್ಪ ಪ್ರಥಮ ದರ್ಜೆ ಕಾಲೇಜಿನ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಸಿ. ಮೋಹನರೆಡ್ಡಿ ಹಾಗೂ ಎಸ್.ಎಸ್.ಎಚ್. ಜೈನ್ ಪಿಯುಸಿ ಕಾಲೇಜಿನ ಅಧ್ಯಕ್ಷರಾಗಿ ಆಯ್ಕೆಯಾದ ವಿ.ವಿ.ಸಂಘದ ಉಪಾಧ್ಯಕ್ಷ ಜಾನೆಕುಂಟೆ ಬಸವರಾಜ ಅವರು ನಿನ್ನೆ ಅಧಿಕಾರ ಸ್ವೀಕರಿಸಿದರು.

ಇದೇ ಸಂದರ್ಭದಲ್ಲಿ ಕಾಲೇಜಿನಲ್ಲಿ ಅಂತಿಮ ವರ್ಷದ ಪದವಿ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಸಮಾರಂಭವು ಅದ್ದೂರಿಯಾಗಿ ನಡೆಯಿತು.

ಅಂಬ್ಲಿ ಮಂಜುನಾಥ, ಶರಣಗೌಡ ಪಾಟೀಲ್, ಐಗೋಳ್ ಚಿದಾನಂದ, ಮಾಲತೇಶ್, ವೀರಭದ್ರಸ್ವಾಮಿ, ಚಿರಸ್ತಹಳ್ಳಿ ಮಲ್ಲಿಕಾರ್ಜುನಸ್ವಾಮಿ ಕಲ್ಮಠ, ಆರುಂಡಿ ನಾಗರಾಜ್, ಕೊಟ್ರೇಶ್, ಪ್ರಾಚಾರ್ಯ ಎಸ್.ಎಂ. ಸಿದ್ಧಲಿಂಗಮೂರ್ತಿ, ಬಸವರಾಜ, ವಿದ್ಯಾರ್ಥಿ ಸಂಘದ ಕಾರ್ಯದರ್ಶಿ ರೇಣುಕಪ್ರಸಾದ್ ಕಲ್ಮಠ ಸೇರಿದಂತೆ ಇತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಫೋನ್‌ನಲ್ಲಿ ತ್ರಿವಳಿ ತಲಾಕ್ : ಪಾಕ್ ಮಹಿಳೆಯೊಂದಿಗೆ ಮದುವೆ; ಬಂಧನ

ಜೈಪುರ, ಆ. 14 – ಕುವೈತ್‌ನಿಂದ ಫೋನ್‌ನಲ್ಲಿ ಪತ್ನಿಗೆ ತ್ರಿವಳಿ ತಲಾಕ್ ನೀಡಿದ ರಾಜಸ್ಥಾನದ 35 ವರ್ಷದ ವ್ಯಕ್ತಿಯನ್ನು, ಅಲ್ಲಿಂದ ವಾಪಸ್ಸಾದ ತಕ್ಷಣ ವಿಮಾನ ನಿಲ್ದಾಣದಲ್ಲಿ ಬಂಧಿಸಲಾಗಿದೆ. ಕುವೈತ್‌ನಲ್ಲಿ ಕೆಲಸ ಮಾಡುತ್ತಿದ್ದ ಈ ವ್ಯಕ್ತಿ, ತಲಾಕ್ ನೀಡಿದ ನಂತರ ಪಾಕಿಸ್ತಾನದ ಮಹಿಳೆಯೊಬ್ಬರನ್ನು ಮದುವೆಯಾಗಿದ್ದ ಎನ್ನಲಾಗಿದೆ.

ರೆಹಮಾನ್ ಅವರು ಸಾಮಾಜಿಕ ಮಾಧ್ಯಮದ ಮೂಲಕ ಪಾಕಿಸ್ತಾನದ ಮೆಹವಿಶ್ ಎಂಬ ಮಹಿಳೆಯ ಸಂಪರ್ಕಕ್ಕೆ ಬಂದಿದ್ದರು. ನಂತರ ಅವರ ಜೊತೆ ಸೌದಿ ಅರೇಬಿಯಾದಲ್ಲಿ ಮದುವೆಯಾಗಿದ್ದರು. ಕಳೆದ ತಿಂಗಳು ಪ್ರವಾಸಿ ವೀಸಾ ಮೂಲಕ ಭಾರತಕ್ಕೆ ಬಂದಿದ್ದ ಮೆಹವಿಶ್, ನಂತರ ರೆಹಮಾನ್ ತಂದೆಯ ಮನೆಯಲ್ಲಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಈ ನಡುವೆ ಪತಿ ರೆಹಮಾನ್ ವಿರುದ್ಧ ಎಫ್.ಐ.ಆರ್. ದಾಖಲಿಸಿದ್ದ ಪತ್ನಿ ಫರಿದಾ ಬಾನು, ಗಂಡ ದೂರವಾಣಿ ಮೂಲಕ ತ್ರಿವಳಿ ತಲಾಕ್ ನೀಡಿದ್ದಾಗಿ ಹೇಳಿದ್ದರು. ವರದಕ್ಷಿಣೆಗಾಗಿ ಪೀಡಿಸುತ್ತಿದ್ದುದಾಗಿಯೂ ಆರೋಪಿಸಿದ್ದರು. ಸೋಮವಾರ ರೆಹಮಾನ್ ಕುವೈತ್‌ನಿಂದ ಜೈಪುರ ವಿಮಾನ ನಿಲ್ದಾಣಕ್ಕೆ ಬಂದಾಗ ರಾಜಸ್ಥಾನ ಪೊಲೀಸರು ಬಂಧಿಸಿದ್ದಾರೆ.

2011ರಲ್ಲಿ ರೆಹಮಾನ್ ಹಾಗೂ ಫರಿದಾ ಬಾನು ಮದುವೆಯಾಗಿತ್ತು. ಉಭಯರಿಗೆ ಒಂದು ಗಂಡು ಹಾಗೂ ಒಂದು ಹೆಣ್ಣು ಮಗು ಇದೆ. ರೆಹಮಾನ್ ಕುವೈತ್‌ಗೆ ಕೆಲಸಕ್ಕಾಗಿ ತೆರಳಿದ್ದರು.

## ಕೊಮಾರನಹಳ್ಳಿಯಲ್ಲಿ ನಾಳೆ ಮಹಾದ್ವಾರ ಉದ್ಘಾಟನೆ

ಮಲೇಬೆನ್ನೂರು, ಆ. 14 - ಕೊಮಾರನಹಳ್ಳಿ ಗ್ರಾಮದ ಶ್ರೀ ಬೀರಲಿಂಗೇಶ್ವರ ದೇವಸ್ಥಾನದ ನೂತನ ಮಹಾದ್ವಾರ ಉದ್ಘಾಟನೆ ಮತ್ತು ಕಳಸ ಪ್ರತಿಷ್ಠಾಪನೆ ಸಮಾರಂಭವು ವಿವಿಧ ಮಠಾಧೀಶರ ಸಾನ್ನಿಧ್ಯದಲ್ಲಿ ನಾಡಿದ್ದು ದಿನಾಂಕ 16ರ ಶುಕ್ರವಾರ ಬೆಳಗ್ಗೆ 9.30ಕ್ಕೆ ಜರುಗಲಿದೆ.

ಕಾರ್ಯಕ್ರಮದ ಅಂಗವಾಗಿ ಗುರುವಾರ (ಇಂದು) ಮಧ್ಯಾಹ್ನ 12 ಗಂಟೆಗೆ ನೂತನ ಪಂಚ ಕಳಸಗಳ ಪುರ ಪ್ರವೇಶ ಮೆರವಣಿಗೆಯೊಂದಿಗೆ ನಡೆಯಲಿದ್ದು, ಸಂಜೆ 6 ಗಂಟೆಗೆ ವಿವಿಧ ಊರುಗಳಿಂದ ಆಗಮಿಸುವ ದೇವರುಗಳಿಗೆ ಸ್ವಾಗತ ಕಾರ್ಯಕ್ರಮದ ನಂತರ ಗ್ರಾಮದ ದೇವರುಗಳ ಶೋಭಾಯಾತ್ರೆಯೊಂದಿಗೆ ಗಂಗೆ ಪೂಜೆ ಹಾಗೂ 108 ಕುಂಭಗಳ ಮೇಳ ನಡೆಯಲಿದೆ. ರಾತ್ರಿ 9 ರಿಂದ ರಾಷ್ಟ್ರ ಮಟ್ಟದ ಜಾನಪದ ಕಲಾವಿದ ಓಂ ಶಿವಮೇಳ ಅವರಿಂದ ಡೊಳ್ಳಿನ ಪದ, ಸಾಂಸ್ಕೃತಿಕ ಕಾರ್ಯಕ್ರಮ ಇರುತ್ತದೆ.

## ನಗರದಲ್ಲಿ ಇಂದು ಜಿಲ್ಲಾಡಳಿತದಿಂದ ಸ್ವಾತಂತ್ರ್ಯ ದಿನಾಚರಣೆ

ಜಿಲ್ಲಾಡಳಿತ ವತಿಯಿಂದ ಇಂದು ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲಾಗುತ್ತಿದ್ದು, ಜಿಲ್ಲಾ ಕ್ರೀಡಾಂಗಣದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಅವರು ಬೆಳಗ್ಗೆ 9 ಗಂಟೆಗೆ ರಾಷ್ಟ್ರಧ್ವಜಾರೋಹಣ ನೆರವೇರಿಸುವರು. ಶಾಸಕ ಶಾಮನೂರು ಶಿವಶಂಕರಪ್ಪ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಸಂಸದರಾದ ಡಾ. ಪ್ರಭಾ ಮಲ್ಲಿಕಾರ್ಜುನ್, ಶಾಸಕ ಕೆ.ಎಸ್. ಬಸವಂತಪ್ಪ, ಮೇಯರ್ ಬಿ.ಹೆಚ್. ವಿನಾಯಕ, ವಿಧಾನ ಪರಿಷತ್ ಸದಸ್ಯ ಕೆ. ಅಬ್ದುಲ್ ಜಬ್ಬಾರ್, ದೂಡಾ ಅಧ್ಯಕ್ಷ ಕೆ. ದಿನೇಶ್ ಶೆಟ್ಟಿ, ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಬಿ. ಸುರೇಶ್ ಇಟ್ನಾಳ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ಉಪಸ್ಥಿತರಿರುವರು.

ಸಂಜೆ 6 ಗಂಟೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಕುವೆಂಪು ಕನ್ನಡ ಭವನದಲ್ಲಿ ಶಾಲಾ ಮತ್ತು ಕಾಲೇಜು ವಿದ್ಯಾರ್ಥಿ-ವಿದ್ಯಾರ್ಥಿನಿಯರಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ.

## ಜಮ್ಮು : ಕಾರ್ಯಾಚರಣೆಯಲ್ಲಿ ಸೈನ್ಯದ ಕ್ಯಾಪ್ಟನ್ ಹುತಾತ್ಮ

ಜಮ್ಮು, ಆ. 14 - ಜಮ್ಮು ವಲಯದ ದೊಡಾ ಜಿಲ್ಲೆಯಲ್ಲಿ ನಡೆಸಲಾಗುತ್ತಿರುವ ಕಾರ್ಯಾಚರಣೆಯಲ್ಲಿ ಸೈನ್ಯದ ಕ್ಯಾಪ್ಟನ್ ಒಬ್ಬರು ಹುತಾತ್ಮರಾಗಿದ್ದಾರೆ. ಗುಂಡಿನ ಚಕಮಕಿಯಲ್ಲಿ ಓರ್ವ ನಾಗರಿಕ ಸಹ ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಸ್ವಾತಂತ್ರ್ಯ ದಿನಾಚರಣೆಯ ಮುನ್ನ ದಿನ ಜಮ್ಮು ವಲಯದಲ್ಲಿ ಕಾರ್ಯಾಚರಣೆ ನಡೆಸಲಾಗಿತ್ತು. ಈ ಕಾರ್ಯಾಚರಣೆಯಲ್ಲಿ ನಾಲ್ವರು ಉಗ್ರರು ಹತರಾಗಿರುವ ಶಂಕೆ ಇದೆ.

## ಕೇಂದ್ರ ಹಾಗೂ ರಾಜ್ಯ ಪಡೆಗಳಿಗೆ 1,037 ಪದಕ

ನವದೆಹಲಿ, ಆ. 14 – ಕೇಂದ್ರ ಹಾಗೂ ರಾಜ್ಯ ಪಡೆಗಳ 1,037 ಪೊಲೀಸ್ ಸಿಬ್ಬಂದಿಗೆ ಕೇಂದ್ರ ಸರ್ಕಾರ ಸೇವಾ ಪದಕಗಳನ್ನು ಪ್ರಕಟಿಸಿದೆ. ಸ್ವಾತಂತ್ರ್ಯೋತ್ಸವದ ಮುನ್ನಾ ದಿನದಂದು ಪದಕಗಳನ್ನು ಪ್ರಕಟಿಸಲಾಗಿದೆ.

ರಾಷ್ಟ್ರಪತಿಗಳ ಶೌರ್ಯ ಪ್ರಶಸ್ತಿಯನ್ನು 214 ಸಿಬ್ಬಂದಿ ಹಾಗೂ ಶೌರ್ಯ ಪ್ರಶಸ್ತಿಯನ್ನು 231 ಸಿಬ್ಬಂದಿ ಪಡೆದಿದ್ದಾರೆ.

ಸಿ.ಆರ್.ಪಿ.ಎಫ್. ಗರಿಷ್ಠ 52 ಪದಕಗಳನ್ನು ಪಡೆದುಕೊಂಡಿದೆ. ಜಮ್ಮು ಮತ್ತು ಕಾಶ್ಮೀರ ಪೊಲೀಸರು 31 ಹಾಗೂ ಉತ್ತರ ಪ್ರದೇಶ ಮತ್ತು ಮಹಾರಾಷ್ಟ್ರದ ಪೊಲೀಸರು ತಲಾ 17 ಹಾಗೂ ಛತ್ತೀಸ್‌ಘಡದ ಪೊಲೀಸರು 15 ಪದಕಗಳನ್ನು ಪಡೆದಿದ್ದಾರೆ.

## 19 ಪೊಲೀಸರಿಗೆ ರಾಷ್ಟ್ರಪತಿ ಪದಕ

ಬೆಂಗಳೂರು, ಆ.14- ಪೊಲೀಸ್ ಇಲಾಖೆಯಲ್ಲಿ ಶ್ಲಾಘನೀಯ ಸೇವೆ ಸಲ್ಲಿಸಿದ ರಾಜ್ಯದ ಒಬ್ಬರು ಎಡಿಜಿಪಿ ಸೇರಿದಂತೆ 19 ಪೊಲೀಸರಿಗೆ 2024ನೇ ಸಾಲಿನ ರಾಷ್ಟ್ರಪತಿ ಪದಕ ಲಭಿಸಿದೆ.

ಸ್ವಾತಂತ್ರ್ಯೋತ್ಸವ ದಿನಾಚರಣೆ ಸಂದರ್ಭದಲ್ಲಿ ರಾಷ್ಟ್ರಪತಿಯವರ ವಿಶಿಷ್ಟ ಸೇವಾ ಪದಕ ಹಾಗೂ ಶ್ಲಾಘನೀಯ ಸೇವಾ ಪದಕ ಪುರಸ್ಕೃತ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿ ಹೆಸರು ಪ್ರಕಟಿಸಲಾಗಿದೆ.

**ವಿಶಿಷ್ಟ ಸೇವಾ ಪದಕ ಪುರಸ್ಕೃತರು:** ಎಂ.ಚಂದ್ರಶೇಖರ್, ಎಡಿಜಿಪಿ, ಆಂತರಿಕಾ ಭದ್ರತಾ ವಿಭಾಗ(ಐಎಸ್‌ಡಿ), ಬೆಂಗಳೂರು

**ಶ್ಲಾಘನೀಯ ಸೇವಾ ಪದಕ ಪುರಸ್ಕೃತರು:** ಜೋಶಿ ಶ್ರೀನಾಥ್ ಮಹಾದೇವ, ಎಸ್‌ಪಿ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು. ಸಿ.ಕೆ.ಬಾಬಾ, ಎಸ್‌ಪಿ, ಬೆಂಗಳೂರು ಗ್ರಾಮಾಂತರ . ರಾಮಗೊಂಡ ಬಿ. ಬಸರಗಿ, ಹೆಚ್ಚುವರಿ ಎಸ್‌ಪಿ, ಬಳ್ಳಾರಿ. ಎಂ.ಡಿ. ಶರತ್, ಎಸ್‌ಪಿ, ಸಿಐಡಿ, ಬೆಂಗಳೂರು. ವಿ.ಸಿ. ಗೋಪಾಲರೆಡ್ಡಿ, ಡಿಸಿಪಿ, ಸಿಎಆರ್ ಪಶ್ಚಿಮ, ಬೆಂಗಳೂರು ನಗರ. ಪಿ.ಮುರಳೀಧರ, ಡಿವೈಎಸ್‌ಪಿ, ಚಿಂತಾಮಣಿ ಉಪ ವಿಭಾಗ, ಚಿಕ್ಕಬಳ್ಳಾಪುರ. ಕೆ.ಸಿ. ಗಿರಿ, ಡಿವೈಎಸ್‌ಪಿ, ಚನ್ನಪಟ್ಟಣ ಉಪ ವಿಭಾಗ, ರಾಮನಗರ. ಬಸವೇಶ್ವರ, ಸಹಾಯಕ ನಿರ್ದೇಶಕ, ರಾಜ್ಯ ಗುಪ್ತವಾರ್ತೆ, ಕಲಬುರಗಿ. ಕೆ.ಬಸವರಾಜ, ಡಿವೈಎಸ್‌ಪಿ, ಐಎಸ್‌ಡಿ, ಕಲಬುರಗಿ. ಎನ್. ಮಹೇಶ್, ಸಹಾಯಕ ನಿರ್ದೇಶಕ, ರಾಜ್ಯ ಗುಪ್ತವಾರ್ತೆ, ಬೆಂಗಳೂರು. ರವೀಶ್ ಎಸ್. ನಾಯಕ್, ಎಸಿಪಿ, ಸಿಸಿಆರ್‌ಬಿ, ಮಂಗಳೂರು ನಗರ. ಜಿ.ಪ್ರಭಾಕರ್, ಎಸಿಪಿ, ಸಂಚಾರ ಯೋಜನೆ, ಬೆಂಗಳೂರು. ಎಚ್.ಆರ್.ಹರೀಶ್, ಸಹಾಯಕ ಕಮಾಂಡೆಂಟ್, 11ನೇ ಪಡೆ, ಕೆಎಸ್‌ಆರ್‌ಪಿ, ಹಾಸನ. ಎಸ್.ಮಂಜುನಾಥ್, ಆರ್‌ಪಿಐ, 3ನೇ ಪಡೆ, ಕೆಎಸ್‌ಆರ್‌ಪಿ, ಬೆಂಗಳೂರು. ಮಂಜುನಾಥ ಎಸ್. ಕಲ್ಲೇದೇವರ್, ಪೊಲೀಸ್ ಸಬ್ ಇನ್‌ಸ್ಪೆಕ್ಟರ್, ಎಫ್‌ಪಿಬಿ, ದಾವಣಗೆರೆ. ಗೌರಮ್ಮ, ಎಎಸ್‌ಐ, ಸಿಐಡಿ, ಬೆಂಗಳೂರು. ಮಹಬೂಬ್‌ಸಾಹೇಬ ಎನ್. ಮುಜಾವರ್, ಸಿಎಚ್‌ಸಿ, ಮನಗುಳಿ ಪೊಲೀಸ್ ಠಾಣೆ, ವಿಜಯಪುರ. ವಿಜಯಕುಮಾರ್, ಸಿಎಚ್‌ಸಿ, ಡಿಸಿಆರ್‌ಬಿ, ಉಡುಪಿ

## ಜಗಳೂರಿನಲ್ಲಿ ಭೀಕರ ರಸ್ತೆ ಅಪಘಾತದಲ್ಲಿ ಇಬ್ಬರು ಸಾವು

ಜಗಳೂರು, ಆ.14- ಪಟ್ಟಣದ ಹೃದಯ ಭಾಗವಾದ ಮಹಾತ್ಮ ಗಾಂಧಿ ವೃತ್ತದ ಎನ್.ಎಂ.ಸಿ ಹೋಟೆಲ್ ಬಳಿ ಖಾಸಗಿ ಬಸ್ಸು, ಮುಂದೆ ಚಲಿಸುತ್ತಿದ್ದ ಬೈಕ್‌ಗೆ ಗುದ್ದಿದ ಪರಿಣಾಮ ಬೈಕ್‌ನಲ್ಲಿದ್ದ ಇಬ್ಬರೂ ಬೈಕ್ ಸಮೇತ ಬಸ್ಸಿನ ಚಕ್ರಕ್ಕೆ ಸಿಲುಕಿ ಸ್ಥಳದಲ್ಲೇ ಸಾವಿಗೀಡಾಗಿದ್ದಾರೆ.

ಪಟ್ಟಣದಲ್ಲಿ ಹಾದು ಹೋಗಿರುವ ಮಲ್ಪೆ-ಮೊಳಕಾಲ್ಮೂರು ಹೆದ್ದಾರಿಯ ಮಹಾತ್ಮ ಗಾಂಧಿ ವೃತ್ತದಿಂದ ಖಾಸಗಿ ಬಸ್ ಎಸ್‌ಆರ್‌ಇ ಚಾಲಕನ ನಿಯಂತ್ರಣ ತಪ್ಪಿ, ಮುಂದೆ ಚಲಿಸುತ್ತಿದ್ದ ಬೈಕ್‌ಗೆ ಬಲವಾಗಿ ಗುದ್ದಿದ್ದು, ತಾಲ್ಲೂಕಿನ ತಮಲೇಹಳ್ಳಿ ಗ್ರಾಮದ ರಾಜು (42), ಓಬಣ್ಣ (60) ಅವರು ಮೃತಪಟ್ಟಿದ್ದಾರೆ.

**ಸಾರ್ವಜನಿಕರು ಆಕ್ರೋಶ:** ಘಟನೆ ನಡೆಯುತ್ತಿದ್ದಂತೆ ಸಾರ್ವಜನಿಕರು ಘಟನಾ ಸ್ಥಳಕ್ಕೆ ಜಮಾಯಿಸಿ ರಸ್ತೆ ಅಗಲೀಕರಣವಾಗದ ಕಾರಣ ಅಪಘಾತ ಸಂಭವಿಸಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಘಟನೆಯ ಸ್ಥಳಕ್ಕೆ ಪೊಲೀಸರು ದಿಢೀರನೆ ಆಗಮಿಸಿ ಘಟನೆ ತಿಳಿಗೊಳಿಸಿ ಬಿಗಿ ಬಂದೋಬಸ್ತ್‌ನೊಂದಿಗೆ ಸಾರ್ವಜನಿಕರನ್ನು ನಿಯಂತ್ರಿಸಿದರು.

**ಶಾಸಕರ ಭೇಟಿ :** ರಸ್ತೆಯಲ್ಲಿ ಅಪಘಾತ ವಿಷಯ ತಿಳಿದ ಶಾಸಕ ಬಿ. ದೇವೇಂದ್ರಪ್ಪ ಅಪಘಾತ ಘಟನಾ ಸ್ಥಳಕ್ಕೆ ಭೇಟಿ ನೀಡಿ, ಶೋಕ ವ್ಯಕ್ತಪಡಿಸಿ ಮೃತರ ಕುಟುಂಬಕ್ಕೆ ಸಾಂತ್ವನ ಹೇಳಿದರು.

ಈ ಹಿಂದೆ ರಸ್ತೆಯು ವಿಸ್ತರಣೆಗೊಂಡಿದ್ದರೆ ಇಂತಹ ಅಪಘಾತ ಸಂಭವಿಸುತ್ತಿರಲಿಲ್ಲ. ಶೀಘ್ರದಲ್ಲಿಯೇ ರಸ್ತೆ ವಿಸ್ತರಣೆ ಮಾಡಲಾಗುವುದು ಎಂದು ತಿಳಿಸಿದರು.


॥ ಶ್ರೀ ಬನಶಂಕರಿದೇವಿ ಪ್ರಸನ್ನ ॥

**ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ**

ಚನ್ನಗಿರಿ ತಾ. ಚಿರಡೋಣಿ ಗ್ರಾಮದ
ದಾವಣಗೆರೆ ತರಳಬಾಳು ಬಡಾವಣೆ ವಾಸಿ
**ಶ್ರೀ ಸಿ.ಜಿ. ಶಿವಲಿಂಗಪ್ಪ (ನಿ. ಪ್ರಾಧ್ಯಾಪಕರು)**
ಇವರು ಮಾಡುವ ವಿಜ್ಞಾಪನೆಗಳು.



ನಿಧನ : 11.08.2024

ದಿನಾಂಕ 11.8.2024ನೇ ಭಾನುವಾರ ಮಧ್ಯಾಹ್ನ 2 ಗಂಟೆಗೆ
ನನ್ನ ಪೂಜ್ಯ ಮಾತೃಶ್ರೀಯವರಾದ
**ಶರಣೆ ಸಿ.ಜಿ. ಗಂಗಮ್ಮನವರು**
ದಿ. ಪುಟ್ಟಪ್ಪಜ್ಜರ ಹಾಲಪ್ಪ ಗೌಡ್ರು ಧರ್ಮಪತ್ನಿ ಲಿಂಗೈಕ್ಯರಾದ
ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**ಕೈಲಾಸ ಶಿವಗಣಾರಾಧನೆಯನ್ನು** ದಿನಾಂಕ :15.08.2024ನೇ ಗುರುವಾರ ಬೆಳಿಗ್ಗೆ 10.30ಕ್ಕೆ ಸಿ.ಜಿ. ಶಿವಲಿಂಗಪ್ಪನವರ ಸ್ವಗೃಹ 12ನೇ ಕ್ರಾಸ್, ತರಳಬಾಳು ಬಡಾವಣೆ ದಾವಣಗೆರೆ ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :
ಶ್ರೀಮತಿ ಪಾರ್ವತಮ್ಮ ಶಿವರುದ್ರಪ್ಪ ಗೌಡ್ರು ಮತ್ತು ಮಕ್ಕಳು ಚಿರಡೋಣಿ,
ಶ್ರೀಮತಿ ಕೆ.ಜಿ. ಶೋಭ ಮತ್ತು ಸಿ.ಜಿ. ಶಿವಲಿಂಗಪ್ಪ ಮತ್ತು ಮಕ್ಕಳು,
ದಿ. ಸಿ.ಸಿ. ಶೈಲ ಮತ್ತು ಸಿ.ಆರ್. ಚಂದ್ರಶೇಖರ್ ಮತ್ತು ಮಕ್ಕಳು ಲಿಂಗದಹಳ್ಳಿ.
ಗೌಡ್ರು ಪುಟ್ಟಪ್ಪಜ್ಜರ ವಂಶಸ್ಥರು ಹಾಗೂ ಬಂಧು-ಮಿತ್ರರು, ಚಿರಡೋಣಿ.

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಬೇಕಾಗಿ ವಿನಂತಿ.



**19ನೇ ವರ್ಷದ ಚಿರಸ್ಮರಣೆ**



**ಹೆಚ್.ಸಿ. ರೂಪಾ,** ಶಿಕ್ಷಕಿ
ಎಂ.ಎ.,ಬಿ.ಎಡ್., ಎಸ್.ವಿ.ಎಸ್. ಪ್ರೌಢಶಾಲೆ, ನಿಟುವಳ್ಳಿ.
ಮರಣ : 15.08.2005
ನೀವು ನಮ್ಮನ್ನಗಲಿ ಇಂದಿಗೆ ಹತ್ತೊಂಬತ್ತು
ವರ್ಷಗಳು ಕಳೆದರೂ ನಿಮ್ಮ ಸವಿನೆನಪು
ನಮ್ಮ ಮನದಾಳದಲ್ಲಿ ಹಚ್ಚಹಸಿರಾಗಿದೆ.
ನಿನ್ನ ಮಾರ್ಗದರ್ಶನದಂತೆ
ಮುನ್ನಡೆಯುತ್ತಿರುವ,
ಸದಾ ನಿಮ್ಮ ಸ್ಮರಣೆಯಲ್ಲಿರುವ...

ಪತಿ : ಬಸವರಾಜು, ಶಿಕ್ಷಕರು
ತಂದೆ : ಹೆಚ್. ಚಂದ್ರಶೇಖರಪ್ಪ, ನಿ. ಶಿಕ್ಷಕರು,
ಮೌನೇಶ್ವರ ಬಡಾವಣೆ, ನಿಟುವಳ್ಳಿ.
ತಾಯಿ : ಅನ್ನಪೂರ್ಣ ಹೆಚ್.ಸಿ.
ತಂಗಿ : ಸುಮ ಹೆಚ್.ಸಿ., ಸಂತೋಷ್ ಬಿ.
ತಮ್ಮಂದಿರು : ಹೆಚ್.ಸಿ. ನರೇಂದ್ರ, ಎಕ್ಸಿಕ್ಯೂಟಿವ್ ಇಂ., ರಾಷ್ಟ್ರೀಯ ಹೆದ್ದಾರಿ, ಚಿತ್ರದುರ್ಗ.
ಶ್ರೀಮತಿ ರೂಪಾ ಕೆ.ಸಿ.
ಹೆಚ್.ಸಿ. ಸಂತೋಷ್, ಸಾಫ್ಟ್‌ವೇರ್ ಇಂ., ಕೆನಡಾ.
ಶ್ರೀಮತಿ ರಂಜಿತ ಹೆಚ್.ಬಿ., ಚಂದನ, ಪೃಥ್ವಿ,
ಪ್ರಯಾಗ, ಶಿವಪ್ರಸಾದ್, ಗೌರಿ
ನುಲೇನೂರು ಗೌಡ್ರ ವಂಶಸ್ಥರು ಹಾಗೂ
ಲೋಕಿಕೆರೆ ಕರೇಗೌಡ್ರ ವಂಶಸ್ಥರು.


Eswar Digitronics
SINCE 1951
ಸ್ವಾತಂತ್ರ್ಯ ದಿನಚರಣೆಯನ್ನು
ಫ್ರೀಡಂ ಸೇಲ್
ಟ್ರಿಪಲ್ ಧಮಾಕದೊಂದಿಗೆ
ಆಚರಿಸೋಣ
73 YEARS OF TRUST
EMI CARD EASY FINANCE BAJAJ FINSERV
Celebrating
FREEDOM SALE
TRIPLE DHAMAKA
0 DOWN PAYMENT
CASHBACK UPTO 20%
INSTANT DISCOUNT UPTO 20% ON CREDIT & DEBIT CARD
UNLEASH THE SPIRIT OF FREEDOM WITH UNBEATABLE DEALS!
CELEBRATE FREEDOM DAY WITH OUR FEEDOM SALE
FREE HOME DELIVERY
SONY MINI LED 65" MODEL NO - XR7 STARTS FROM - 2,19,990/-* INSTANT CASH BACK UPTO 12,500/-
SAMSUNG FREE MUSIC FRAME WORTH Rs 37,990/-* 65" MODEL NO - 65QN85D STARTS FROM - 1,77,490/-* INSTANT CASH BACK UPTO 15,000/-
Haier 75" MODEL NO - 75S800QT (3 YEARS WARRENTY) STARTS FROM -1,19,900/- * INSTANT CASH BACK UPTO 15,000/-
SONY 75" MODEL NO - 75X82L STARTS FROM - 1,54,990/-* INSTANT CASH BACK UPTO 9,000/-
SAMSUNG 75" MODEL NO - 75DU7700 STARTS FROM - 1,25,990/-* INSTANT CASH BACK UPTO 10,000/-
SAMSUNG FAMILY HUB 615 LTR INSTANT CASH BACK UPTO 12,000/- STARTS FROM - 1,96,100/-*
SAMSUNG 653 LTR INSTANT CASH BACK UPTO 10,000/- STARTS FROM - 74,900/-*
Haier 602 LTR SIDE BY SIDE INSTANT CASH BACK UPTO 6,000/- STARTS FROM -70,000/-*
Haier 598 LTR 3 DOOR INSTANT CASH BACK UPTO 8,000/- STARTS FROM - 90,000/-*
Godrej 564 LTR SIDE BY SIDE INSTANT CASH BACK UPTO 12,000/- STARTS FROM -70,000/-*
SAMSUNG FRONT LOAD W/M 12 KG INSTANT CASH BACK UPTO 10,800/- STARTS FROM - 54,000/-*
BOSCH FRONT LOAD W/M 10 KG INSTANT CASH BACK UPTO 4,000/- STARTS FROM - 64,000/-*
LG 11/7 100% DRYER INSTANT CASH BACK UPTO 7,000/- STARTS FROM -64,990/- *
SAMSUNG TOP LOAD W/M 7 KG INSTANT CASH BACK UPTO 900/- STARTS FROM - 19,700/-*
Whirlpool 6.5 KG STARTS FROM - 15,300/-*
DELL Ci3-12TH GEN 8GB/512GB WINDOWS 11 + MOS'21 STARTS FROM - 39,990/-*
hp Ci3-12TH GEN 8GB/512GB WINDOWS 11 + MOS'21 STARTS FROM - 38,990/-*
ASUS AMD R3 8GB/512GB WINDOWS 11 + MOS'21 STARTS FROM - 29,990/-*
hp EPSON PRINTER STARTS FROM - 10,990/-*
SONY SOUND BAR STARTS FROM - 15,990/-*
JBL HOME THEATRE STARTS FROM - 16,990/-*
FABER CHIMNEY COOK TOP STARTS FROM - 22,000/-*
Crompton CHIMNEY HOB STARTS FROM - 35,000/-* WITH FREE INSTALATION *T&C APPLY
SAMSUNG Haier LG STARTS FROM - 5,990/-*
KENT Haier BAJAJ HAVELLS Aquaguard AO Smith
WATER PURIFIER STARTS FROM 8,490/-*
WATER HEATER STARTS FROM 6,500/-*
*T&C APPLY
SONY SAMSUNG BOSCH Haier LG Whirlpool Godrej IFB PHILIPS KENT EUREKA FORBES FABER
Eswar
# 8 & 9, SRI MURUGARAJENDRA COMPLEX,
OPP. JAYADEVA PETROL BUNK, HADADI ROAD,
DAVANGERE - 08192 253411 | +91 90088 33411

# ಅಂಚೆ ಕಟ್ಟಡ ನಿರ್ಮಾಣಕ್ಕೆ ಅನುದಾನ ಒದಗಿಸಿ

## ಅಂಚೆ ಇಲಾಖೆಯ ಜನಸಂಪರ್ಕ ಸಭೆಯಲ್ಲಿ ಪತ್ರಕರ್ತ ಐರಣಿ ಹನುಮಂತಪ್ಪ ಬೇಡಿಕೆ

ಹರಿಹರ, ಆ.14- ನಗರದಲ್ಲಿರುವ ಮೀಸಲು ನಿವೇಶನದಲ್ಲಿ ಹೊಸ ಅಂಚೆ ಕಚೇರಿ ನಿರ್ಮಾಣಕ್ಕೆ ಅಂಚೆ ಇಲಾಖೆಯು ಅನುದಾನ ಬಿಡುಗಡೆ ಮಾಡಬೇಕೆಂದು ಹಿರಿಯ ಪತ್ರಕರ್ತ ಐರಣಿ ಹನುಮಂತಪ್ಪ ಬೇಡಿಕೆ ಇಟ್ಟರು.



ನಗರದ ಮುಖ್ಯ ಅಂಚೆ ಕಚೇರಿಯಲ್ಲಿ ಶನಿವಾರ ನಡೆದ ಅಂಚೆ ಜನಸಂಪರ್ಕ ಅಭಿಯಾನದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಅವರು ಮಾತನಾಡಿದರು.

ನಗರದ ಮುಖ್ಯ ರಸ್ತೆಯಲ್ಲಿರುವ ಮುಖ್ಯ ಅಂಚೆ ಕಚೇರಿ ಕಟ್ಟಡ ಹಲವು ದಶಕಗಳ ಹಿಂದೆ ನಿರ್ಮಿಸಿದ್ದು, ಅದು ಈಗಿನ ಕಾರ್ಯ ಒತ್ತಡಕ್ಕೆ ಸಾಕಾಗುತ್ತಿಲ್ಲ. ಗ್ರಾಹಕರ ವಾಹನ ನಿಲುಗಡೆಗೆ ಅವಕಾಶವಿಲ್ಲ ಮತ್ತು ಗ್ರಾಹಕರಿಗೆ ನಿಲ್ಲಲೂ ಜಾಗವಿಲ್ಲದಂತೆ ಕಿಷ್ಕಿಂಧೆಯಾಗಿದೆ.

ಆಧಾರ್ ಕಾರ್ಡ್ ಹೊಸದಾಗಿ ಪಡೆಯಲು, ತಿದ್ದುಪಡಿ ಮಾಡಿಸಲು ಹಾಗೂ ಇತರೆ ಹತ್ತಾರು ಸೇವೆ ಪಡೆಯಲು ಬರುವವರಿಗೆ ನಿತ್ಯವೂ ಕಿರಿಕಿರಿಯಾಗುತ್ತಿದೆ. ಆದ್ದರಿಂದ ಭಾರತ್ ಆಯಿಲ್ ಮಿಲ್ ಕಾಂಪೌಂಡ್‌ನಲ್ಲಿರುವ ವಿಶಾಲ ನಿವೇಶನದಲ್ಲಿ ಸುಸಜ್ಜಿತ ಅಂಚೆ ಕಚೇರಿ ಕಟ್ಟಡ ನಿರ್ಮಿಸಬೇಕೆಂದರು.

ಭಾರತ್ ಆಯಿಲ್ ಮಿಲ್ ಕಾಂಪೌಂಡ್‌ನಲ್ಲಿರುವ ನಿವೇಶನದಲ್ಲಿ ಕಚೇರಿಗೆ ಹೊಸ ಕಟ್ಟಡ ನಿರ್ಮಿಸಲು ಅನುದಾನಕ್ಕೆ ಇಲಾಖೆಯ ಹಿರಿಯರ ಗಮನ ಸೆಳೆಯಲಾಗಿದೆ. ಅನುದಾನ ಬಿಡುಗಡೆಯಾದರೆ ಆ ಕಾರ್ಯ ನೆರವೇರಲಿದೆ ಎಂದು ಉದ್ಘಾಟಿಸಿದ ದಾವಣಗೆರೆ ವಿಭಾಗದ ಅಂಚೆ ಅಧೀಕ್ಷಕ ಚಂದ್ರಶೇಖರ್ ಹೇಳಿದರು.

ವ್ಯವಹಾರ, ವಹಿವಾಟಿನಲ್ಲಿ ದಾವಣಗೆರೆ ವಿಭಾಗವು ರಾಜ್ಯದಲ್ಲಿ ಹಾಗೂ ಹರಿಹರ ಉಪ ವಿಭಾಗವು ದಾವಣಗೆರೆ ವಿಭಾಗದಲ್ಲಿ ಉತ್ತಮ ಸಾಧನೆ ಮಾಡಿದೆ. ಬ್ಯಾಂಕಿಂಗ್ ಹಾಗೂ ಇತರೆ ಆರ್ಥಿಕ ಚಟುವಟಿಕೆಗಳನ್ನು ನಡೆಸುತ್ತಾ ಅಂಚೆ ಇಲಾಖೆ ಜನರಿಗೆ ಹತ್ತಿರವಾಗುತ್ತಿದೆ ಎಂದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಎಂಕೆಇಟಿ ಸಿಬಿಎಸ್‌ಇಸಿ ಶಾಲೆ ಪ್ರಾಚಾರ್ಯ ಮಂಜುನಾಥ ಕುಲಕರ್ಣಿ ಮಾತನಾಡಿ, ಅಂಚೆ ಬಟವಾಡೆಗೆ ಸೀಮಿತವಾಗಿದ್ದ ಅಂಚೆ ಇಲಾಖೆ ಈಗ ವಿಮೆ, ಬ್ಯಾಂಕಿಂಗ್, ನಿವೃತ್ತರಿಗೆ, ಮಹಿಳೆ, ಮಕ್ಕಳಿಗೆ ಹೆಚ್ಚು ವರಮಾನದ ಠೇವಣಿ, ಮಾಸಿಕ ಪಾವತಿಯ ಯೋಜನೆಗಳನ್ನು ರೂಪಿಸಿದೆ. ಹಣ ಪಡೆದ ಹಲವು ಖಾಸಗಿ ಫೈನಾನ್ಸ್ ಸಂಸ್ಥೆಗಳು ಜನರಿಗೆ ಮೋಸ ಮಾಡಿವೆ, ಆದರೆ ಅಂಚೆ ಇಲಾಖೆಯು ದೇಶದ ಜನರ ವಿಶ್ವಾಸ ಹೊಂದಿದೆ ಎಂದರು.

ಮುಖ್ಯ ಅಂಚೆ ಪಾಲಕ ಆರ್. ಶ್ರೀನಿವಾಸ್ ರಾವ್, ಸಹಾಯಕ ಅಂಚೆ ಅಧೀಕ್ಷಕ ಜೆ.ಎಸ್. ಗುರುಪ್ರಸಾದ್, ಕೆ.ಎಂ. ನರೇಂದ್ರನಾಯ್ಕ, ಇಂಡಿಯನ್ ಪೋಸ್ಟ್ ಪೇಮೆಂಟ್ಸ್ ಬ್ಯಾಂಕ್ ವ್ಯವಸ್ಥಾಪಕ ಶ್ರೀನಿವಾಸ್ ಮಾತನಾಡಿದರು. ಸಾಧಕ ಸಿಬ್ಬಂದಿಗೆ ಸತ್ಕರಿಸಲಾಯಿತು. ಶ್ವೇತಾ ಶ್ರೀನಿವಾಸ್ ಪ್ರಾರ್ಥಿಸಿದರು. ಕಾವ್ಯ ಸ್ವಾಗತಿಸಿದರು. ಪ್ರದೀಪ್ ನಿರೂಪಿಸಿದರು. ನಿವೃತ್ತ ಅಂಚೆ ಪಾಲಕ ಸಂಗನಾಳಮಠ ಹಾಗೂ ಸಿಬ್ಬಂದಿ ಇದ್ದರು.

# 'ಗುರು' ಎಂದರೆ ಸನ್ಮಾರ್ಗ ತೋರಿಸುವವರು

## ಅಂಧ ಶಾಲೆಯ ಶಿಕ್ಷಕರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಮಹಾವೀರ್ ಕರೆಣ್ಣನವರ್

ದಾವಣಗೆರೆ, ಆ. 14- ಗುರುವೆಂದರೆ ನಮಗೆ ಸನ್ಮಾರ್ಗ ತೋರಿಸುವವರು ಎಂದರ್ಥ. ಸಮಾಜದಲ್ಲಿ ನಮಗೆ ಹೆಜ್ಜೆ ಹೆಜ್ಜೆಗೂ ಗುರುಗಳು ಸಿಗುತ್ತಾರೆ. ಆದರೆ, ನಾವು ಕಲಿಯಲು ಸಿದ್ಧರಿದ್ದರೆ ಮಾತ್ರ ಎಂದು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ನ್ಯಾಯಾಧೀಶರಾದ ಮಹಾವೀರ್ ಕರೆಣ್ಣನವರ್ ಹಿತ ನುಡಿದರು.



ನಗರದ ಸರ್ಕಾರಿ ಅಂಧರ ಶಾಲೆಯ ಶಿಕ್ಷಕರಿಗೆ ಗುರುವಂದನಾ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಶಾಲೆಯಲ್ಲಿ ಆಗಬೇಕಾದ ತುರ್ತು ಕೆಲಸಗಳ ಬಗ್ಗೆ ಮುತುವರ್ಜಿ ವಹಿಸಿ, ಸಂಬಂಧಿಸಿದ ಅಧಿಕಾರಿಗಳನ್ನು ಸ್ಥಳಕ್ಕೆ ಕರೆಸಿ, ಸೂಕ್ತ ನಿರ್ದೇಶನ ನೀಡಿದರು. ಶಾಲೆಯ ಸುತ್ತ ಬೆಳೆದ ಗಿಡಗಳನ್ನು ತೆರವುಗೊಳಿಸಲು ಆದೇಶಿಸಿದರು. ಸಭೆ ಮುಕ್ತಾಯವಾಗುವ ಮುನ್ನವೇ ಸ್ವಚ್ಛತಾ ಕೆಲಸವಾಗಿದ್ದನ್ನು ನೋಡಿ ಜನ ಮುದಗೊಂಡರು.

ಸಾನ್ನಿಧ್ಯ ವಹಿಸಿದ್ದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ವಿಕಲಚೇತನರಿಗೆ ಅನುಕಂಪದ ಬದಲು, ಪ್ರೋತ್ಸಾಹ ಕೊಡಿ. ಅಂಧ ವಿದ್ಯಾರ್ಥಿನಿಯರನ್ನು ಸಮಾಜದ ಮುಖ್ಯವಾಹಿನಿಗೆ ತರಬೇಕೆಂದು ಸಮಾರಂಭದಲ್ಲಿ ಹಾಜರಿದ್ದ ಚಲನಚಿತ್ರ ನಿರ್ದೇಶಕ ರಾಧಾಕೃಷ್ಣ ಪಲ್ಲಕ್ಕಿ ಅವರನ್ನು ಒತ್ತಾಯಿಸಿದರು.

ಅಧ್ಯಕತೆ ವಹಿಸಿದ್ದ ಜವಳಿ ವರ್ತಕ ಬಿ.ಸಿ. ಉಮಾಪತಿ ಯವರು ಅಂಧರಿಗಾಗಿಯೇ ಇರುವ ಬ್ರೈಲ್ ಲಿಪಿ ಪ್ರಿಂಟರ್ ಕೊಡಿಸುವುದಾಗಿ ವಾಗ್ದಾನ ನೀಡಿದರು.

ವರದಿಗಾರರ ಕೂಟದ ಅಧ್ಯಕ್ಷ ನಾಗರಾಜ ಬಡದಾಳ್ ಮಾತನಾಡಿ, ವಾಸುದೇವ ರಾಯ್ಕರ್ ಅವರು ಈ ವರ್ಷ ಅಂಧ ಮಕ್ಕಳಿಗೆ ಹಾಸಿಗೆ, ಹೊದಿಕೆಗಳನ್ನು ಕೊಟ್ಟಿದ್ದಾರೆ. ಮುಂದಿನ ವರ್ಷ ಅವರ ವಿವಾಹದ 25 ವರ್ಷಗಳಾದ ನೆನಪಲ್ಲಿ 25 ಜೋಡಿಗಳಿಗೆ ಉಚಿತ ವಿವಾಹ ಏರ್ಪಡಿಸಬೇಕೆಂದು ಆಶಿಸಿದರು. ಮರುಕ್ಷಣವೇ ವಾಸುದೇವ ರಾಯ್ಕರ್ ಸಕಾರಾತ್ಮಕವಾಗಿ ಸ್ಪಂದಿಸಿದರು.

ವೇದಿಕೆಯ ಮೇಲೆ ಬೆಂಗಳೂರು ಅಪರ ಜಿಲ್ಲಾಧಿಕಾರಿ ಬಾಲಕೃಷ್ಣ, ಸಿದ್ದರಾಮ ಮಾರಿಹಾಳ, ಎಂ.ಎಸ್. ರಾಮೇಗೌಡ, ಆರ್.ಜಿ. ಶ್ರೀನಿವಾಸಮೂರ್ತಿ, ಯು. ಸಿದ್ದೇಶಿ, ಶ್ರೀಮತಿ ಪ್ರಿಯದರ್ಶಿನಿ, ಹೆಚ್.ಎಂ. ನಾಗರಾಜ್ ಮತ್ತಿತರರು ಉಪಸ್ಥಿತರಿದ್ದರು.

# ಬದಲಾವಣೆಯೂ ಇಲ್ಲ

(1ನೇ ಪುಟದಿಂದ) ಯಾವುದೂ ಇಲ್ಲ ಎಂದು ತಿಳಿಸಿದರು. ಕೆಲ ಸಚಿವರು ಮಾಧ್ಯಮಗಳ ಬಳಿ ಗ್ಯಾರಂಟಿ ಬದಲಾವಣೆ ಬಗ್ಗೆ ಮಾತನಾಡಿರಬಹುದು. ಆದರೆ, ಸರ್ಕಾರದ ಹಂತದಲ್ಲಿ ಈ ಬಗ್ಗೆ ಚರ್ಚೆ ನಡೆದಿಲ್ಲ ಎಂದು ಶಿವಕುಮಾರ್ ಹೇಳಿದರು.

# ಬಾಂಗ್ಲಾ ಅಲ್ಪಸಂಖ್ಯಾತರಿಗೆ ರಕ್ಷಣೆ ಒದಗಿಸಲು ಆಗ್ರಹ



ಹಿಂದೂ ಹಿತರಕ್ಷಣಾ ಸಮಿತಿ ವತಿಯಿಂದ ನಡೆದ ಪ್ರತಿಭಟನೆಯಲ್ಲಿ ಜಿಲ್ಲಾ ಬಿಜೆಪಿ ಅಧ್ಯಕ್ಷ ರಾಜಶೇಖರ್ ನಾಗಪ್ಪ, ನಗರ ಪಾಲಿಕೆ ಸದಸ್ಯರುಗಳಾದ ಪ್ರಸನ್ನ ಕುಮಾರ್, ಶಿವಾನಂದ್, ವೀರೇಶ್ ಪೈಲ್ವಾನ್, ಪಾಲಿಕೆ ಮಾಜಿ ಸದಸ್ಯ ಹೆಚ್.ಎನ್. ಶಿವಕುಮಾರ್, ಮುಖಂಡ ಅಜ್ಜಂಪುರ ಶೆಟ್ರು ವಿಜಯಕುಮಾರ್ ಮತ್ತಿತರರು ಭಾಗವಹಿಸಿದ್ದರು.

ದಾವಣಗೆರೆ, ಆ.14- ಬಾಂಗ್ಲಾ ದೇಶದಲ್ಲಿ ನಡೆಯುತ್ತಿರುವ ಹಿಂಸಾಚಾರ ಖಂಡಿಸಿ, ವಿಶ್ವ ಸಂಸ್ಥೆ ಮತ್ತು ಕೇಂದ್ರ ಸರ್ಕಾರ ಇವೆರಡೂ ಮಧ್ಯಸ್ಥಿಕೆ ವಹಿಸಿ ಬಾಂಗ್ಲಾದ ಅಲ್ಪಸಂಖ್ಯಾತ ಹಿಂದೂಗಳಿಗೆ ರಕ್ಷಣೆ ಒದಗಿಸಬೇಕೆಂದು ಹಿಂದೂ ಹಿತರಕ್ಷಣಾ ಸಮಿತಿಯ ಸಂಚಾಲಕ ಸತೀಶ್ ಪೂಜಾರಿ ಆಗ್ರಹಿಸಿದರು.

ನಿನ್ನೆ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನೆರೆಯ ಬಾಂಗ್ಲಾ ದೇಶವು ತೀವ್ರ ಹಿಂಸಾಚಾರದಿಂದ ಬಳಲುತ್ತಿದ್ದು, ಹಿಂದೂ ಬಾಂಧವರ ಮನೆ, ಮಠ, ಅಂಗಡಿ, ಕಚೇರಿ ಹಾಗೂ ವಾಣಿಜ್ಯ ಸಂಸ್ಥೆಗಳನ್ನು ಧ್ವಂಸ ಮಾಡುತ್ತಿರುವ ಹೀನ ಕೃತ್ಯವನ್ನು ಹಿಂದೂ ಹಿತರಕ್ಷಣಾ ಸಮಿತಿ ಉಗ್ರವಾಗಿ ಖಂಡಿಸುತ್ತದೆ ಎಂದು ಹೇಳಿದರು. ದೇಶದಲ್ಲಿರುವ 5 ಕೋಟಿ ಬಾಂಗ್ಲಾ ವಲಸಿಗರನ್ನು ತಕ್ಷಣಕ್ಕೆ ಹೊರದೂಡುವ ಕಾರ್ಯ ಮಾಡಿದರೆ ಬಾಂಗ್ಲಾದ ನಿಜವಾದ ಬಣ್ಣ ಬಯಲಾಗಲಿದೆ. ಬಾಂಗ್ಲಾ ಗಲಭೆಗೆ ಕುಮ್ಮಕ್ಕು ಕೊಡುತ್ತಿರುವ ಚೀನಾ, ಅಮೇರಿಕಾ ಮತ್ತು ಪಾಕಿಸ್ತಾನಕ್ಕೆ ಸರಿಯಾದ ಪ್ರತ್ಯುತ್ತರವನ್ನು ಭಾರತವು ವಿಶ್ವಸಂಸ್ಥೆಯ ಮೂಲಕ ಕೊಡಬೇಕು ಎಂದರು.

ಅಲ್ಲಿನ ಅಲ್ಪಸಂಖ್ಯಾತ ಹಿಂದೂಗಳ ರಕ್ಷಣೆಗೆ ಸಾಧ್ಯವಿರುವ ಎಲ್ಲ ಕ್ರಮ ಕೈಗೊಳ್ಳುವಂತೆ ಕೇಂದ್ರ ಸರ್ಕಾರ ಸಹಿತ ವಿಶ್ವ ಸಂಸ್ಥೆಯು ಬಾಂಗ್ಲಾ ದೇಶದ ಸರ್ಕಾರಕ್ಕೆ ಒತ್ತಾಯಿಸಬೇಕು ಎಂದು ಹೇಳಿದರು.

ಬಾಂಗ್ಲಾ ದೇಶದ ಜನರು ಮೀಸಲಾತಿ ಮತ್ತು ಸರ್ಕಾರದ ಬಗ್ಗೆ ಕೋಪಗೊಂಡಿದ್ದರೆ, ಅಲ್ಲಿನ ಅಲ್ಪಸಂಖ್ಯಾತ ಹಿಂದೂಗಳ ಮೇಲೆ ಏಕೆ ದೌರ್ಜನ್ಯ ಮಾಡಬೇಕು ಎಂದ ಅವರು, ಹಾನಿಗೊಳಗಾದ ಅಲ್ಲಿನ ಹಿಂದೂ ದೇವಸ್ಥಾನ, ಮನೆ, ಮತ್ತು ಅಂಗಡಿ ಸೇರಿದಂತೆ ಇತರೆ ಆಸ್ತಿಗಳಿಗೆ ಪುನರ್ವಸತಿ ಕಲ್ಪಿಸಬೇಕೆಂದು ಒತ್ತಾಯಿಸಿದರು.

ಬಾಂಗ್ಲಾ ವಿಭಜನೆಯ ಸಮಯದಲ್ಲಿ ಅಲ್ಲಿ ಶೇ.32ರಷ್ಟಿದ್ದ ಹಿಂದೂಗಳ ಸಂಖ್ಯೆ, ಇಂದು ಶೇ.8ಕ್ಕೆ ಇಳಿಕೆಯಾಗಿರುವುದು ಬಾಂಗ್ಲಾ ದೇಶ ಮಾಡಿದ ಮಾನವ ಹಕ್ಕುಗಳ ಉಲ್ಲಂಘನೆಯಾಗಿದೆ ಮತ್ತು ಧಾರ್ಮಿಕ ಹಕ್ಕುಗಳಿಗೆ ಚ್ಯುತಿ ತಂದಿದೆ ಎಂದರು. ಬಾಂಗ್ಲಾ ದೇಶದ ಅಲ್ಪ ಸಂಖ್ಯಾತರ ಮೇಲಾಗುವ ಅನ್ಯಾಯ ನಿಲ್ಲದೇ ಹೋದಲ್ಲಿ 'ದಾವಣಗೆರೆ'ಯಲ್ಲಿರುವ ಬಾಂಗ್ಲಾ ವಲಸಿ ಗರಿಗೆ ತಕ್ಕ ಉತ್ತರವನ್ನು ಹಿಂದೂ ಹಿತರಕ್ಷಣಾ ಸಮಿತಿ ಕೊಡಲಿದೆ ಎಂದು ಎಚ್ಚರಿಕೆ ನೀಡಿದರು.

ಸಮಿತಿಯ ಸಹ ಸಂಚಾಲಕ ಸಿ.ಎಸ್. ರಾಜು, ಶಿವಾಜಿರಾವ್, ಹರೀಶ್ ಪವಾರ್, ಮನೋಜ್, ಎಂ. ವೀರೇಶ್, ಉಮೇಶ್ ಸುದ್ದಿಗೋಷ್ಠಿಯಲ್ಲಿದ್ದರು.

# ಛತ್ತೀಸ್‌ಘಡ : ಇದೇ ಮೊದಲ ಬಾರಿಗೆ 13 ಹಳ್ಳಿಗಳಲ್ಲಿ ಸ್ವಾತಂತ್ರ್ಯ ದಿನಾಚರಣೆ

ರಾಯಪುರ, ಆ. 14 - ಛತ್ತೀಸ್‌ಘಡದ ನಕ್ಸಲ್ ಪೀಡಿತ ಬಸ್ತಾರ್ ಪ್ರಾಂತ್ಯದ 13 ದುರ್ಗಮ ಹಳ್ಳಿಗಳಲ್ಲಿ ಇದೇ ಮೊದಲ ಬಾರಿಗೆ ಸ್ವಾತಂತ್ರ್ಯ ದಿನಾಚರಣೆಯಂದು ರಾಷ್ಟ್ರ ಧ್ವಜಾರೋಹಣ ಮಾಡಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

ಕಳೆದ ಏಳು ತಿಂಗಳಿಂದ ಈ ಹಳ್ಳಿಗಳಲ್ಲಿ ಭದ್ರತಾ ಪಡೆಗಳು ಹೊಸ ಶಿಬಿರಗಳನ್ನು ಸ್ಥಾಪಿಸಿವೆ. ಇದರಿಂದಾಗಿ ಈ ಪ್ರದೇಶದಲ್ಲಿ ಅಭಿವೃದ್ಧಿ ಯೋಜನೆಗಳನ್ನು ಜಾರಿಗೆ ತರಲು ಸಾಧ್ಯವಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

ಕಳೆದ ವರ್ಷ ಗಣರಾಜ್ಯೋತ್ಸವ ದಿನದ ನಂತರ ಭದ್ರತಾ ಶಿಬಿರಗಳನ್ನು ಸ್ಥಾಪಿಸಲಾಗಿತ್ತು. ಈ ಶಿಬಿರಗಳು ಬಸ್ತಾರ್ ವಲಯದಲ್ಲಿ ಶಾಂತಿ ಹಾಗೂ ಸಮೃದ್ಧಿ ನೆಲೆಗೊಳಿಸುವ ಆಶಾಕಿರಣ ಆಗಿವೆ ಎಂದು ಪೊಲೀಸರು ಹೇಳಿದ್ದಾರೆ.

# ಭಾರತವು ಜಾತ್ಯಾತೀತ ದೇಶ ಎಲ್ಲಾ ಧರ್ಮಗಳಿಗೆ ಗೌರವ



ಭಾರತ ದೇಶ ಬ್ರಿಟೀಷರ ಗುಲಾಮಗಿರಿಯ ಸರಪಳಿಗಳನ್ನು 1947ರ ಆಗಸ್ಟ್ 15ರಂದು ಕಳಚಿ ಸ್ವತಂತತ್ರಗೊಂಡ ನಂತರ ನಮ್ಮ ಘನ ಸಂವಿಧಾನವನ್ನು ನಮ್ಮ ಸಾರ್ವಭೌಮ ದೇಶದ ಅಖಂಡತೆಯ ಪ್ರತೀಕವಾಗಿ 26ನೇ ಜವರಿ 1950ರಂದು ಅಳವಡಿಸಲ್ಪಟ್ಟ ದಿನವಾಗಿ ಆಚರಿಸಲಾಗುತ್ತಿದೆ.

ಭಾರತವು ಬಹಳ ಪ್ರಾಚೀನವಾದ ದೇಶವಾಗಿದ್ದು, ಇದಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ. ಹಾಗೂ ಐತಿಹಾಸಿಕವಾದ ಸಂಪ್ರದಾಯವು ಜನರೈಗೆ ಎಲ್ಲಾ ಧರ್ಮಗಳಿಗೆ ಸೌಹಾರ್ದವಾಗಿ ನಡೆದುಕೊಳ್ಳಲು ಕಲಿಸಿದೆ. ನಿರ್ಣಯ ತೆಗದುಕೊಂಡು ನನ್ನನ್ನು ತಾನು ತೊಡಗಿಸಿಕೊಳ್ಳುವುದು.

ಸಮಾಜಿಕ ಅಸಮತೋಲನ ಸಂಪೂರ್ಣವಾಗಿ ತೆಗದು ಹಾಕಿ ಹಾಗೂ ಉತ್ತಮವಾದ ಸೌಹಾರ್ಧಯುತವಾದ ವಾತಾವರಣ, ಸಹೋಧರತ್ವ ಮತ್ತು ಸಂತೋಷವನ್ನು ಹಲವಾರು, ದರ್ಮ ಜಾತಿ ಮತ್ತು ಕೋಮಗಳಲ್ಲಿ ಉಂಟು ಮಾಡುವುದು ಪ್ರಪಂಚದಲ್ಲಿ ಎಲ್ಲವೂ ವಿಭಿನ್ನ ಆದರೆ ಸಾವು ಮಾತ್ರ ಖಚಿತ ಮತ್ತು ಅಂತಿಮ ಒಳ್ಳೆಯ ಕೆಲಸ ಕಾರ್ಯಗಳನ್ನು ಮಾಡುವುದರಿಂದ ತಮಗೆ ಆಶೀರ್ವದನದಂತೆ, ಆದ್ದರಿಂದ ಮೃತ್ಯವು ತಮ್ಮನ್ನು ತೆಗೆದುಕೊಂಡು ಹೋಗುವುದಕ್ಕೆ ಮೊದಲ ಮಾಡಿ (ಜೀವಿ ಇವರ ಜೀವನ)

**ಪೌರತ್ವದ ಸುಗುಣಗಳು :** ಪ್ರಜಾಪ್ರಭುತ್ವ ಸಮಾಜವಾದ, ರಾಷ್ಟ್ರೀಯ ಐಕ್ಯತೆ, ಸುಧಾರಿತ ಶೈಕ್ಷಣಿಕ ಗುಣಮಟ್ಟ, ಕೃಷಿ ವಾಣಜ್ಯೋದ್ಯಮ, ಶಕ್ತಿ, ಸಂಪನ್ಮೂಲ, ವೈಮಾನಿಕ, ವೈದ್ಯಕೀಯ, ಬಾಹ್ಯಾಕಾಶ, ಅಣು, ಎಲೆಕ್ಟ್ರಾನಿಕ್ಸ್ ಮತ್ತು ಸೈನಿಕ ತಾಂತ್ರಿಕ ಕುಶಲತೆಯ ಬೆಳವಣಿಗೆಯನ್ನು ಅಭಿವೃದ್ಧಿಪಡಿಸಿಕೊಂಡು ಮುನ್ನಡೆಯ ಬೇಕಿದೆ. ಈ ನಿಟ್ಟಿನಲ್ಲಿ ನಾವು ಭಾರತಿಯೆಲ್ಲರೂ ಕಾರ್ಯಶೀಲರಾಗಬೇಕು. ಸಾಸ್ಕೃತಿಕ ಚಟುವಟಿಕೆ, ಪ್ರವಾಸೋಧ್ಯಮ ಹಾಗೂ ಕುಶಲ ಕೈಗಾರಿಕೆಗಳ ಬೆಳವಣಿಗೆಯಲ್ಲಿ ನಾವು ವಿದೇಶಿಯರನ್ನು ಮೀರಿ ನಿಲ್ಲಬೇಕು.

ಅಧಿಕಾರಯ ಮುಖ್ಯ ಕರ್ತವ್ಯವೇನು ? ಅಧಿಕಾರಿಯೆಂದರೆ ದೇಶಕ್ಕಾಗಿ ನಿಷ್ಟೆಯಿಂದ ಸೇವೆ ಸಲ್ಲಿಸುವುದಾಗಿದೆ. ಅಧಿಕಾರಿಯ ಮುಖ್ಯ ಕರ್ತವ್ಯ ಪ್ರಮಾಣಿಕತೆಯಿಂದ ಮಾಡಬೇಕು. ಜನತೆಗೆ ರಾಷ್ಟ್ರಕ್ಕೆ ಉತ್ತಮ ರೀತಿಯಲ್ಲಿ ಕೆಲಸ ಕಾರ್ಯಗಳನ್ನು ಸಮರ್ಪಿಸುವುದೇ ಅಧಿಕಾರಿಗಳ ಮುಖ್ಯ ಕರ್ತವ್ಯ ಇದೇ ಭಾರತೀಯ ಪ್ರಜಾಪ್ರಭುತ್ವದ ರೀತಿ.

ನಮ್ಮ ಆತ್ಮಶುದ್ಧವಾಗಿದ್ದು, ಅಲೋಚಿಸುವ ವಿಚಾರ ಶುದ್ದವಾಗಿದ್ದಲ್ಲಿ ದೇಶ, ಧರ್ಮ, ಜನ, ಸಮಾಜ, ಸುಖ ಸಂತೋಷದಿಂದುರುತ್ತದೆ. ಇದನ್ನು ಪ್ರತಿಯೊಬ್ಬರು ಅರಿತು ಬಾಳುವುದೇ ನಿಜವಾದ ದೇಶ ಪ್ರೇಮು.



-ಅಲ್ಲವಲಿ ಸಮೀವುಲ್ಲಾ ಖಾನ್
ಬಿ.ಎ., (ಎಲ್.ಎಲ್.ಬಿ.,)
ದಾವಣಗೆರೆ.

# ಪ್ರೊ.ಎಸ್.ಬಿ. ರಂಗನಾಥ್ ಇನ್ನಿಲ್ಲ

(1ನೇ ಪುಟದಿಂದ) ತಾಲ್ಲೂಕಿನ ಸಿದ್ದನಮಠ ಗ್ರಾಮದಲ್ಲಿರುವ ಮೃತರ ತೋಟದಲ್ಲಿ ಅಂತ್ಯ ಸಂಸ್ಕಾರ ನೆರವೇರಿಸಲಾಗುವುದು ಎಂದು ಸಹೋದರ ಪ್ರೊ. ಎಸ್.ಬಿ. ಬಸವರಾಜ ತಿಳಿಸಿದ್ದಾರೆ.

ರಂಗನಾಥ್ ಅವರು ಚನ್ನಗಿರಿ ತಾಲ್ಲೂಕಿನ ಸಿದ್ಧನಮಠದ ನಾಡಿಗೇರ ಬಸಪ್ಪ ಮತ್ತು ಕಮಲಮ್ಮ ದಂಪತಿ ಪುತ್ರರಾಗಿ 1942ರ ಜೂನ್ 18ರಂದು ಜನಿಸಿದ್ದರು.

ಶ್ರೀ ತರಳಬಾಳು ಜಗದ್ಗುರು ವಿದ್ಯಾಸಂಸ್ಥೆಯ ಪ್ರೌಢಶಾಲಾ ಅಧ್ಯಾಪಕ, ಮುಖ್ಯೋಪಾಧ್ಯಾಯ, ಕಿರಿಯ ಕಾಲೇಜಿನ ಪ್ರಾಚಾರ್ಯ, ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದರು. ನಿವೃತ್ತಿಯ ನಂತರ ತರಳಬಾಳು ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ ಸಂಯೋಜಕರಾಗಿ ಆನಂತರ ವಿದ್ಯಾಸಂಸ್ಥೆಯ ಆಡಳಿತಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದರು.

ಅವಿಭಜಿತ ಚಿತ್ರದುರ್ಗ ಜಿಲ್ಲೆ ಮತ್ತು ವಿಭಜಿತ ದಾವಣಗೆರೆ ಜಿಲ್ಲೆಗಳ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದರು. ಶಿಲ್ಪಕಲಾ ಅಕಾಡೆಮಿಯ ಸದಸ್ಯರಾಗಿ, ಕುವೆಂಪು ವಿಶ್ವವಿದ್ಯಾಲಯದ ಸೆನೆಟ್ ಸದಸ್ಯರಾಗಿದ್ದರು. ನಗರದಲ್ಲಿ ಕುವೆಂಪು ಕನ್ನಡ ಭವನ ನಿರ್ಮಾಣಕ್ಕೆ ಅಪಾರವಾಗಿ ಶ್ರಮಿಸಿದ್ದರು.

ಮೃತರು ಪ್ರವೃತ್ತಿಯಲ್ಲಿ ಪತ್ರಕರ್ತರು, ಲೇಖಕರು, ಅನುವಾದಕರೂ ಆಗಿದ್ದರು. ಶಿಕ್ಷಣ, ಸಾಹಿತ್ಯ ಸೇರಿದಂತೆ, ವಿವಿಧ ಕ್ಷೇತ್ರಗಳಲ್ಲಿ ಸಲ್ಲಿಸಿದ ಸೇವೆಯನ್ನು ಪರಿಗಣಿಸಿ ಕರ್ನಾಟಕ ಸರ್ಕಾರವು ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿ ಗೌರವಿಸಿತ್ತು.


**ಕ್ಲೀನಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಕ್ಲೀನಿಂಗ್ ಕೆಲಸಕ್ಕೆ ಗಂಡ-ಹೆಂಡತಿ ಬೇಕಾಗಿದ್ದಾರೆ. ಈರ್ವರಿಗೂ ಸಂಬಳ ರೂ. 26000/- ರೂಂ ಮತ್ತು ಗ್ಯಾಸ್ ಉಚಿತ
97400 98047

**ಸೈಟುಗಳು ಮಾರಾಟಕ್ಕಿವೆ**
ಹರಿಹರದ ಅಮರಾವತಿ ಹೌಸಿಂಗ್ ಕಾಲೋನಿ ಮತ್ತು ಕೆ.ಹೆಚ್.ಬಿ. ಪಕ್ಕದಲ್ಲಿ ಅಳತೆ 30x40 ಪೂ-ಪ ದಿಕ್ಕಿನ 6 ಸೈಟುಗಳು ದೂಡಾ ಅಂತಿಮ ಅನುಮೋದನೆ. ನಗರಸಭೆ ಡೋ. ನಂ., ಬ್ಯಾಂಕ್ ಸಾಲ ಸೌಲಭ್ಯ ಸಿಗುತ್ತದೆ. ನೇರ ಮಾಲೀಕರಿಂದ ಸೈಟುಗಳು ಮಾರಾಟಕ್ಕಿವೆ. ಸಂಪರ್ಕಿಸಿ :
98809 33630

**ಬೇಕಾಗಿದ್ದಾರೆ**
ಪತ್ರಿಕಾ ಕಚೇರಿಯಲ್ಲಿ ಸಂಜೆ ಪಾಳೆಯದಲ್ಲಿ ಕೆಲಸ ಮಾಡಲು ಕನ್ನಡ ಭಾಷಾ ಜ್ಞಾನ, ಕನ್ನಡ ಟೈಪಿಂಗ್ ಬಲ್ಲ ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ.
ಸಂಪರ್ಕಿಸುವ ಸಮಯ : ಮಧ್ಯಾಹ್ನ 12ರ ನಂತರ
ಫೋ. : 08192 254736

**ಕಟ್ಟಡ ಬಾಡಿಗೆಗೆ ಇದೆ**
ಡಾಲರ್ಸ್ ಕಾಲೋನಿಯಲ್ಲಿ ಹಾಸ್ಟೆಲ್ / ನರ್ಸಿಂಗ್ ಹೋಂ ಪ್ರಾರಂಭಿಸಲು ಸೂಕ್ತವಾದ ಕಟ್ಟಡ ಬಾಡಿಗೆಗೆ ಇದೆ.
88674 46224

**ಮಣಿಪಾಲ್ ಆರೋಗ್ಯ ಕಾರ್ಡ್**
ಆಗಸ್ಟ್ 15 ಮತ್ತು ಸೆಪ್ಟೆಂಬರ್ 15ರ ತನಕ ವ್ಯಾಲಿಡಿಟಿ ಇರುವವರು ರಿನೀವಲ್ ಮಾಡಿಸಿಕೊಳ್ಳಲು
ಇಂದೇ ಕೊನೆಯ ದಿನಾಂಕ
ಸಂಪರ್ಕಿಸಿ : ಮಣಿಪಾಲ್ ಮಾಹಿತಿ ಕೇಂದ್ರ ತ್ರಿಶೂಲ ಟಾಕೀಸ್ ರಸ್ತೆ, ಕಾವೇರಮ್ಮ ಶಾಲೆಯ ಹತ್ತಿರ, ಕೆ.ಬಿ. ಬಡಾವಣೆ, ದಾವಣಗೆರೆ.
89042 19373

**Property Hub**
• EC
• E-swathu
• Building Licence
• Khatha Change
96118 66449

**ಸೈಟು ಮಾರಾಟಕ್ಕಿದೆ**
ಭೂಮಿಕಾ ನಗರದಲ್ಲಿ ದಕ್ಷಿಣಾಭಿಮುಖವಾಗಿರುವ ಮತ್ತು ಉದ್ಯಾನವನ ಎದುರಿಗೆ ಇರುವ $\frac{34+44}{2} \times 72$ ಸೈಟು ಮಾರಾಟಕ್ಕಿದೆ. ಸಂಪರ್ಕಿಸಿ :
94485-89727

**ಸೈಟ್ ಮಾರಾಟಕ್ಕಿದೆ**
40x60 ಅಳತೆಯ ಸೈಟ್ ನಂ. 2291-HIG-1, ಕರ್ನಾಟಕ ಗೃಹ ಮಂಡಳಿ, ತುಂಗಭದ್ರಾ ಬಡಾವಣೆ, ದಾವಣಗೆರೆಯಲ್ಲಿ ಸೈಟ್ ಮಾರಾಟಕ್ಕಿದೆ.
(ಮಧ್ಯವರ್ತಿಗಳಿಗೆ ಅವಕಾಶವಿಲ್ಲ)
94814 17793

**ಮನೆಯ ಬಾಡಿಗೆಗೆ ಇದೆ**
MCC A BLOCK ಬಕೇಶ್ವರ ಹೈಸ್ಕೂಲ್ ಹತ್ತಿರ ಸಿಂಗಲ್ ಬೆಡ್ ರೂಮ್ ಮನೆ (2ನೇ ಮಹಡಿ) ಬಾಡಿಗೆಗೆ ಇದೆ.
9448237274
9035105720

**TUITIONS**
ಗುರುದತ್ತ ಬಿ. ನಾಡಿಗೇರ್
Class 6 ಇಂದ Class 10
CBSE / ICSE Boards,
NEET / IIT - JEE / Olympiads
Memory Techniques + Hand Writing
97398 65711, 94822 44114

**TUITIONS**
ಗುರುದತ್ತ ಬಿ. ನಾಡಿಗೇರ್
PUC I / PUC II / Longterm / PCMB
NEET / IIT - JEE / KCET /
CLAT - Printed Notes +
Study Materials
97398 65711, 94822 44114

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ಕೆಲಸ ಮಾಡಲು ಅನುಭವವುಳ್ಳ (Nurse) ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ : ಸಿ.ಜಿ. ಆಸ್ಪತ್ರೆ ಹಿಂಭಾಗ, ಪೆವಿಲಿಯನ್ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.
98450 35710, 77607 39990

**ಸೈಟ್ ಮಾರಾಟಕ್ಕಿದೆ**
ಆನಗೋಡು ಗ್ರಾಮದ ರೀ. ಸರ್ವೆ ನಂ. 227/3ರ ಉತ್ತರ-ಪೂರ್ವ ಹಾಗೂ ಉತ್ತರ-ಪಶ್ಚಿಮ ಕಾರ್ನರ್. 30x40 ಅಳತೆಯ ನಗರಾಭಿವೃದ್ಧಿ ಪ್ರಾಧಿಕಾರ / ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ಅನುಮೋದಿತ ಸೈಟುಗಳು ಮಾರಾಟಕ್ಕಿವೆ.
99800 96866, 97418 11355

**ಟೀ ಮಾಡಲು ಬೇಕಾಗಿದ್ದಾರೆ**
ಪಿ.ಬಿ. ರೋಡ್, ಸುಜುಕಿ ಶೋ ರೂಂ ಮುಂಭಾಗ, ಸಬ್‌ರಿಜಿಸ್ಟರ್ ಆಫೀಸ್ ಹತ್ತಿರ, ದಾವಣಗೆರೆ.ಸಂಬಳ - 5000/-
88928 58649, 89712 96744

**ಜಮೀನು ಮಾರಾಟಕ್ಕಿದೆ**
ದಾವಣಗೆರೆಯಿಂದ 15 ಕಿ.ಮೀ. ಹತ್ತಿರದ ಹಿರೇತೊಗಲೇರಿ ಗ್ರಾಮದಲ್ಲಿ 5 ಎಕರೆ ಜಮೀನು, 3 ಬೋರ್ ಹೊಂದಿದೆ. ಬೆಲೆ 1 ಎಕರೆಗೆ 50 ಲಕ್ಷ ರೂ. ಜೀನಿಯಸ್ ಸ್ಕೂಲ್ ರಸ್ತೆ,
ಮೊ. 82172 37969,
97413 48103, 99800 11448

**HOUSE FOR RENT**
Newly constructed 3bhk furnished Duplex House for Rent, north facing.located at Vidya nagar. Contact:
99724 26415

**ಹೋಟೆಲ್ ಬಾಡಿಗೆಗಿದೆ**
ನಗರದ ಕೊಂಡಜ್ಜಿ ರಸ್ತೆ, ಗ್ಯಾಸ್ ಗೋಡೌನ್ ಎದುರು, (ಶ್ರೀ ಉಳವಿ ಚನ್ನಬಸವೇಶ್ವರ) ಹೋಟೆಲ್ ನಡೆಸಲು ಎಲ್ಲಾ ಸುಸಜ್ಜಿತ ಸಾಮಾನುಗಳೊಂದಿಗೆ ಬಾಡಿಗೆಗಿದೆ.
ಸಂಪರ್ಕಿಸಿ : ಜವಳಿ ನಾಗರಾಜ್ ಎಸ್.
98458 85671

**ಬೇಕಾಗಿದ್ದಾರೆ**
ಪೈಪ್ ಮತ್ತು ಸ್ಯಾನಿಟರಿ ಶೋ ರೂಂಗೆ Tally ಗೊತ್ತಿರುವ ಅಕೌಂಟೆಂಟ್ ಬೇಕಾಗಿದ್ದಾರೆ.
ಮಾಗನೂರು ಎಂಟರ್ ಪ್ರೈಸಸ್
ರೆಡ್ಡಿ ಬಿಲ್ಡಿಂಗ್ ಹತ್ತಿರ, ಎಂ.ಸಿ.ಸಿ. 'ಎ' ಬ್ಲಾಕ್, ದಾವಣಗೆರೆ.
97436 36000

**ಕಮರ್ಷಿಯಲ್ ಸೈಟ್ ಮಾರಾಟಕ್ಕಿದೆ**
ಜಗಳೂರು ಪಟ್ಟಣದ ಸರ್ಕಾರಿ ಬಸ್ ನಿಲ್ದಾಣಕ್ಕೆ ಸಮೀಪವಿರುವ, ಮೂರು ಕಡೆಗೂ ರಸ್ತೆ ಸಂಪರ್ಕವನ್ನು ಹೊಂದಿರುವ ಕಮರ್ಷಿಯಲ್ ಉಪಯೋಗಕ್ಕೆ ಬೇಕಾದ 23,312 ಚದರ ಅಡಿಯುಳ್ಳ, ಫೈನಲ್ ಅಪ್ರೂವಲ್ ಆಗಿರುವ ಕಾರ್ನರ್ ಸೈಟ್ ಮಾರಾಟಕ್ಕಿದೆ.
9606307471
82770 57777

**ಮನೆ ಮಾರಾಟಕ್ಕಿದೆ**
ದಾವಣಗೆರೆ ನಗರದ ಸರಸ್ವತಿ ನಗರದಲ್ಲಿ 30x45 ಅಳತೆಯಲ್ಲಿ ಪಶ್ಚಿಮಾಭಿಮುಖವಾಗಿ ಕಟ್ಟಿರುವ 3BHK ಡುಪ್ಲೆಕ್ಸ್ ಮನೆ ಮಾರಾಟಕ್ಕಿದೆ.
(ಮಧ್ಯವರ್ತಿಗಳಿಗೆ ಅವಕಾಶವಿಲ್ಲ)
99454 92913

**ಮನೆ ಬಾಡಿಗೆಗೆ ಇದೆ**
2BHK ನೆಲ ಮಹಡಿ ನಂ. 1645/65, 11ನೇ ಕ್ರಾಸ್ ಟೀಚರ್ ಕಾಲೋನಿ, ವಿದ್ಯಾನಗರ, ದಾವಣಗೆರೆ. ವಿಚಾರಿಸಿ :
99807 28716

**ಮನೆ ಕೆಲಸಕ್ಕೆ ಮಹಿಳೆ ಬೇಕಾಗಿದ್ದಾರೆ**
ಸಂಪರ್ಕಿಸುವ ಸಮಯ : ಮಧ್ಯಾಹ್ನ ; 12 ರಿಂದ ಸಂಜೆ 5.00 ರವರೆಗೆ
08192 254736

**ಬಾಡಿಗೆಗೆ / ಲೀಸ್‌ಗಿವೆ**
ದೇವರಾಜ ಅರಸು ಬಡಾವಣೆ : ಲೀಸ್ 5.5 ಲಕ್ಷ, 2ನೇ ಮಹಡಿ ಪೂರ್ವ ಬಾಗಿಲು 2BHK. ಬಾಡಿಗೆ ರೂ.6,000/, ದಕ್ಷಿಣ ಬಾಗಿಲು, 2BHK.
ವಿಜಯನಗರ ಬಡಾವಣೆ : 1ನೇ ಮಹಡಿ 40x40, 10x15, ಒಟ್ಟು 8 ರೂಂಗಳು, 2ನೇ ಮಹಡಿ 40x40, 20x20 ಒಟ್ಟು 4 ರೂಂಗಳು ಬಾಡಿಗೆಗಿವೆ.
ಮಿಟ್ಲಕಟ್ಟೆ : 20x35 ಒಟ್ಟು 3 ರೂಂಗಳು ಬಾಡಿಗೆಗಿವೆ. ಬೋರ್ ವೆಲ್/ ಕಾರ್ಪೊರೇಷನ್ ನೀರು, ಕಾರು ಪಾರ್ಕಿಂಗ್ ವ್ಯವಸ್ಥೆ ಇದೆ.
974174 6205, 73493 97287
84312 55250, 99022 99961

**ಬೇಕಾಗಿದ್ದಾರೆ**
ದಾವಣಗೆರೆ ಪ್ರತಿಷ್ಠಿತ ಹೋಟೆಲ್ ನಲ್ಲಿ ಕ್ಯಾಶಿಯರ್, ಸಪ್ಲೇಯರ್, ಕ್ಲೀನರ್ ಮತ್ತು ಸರ್ವೀಸ್ ಕೆಲಸಕ್ಕೆ ಹುಡುಗ, ಹುಡುಗಿಯರು ಬೇಕಾಗಿದ್ದಾರೆ. ಉತ್ತಮ ಸಂಬಳ ಮತ್ತು ಊಟ, ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ :
94489 80070, 88847 04025

**ಮನೆ ಬಾಡಿಗೆಗೆ ಇದೆ**
ಹೊಂಡದ ಸರ್ಕಲ್‌ನ ಖಂಡಪ್ಪನ ಗಲ್ಲಿಯಲ್ಲಿ 13x45 ಅಳತೆಯ ಒಂದನೇ ಮಹಡಿ ಮನೆ ಸೋಲಾರ್, ನೀರು ಸೌಲಭ್ಯವಿರುವ ಮನೆ ಬಾಡಿಗೆಗೆ ಇದೆ.
94480 47506

**Sri Nidhi Educational Trust (R)**
ನೇರ ಪರೀಕ್ಷೆಗಳು
SSLC, PUC, BA, B.Com, BCA, MA, M.Com, M.Sc, Diploma Course, BE, B.Tech, B.Lib, M.Lib, MBA, MCA & All Courses
77609 55550

**ರಕ್ತ ದಾನ ಶ್ರೇಷ್ಠ ದಾನ**

**Anu Solar Power Pvt. Ltd.,**


Near Reddy Building MCC A block, Bakkeshwara School Road, Davangere - 577 006.
98444 12807
99866 76462

**ಮೂಲ ಕ್ರಯ ಪತ್ರ ಕಳೆದಿದೆ**
ಶಿವಮೊಗ್ಗ ಮಹಾನಗರ ಪಾಲಿಕೆಯ 35ನೇ ವಾರ್ಡ್‌ನ ಮಲ್ಲಿಗೇನ ಹಳ್ಳಿಯಲ್ಲಿ UAS ಮತ್ತು ADD ನೌಕರರ ಗೃಹ ನಿರ್ಮಾಣ ಸಂಘವು ನಿರ್ಮಿಸಿರುವ ಲೇಔಟ್‌ನಲ್ಲಿ ರುದ್ರಮುನಿಯಪ್ಪ BM ಹೆಸರಿನಲ್ಲಿ 60x40 ಖಾಲಿ ನಿವೇಶನದ DN - 4922/33 ಅದರ ಮೂಲ ಕ್ರಯ ಪತ್ರವು ದಿನಾಂಕ 12.8.2024ರ ಮಧ್ಯಾಹ್ನ 3 ಗಂಟೆ ಸಮಯದಲ್ಲಿ ದಾವಣಗೆರೆ ಹೈಸ್ಕೂಲ್ ಮೈದಾನದ KSRTC ಬಸ್ ನಿಲ್ದಾಣದಲ್ಲಿ ಕಳೆದುಹೋಗಿದೆ. ಸದರಿ ಪತ್ರ ಸಿಕ್ಕವರು ದಯಮಾಡಿ ಮೊಬೈಲ್ ಸಂಖ್ಯೆ 94492 87516 ಗೆ ಕರೆ ಮಾಡಿದರೆ ನಾನೇ ಖುದ್ದು ಬಂದು ತೆಗೆದುಕೊಂಡು ಹೋಗುತ್ತೇನೆ. ಪೊಲೀಸ್ ದೂರು ಸಂಖ್ಯೆ 1190071 ದಿನಾಂಕ 12.8.2024

**ಸೋಲಾರ್ & ವಾಟರ್ ಫಿಲ್ಟರ್ ಸರ್ವೀಸ್**
ಸೋಲಾರ್ ವಾಟರ್ ಹೀಟರ್ ಹಾಗೂ ವಾಟರ್ ಫಿಲ್ಟರ್ ಸರ್ವೀಸ್ & ರಿಪೇರಿ ಮಾಡಲು ಸಂಪರ್ಕಿಸಿ.
84315 30052, 87228 39869

**ಉತ್ತಮ ಅಡಿಕೆ ಸಸಿಗಳು ಮಾರಾಟಕ್ಕಿವೆ**
ನಮ್ಮಲ್ಲಿ ಉತ್ತಮವಾದ ಅಡಿಕೆ ಸಸಿಗಳು ಮಾರಾಟಕ್ಕಿವೆ. 2ಕೆಜಿ ಚೀಲಗಳು ರೂ. 25/- ಸ್ಥಳ : ದೊಡ್ಡಬಾತಿ
88920 08800

**ಹೋಮ್ ನರ್ಸಿಂಗ್ ಸರ್ವೀಸ್**
ವಯೋವೃದ್ದರು, ಬೆಡ್ ರಿಡನ್ ಪೇಷಂಟ್‌ಗಳಿಗೆ ಬೆಳಿಗ್ಗೆ ಮತ್ತು ಸಂಜೆ ಬಂದು ಡೈಪರ್ ಚೇಂಜ್ ಮಾಡುವುದು. ಸ್ಪಾಂಜ್ ಬಾತ್ (ಸ್ನಾನ) ಮಾಡಿಸುತ್ತೇವೆ. ಫಿಜಿಯೋಥೆರಪಿ ಮಾಡಲಾಗುತ್ತದೆ.
85508 36642

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**REQUIRED**
Sales Person
Required for Surgical Field and Shop Works
76768 44100
91649 23589

**ಬಾಡಿಗೆಗೆ ಇದೆ**
ಪಿ.ಬಿ. ರಸ್ತೆ, ಗಾಂಧಿ ಸರ್ಕಲ್ ಹತ್ತಿರ, ಕಲ್ಲೇಶ್ವರ ನಿಲಯ, 1ನೇ ಮಹಡಿ, 2ನೇ ಮಹಡಿ, (ಲಿಫ್ಟ್ ಸೌಲಭ್ಯ), ಕೆಳಮಹಡಿ ಮತ್ತು ATMಗೆ ಜಾಗ
99646 99096

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**REQUIRED**
* Fitters
* Business Administration Qualification (MBA) HR
Nilkamal Furnitures
Contact :
82967 09299

**ಮಳಿಗೆ/ಗೋದಾಮು ಬಾಡಿಗೆಗೆ ಇದೆ**
ಡಿ.ಸಿ. ಆಫೀಸ್ ಹತ್ತಿರ, ಕರೂರು ಮುಖ್ಯರಸ್ತೆಗೆ ಹೊಂದಿಕೊಂಡಿರುವ ಮಳಿಗೆ/ಗೋದಾಮು ಬಾಡಿಗೆಗೆ ಇದೆ.
97394 68974

**ವಾರದ ಚೀಟಿ ಪ್ರಾರಂಭ**
ಕಂತುಗಳಲ್ಲಿ 1400/- ರಿಂದ 2000/- ರೂಗಳು, 50 ಸದಸ್ಯರು, 50 ವಾರಗಳು. ಸಂಪರ್ಕಿಸಿ :
78997 75159

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: PUC ಪಾಸ್/ಫೇಲ್, SSLC PASS ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

# ಸ್ವಾತಂತ್ರ್ಯ ದಿನಾಚರಣೆ ; ಚಿಂತನೆ



**ಸ್ವಾತಂತ್ರ್ಯ ಬಂದು 77 ವರುಷಗಳಾದರೂ ಇನ್ನೂ ನಾವು ಇಂಗ್ಲಿಷ್ ಮಾತನಾಡಿದರೆ ಬೆಲೆ ಹೆಚ್ಚು ಎಂದು ನೋಡುವ ಜನರಿದ್ದಾರೆ. ಪಾಶ್ಚಾತ್ಯ ಉಡುಗೆ, ತೊಡುಗೆಗೆ ಮಾರುಹೋಗಿದ್ದಾರೆ. ಬಿಸಿಲಿನ ಬೇಗೆಯಲ್ಲಿ ಆರಾಮಾಗಿ ಬಿಳಿ ಪಂಚೆ ಉಡುವ ಬದಲು ಮೈತುಂಬಾ ಸೂಟು ತೊಟ್ಟು ಬೆವರುತ್ತಾರೆ! ಪಾಶ್ಚಾತ್ಯ ಶಾಲಾ ಪದ್ಧತಿ, ನಮ್ಮ ಸಂಸ್ಕೃತಿಯನ್ನು ಕೀಳಾಗಿ ನೋಡಿ, ಅವರಂತೆ ಬಟ್ಟೆ ಧರಿಸುವ ನಿಯಮಗಳಿರುವ ಶಾಲೆಗಳಿಗೆ ಜನ ಮಕ್ಕಳನ್ನು ಸೇರಿಸುತ್ತಾರೆ!**

ಭಾರತಾಂಬೆಯ ಮಕ್ಕಳಾದ ನಾವು ನಮ್ಮ ಸಂಸ್ಕೃತಿ ಸಂಪ್ರದಾಯಗಳನ್ನು ಗೊಡ್ಡು ಆಚರಣೆಗಳು ಎಂದು ಬದಿಗೊತ್ತಿ ಪಾಶ್ಚಾತ್ಯ ಸಂಸ್ಕೃತಿಯ ಆಚರಣೆ ಅಪ್ಪಿಕೊಳ್ಳುತ್ತಿರುವುದು ಎಷ್ಟು ಸಮಂಜಸ?

ನಮ್ಮತನಕ್ಕಾಗಿ, ನಮ್ಮ ಉಳಿವಿಗಾಗಿ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಮಹಾತ್ಮರಾದವರು ಯಾರೂ ನಮ್ಮತನ ಬಿಟ್ಟಿರಲಿಲ್ಲ. ಜೈಲಿನಲ್ಲಿ ಇರುವಾಗಲೂ ನಮ್ಮ ದಿವ್ಯ ಗ್ರಂಥಗಳಾದ ರಾಮಾಯಣ, ಮಹಾಭಾರತ, ಭಗವದ್ಗೀತೆ ಓದಿದರು!

ಪಾಶ್ಚಾತ್ಯ ಸಮಾಜ ಈಗ ಹೇಗಾಗಿದೆ ಎಂದು ಗಮನಿಸಿದ್ದೇವೆಯೇ? ಅಲ್ಲಿನ ಮಕ್ಕಳಿಗೆ ಒಂದೇ ತಂದೆ, ತಾಯಿ ಇರುವುದೇ ಅಪರೂಪ! ವಿಚ್ಛೇದನ ಮದುವೆ ಎಷ್ಟು ಬಾರಿ ಬೇಕಾದರೂ ಆಗಬಹುದು. ಎರಡೂ ಪೇಪರ್ ನಿಂದ ಖಚಿತವಾಗುತ್ತದೆ. ಅದರಲ್ಲಿ ಒಂದು ಬದ್ಧತೆ, ಬಾಂಧವ್ಯ, ಮನೆತನಗಳ ಬಂಧನ, ಮನೆಗಳ ಬಂಧನವೇ ಇಲ್ಲ.ಕೇವಲ ಸೌಕರ್ಯದ ಮದುವೆಗಳೆಷ್ಟೋ! ಮಲತಾಯಿ, ಮಲ ತಂದೆಯರ, ಮಲ ಅಣ್ಣ-ತಮ್ಮ, ಅಕ್ಕ-ತಂಗಿಯರು ಎಷ್ಟೋ! ಇಂತಹ ಸಮಾಜ ನಮ್ಮದಾಗಬೇಕೇ?

ತಂದೆ, ತಾಯಿಯರ ಮಾತು ಕೇಳುವ ಮಕ್ಕಳಿಲ್ಲ. ಅವರಿಗಾಗಿ ಚಡಪಡಿಸಿ ತಮ್ಮ ಸರ್ವಸ್ವವನ್ನೂ ಅವರಿಗಾಗಿ ಕೊಡುವ ತಂದೆ ತಾಯಿಯರೂ ಇಲ್ಲ!

ವೇಷ ಭೂಷಣದಲ್ಲಿ ಒಂದು ಗಮ್ಮತ್ತು ಇದೆಯೇ? ನೋಡಿದ ತಕ್ಷಣ ಗೌರವ ಉಕ್ಕಿ ಬರುವಂತಹ ನಡತೆ ಇದೆಯೇ? ಅಂತ:ಶಕ್ತಿ, ಆತ್ಮಶಕ್ತಿ ಇದೆಯೇ?

ನಮ್ಮಲ್ಲಿ ಅನುಷ್ಠಾನ, ಧ್ಯಾನ, ಮುಂತಾದ ಆಚರಣೆ ಮಾಡುವವರ ಮುಖದಲ್ಲಿ ಎಂತಹ ತೇಜಸ್ಸು ಎಂದು ಗಮನಿಸಿದ್ದೇವೆಯೇ?ನಮಗಿರುವಷ್ಟು ನೆಮ್ಮದಿ, ಸಮಾಧಾನ , ಚೈತನ್ಯದ ಶಕ್ತಿ ಅಲ್ಲಿದೆಯೇ?

ಒಂದು ಸಮಾಜ ಹೇಗಿದೆ ಎನ್ನುವುದಕ್ಕೆ ಅಲ್ಲಿರುವ ಜನರಿಗೆ ಎಷ್ಟು ತೃಪ್ತಿ, ನೆಮ್ಮದಿ, ಸಂತೋಷ ಇದೆ ಎಂಬುದು ಮುಖ್ಯವಲ್ಲವೇ? ಇಲ್ಲಿ ನಮ್ಮ ಅಕ್ಕ ಪಕ್ಕದ ವರಿಗೆ ಏನಾದರು ಆದರೆ ಎಲ್ಲರೂ ಓಡಿ ಬಂದು ಸಹಾಯ ಮಾಡುತ್ತಾರೆ.ಅಲ್ಲಿ ಜನ ಹೊರಗೆ ಇರುವುದೇ ಇಲ್ಲ!ಮಾತು, ಹರಟೆ, ಸಂಭ್ರಮ ಅಪರೂಪ ! ವಯಸ್ಸಾದವರು ಯಾರಿಗೂ ಬೇಡ!

ಸ್ವಾತಂತ್ರ್ಯ ಬಂದು 77 ವರುಷಗಳಾದರೂ ಇನ್ನೂ ನಾವು ಇಂಗ್ಲೀಷ್ ಮಾತನಾಡಿದರೆ ಬೆಲೆ ಹೆಚ್ಚು ಎಂದು ನೋಡುವ ಜನರಿದ್ದಾರೆ. ಪಾಶ್ಚಾತ್ಯ ಉಡುಗೆ ತೊಡುಗೆಗೆ ಮಾರುಹೋಗಿದ್ದಾರೆ.ಬಿಸಿಲಿನ ಬೇಗೆಯಲ್ಲಿ ಆರಾಮಾಗಿ ಬಿಳಿ ಪಂಚೆ ಉಡುವ ಬದಲು ಮೈತುಂಬಾ ಸೂಟು ತೊಟ್ಟು ಬೆವರುತ್ತಾರೆ! ಪಾಶ್ಚಾತ್ಯ ಶಾಲಾ ಪದ್ಧತಿ, ನಮ್ಮ ಸಂಸ್ಕೃತಿಯನ್ನು ಕೀಳಾಗಿ ನೋಡಿ ಅವರಂತೆ ಬಟ್ಟೆ ಧರಿಸುವ ನಿಯಮಗಳಿರುವ ಶಾಲೆಗಳಿಗೆ ಜನ ಮಕ್ಕಳನ್ನು ಸೇರಿಸುತ್ತಾರೆ!

ಬಾಯಿಪಾಠದಲ್ಲಿ ಎಷ್ಟು ಕಲಿಸುತ್ತಿದ್ದ ನಮ್ಮ ಶಾಲಾ ಪದ್ಧತಿ ಮಕ್ಕಳನ್ನು ಬಹಳ ಚುರುಕು ಮಾಡುತ್ತಿತ್ತು.ಮಗ್ಗಿ ಕಲಿತ ಮಕ್ಕಳು ಲೆಕ್ಕ ಬಾಯಲ್ಲಿ ಮಾಡುತ್ತಾ ಇದ್ದರು, ಶ್ಲೋಕಗಳನ್ನು ಬಾಯಿಪಾಠ ಮಾಡಿ ಸ್ಪಷ್ಟ ಉಚ್ಚಾರ, ಅದರಿಂದ ಸ್ವಾಸ್ಥ್ಯ ಜೀವನ ಎಲ್ಲಾ ಅವರದಾಗುತ್ತಿತ್ತು.

ಸ್ವಾತಂತ್ರ್ಯ ದಿನಾಚರಣೆ ಒಂದು ಆಚರಣೆ ಆಗಿದೆ ಅಷ್ಟೇ.ದೇಶಪ್ರೇಮ ಎಷ್ಟು ಜನರಲ್ಲಿದೆ? ಮಕ್ಕಳಲ್ಲಿ ಎಷ್ಟು ಜನ ಇಲ್ಲೇ ಇದ್ದು ಸಾಧನೆ ಮಾಡಲು ಮುಂದೆ ಬರುತ್ತಾರೆ? ಎಲ್ಲರೂ ವಿದೇಶಕ್ಕೆ ಓಡುವ ಕಾತರದಲ್ಲಿದ್ದಾರೆ!

ಪಾಶ್ಚಾತ್ಯ ಜನಾಂಗ ಈಗ ನೊಂದು, ಬೆಂದು ನೆಮ್ಮದಿಗಾಗಿ ಭಾರತದ ಅಧ್ಯಾತ್ಮಿಕ ಶಕ್ತಿಯ ಕಡೆ ಬಾಗುತ್ತಿದೆ. ಯೋಗ, ಪ್ರಾಣಾಯಾಮ, ಧ್ಯಾನ, ಸಂಗೀತ , ನೃತ್ಯ ಮುಂತಾದ ನಮ್ಮ ಪರಂಪರೆಯತ್ತ ಒಲವು ತೋರುತ್ತಿದೆ. ಭಾರತದ ಜ್ಞಾನಿಗಳ ಹತ್ತಿರ ಪಾಠ ಕಲಿಯಲು ಬರುತ್ತಿದ್ದಾರೆ.

ನಮ್ಮ ಸಂಸ್ಕೃತಿ, ಅಧ್ಯಾತ್ಮಿಕ ಶಕ್ತಿಯನ್ನು ನಾವು ಪಾಶ್ಚಾತ್ಯರಿಂದ ಕಲಿಯುವ ಪರಿಸ್ಥಿತಿ ಬಂದಿದೆ!

ಹಿತ್ತಲ ಗಿಡ ಮದ್ದಲ್ಲ ಎಂಬಂತೆ ನಮ್ಮ ಶಕ್ತಿಯ ಬಗ್ಗೆ ನಮಗೆ ಅರಿವೂ ಇಲ್ಲ, ಗೌರವವೂ ಇಲ್ಲ, ತಿಳಿಯುವ ಹಂಬಲವೂ ಇಲ್ಲ.ಇದಕ್ಕೆ ಮುಖ್ಯ ಕಾರಣ ನಾವು ಇನ್ನೂ ಗುಲಾಮರಾಗೇ ಇದ್ದೇವೆ. ಪಾಶ್ಚಾತ್ಯರ ಆಡಳಿತ ಮುಗಿದರೂ, ಕೀಳರಿಮೆ ಹೋಗಿಲ್ಲ,! ನಾವು ಭಾರತೀಯ ರೆಂಬ ಹೆಮ್ಮೆ ಬಂದಿಲ್ಲ! ವೇದಾಂತ ಕೇವಲ ಆತ್ಮದ ಬಗ್ಗೆ ತಿಳಿಸುತ್ತದೆ. ಮನುಷ್ಯ ತನ್ನ ಆತ್ಮೋದ್ಧಾರದ ಮಾರ್ಗ ಹುಡುಕಬೇಕೆಂದು, ಅದರಲ್ಲಿ ಸತ್ತಾಗ ಉಪಯೋಗಕ್ಕೆ ಬಾರದ ದುಡ್ಡು, ಅಂತಸ್ತು, ಒಡವೆ ಯಾವುದಕ್ಕೂ ಬೆಲೆ ಇಲ್ಲ. ಆದರೆ ನಮ್ಮ ಜೊತೆ ಬರುವ ಪುಣ್ಯ, ಪಾಪಗಳಿಗೆ ಕಾರಣವಾದ ಗುಣಕ್ಕೆ ಬೆಲೆ. ಸದ್ಗುಣವಿಲ್ಲದವನಿಗೆ ಸದ್ಗತಿ ಅಸಾಧ್ಯ.ಆದ್ದರಿಂದಲೇ ರಾವಣ ದುರ್ಯೋಧನನಿಗೆ ಸೋಲು. ರಾಮ ಧರ್ಮರಾಯನಿಗೆ ಜಯ!

ಸ್ವಾತಂತ್ರ್ಯ ಎಂದರೆ ಸ್ವೇಚ್ಛೆ ಅಲ್ಲ! ಪರದೇಶದವರ ಆಡಳಿತದಿಂದ ಮುಕ್ತ ಮಾಡುವ ಜೊತೆ, ನಮ್ಮತನದ ಬೆಲೆ ಜಗತ್ತಿಗೇ ಸಾರಬೇಕಾದ ಜವಾಬ್ದಾರಿ ಅಲ್ಲವೇ?

ನಾವು ನಮ್ಮ ಋಷಿ ಮುನಿಗಳು ತಮ್ಮ ತಪಸ್ಸು ಏಕಾಗ್ರತೆಯಿಂದ ಕಂಡುಕೊಂಡ ಸತ್ಯಗಳನ್ನು ಮರೆಯದೇ, ನಮ್ಮ ಸಂಸ್ಕೃತಿ ಕಲಿಸಿಕೊಡುವ ಶಿಸ್ತು, ಮನೋನಿಗ್ರಹ, ಜವಾಬ್ದಾರಿ, ಕಟ್ಟುನಿಟ್ಟಿನ ನಿಯಮಗಳನ್ನು ಪಾಲಿಸಿದರೆ, ನಾವು ಪಾಶ್ಚಾತ್ಯ ಸಮಾಜದಲ್ಲಿ ಈಗ ಕಾಣುವ ಪಿಡುಗುಗಳು ನಮ್ಮೂರಿಗೆ ಬರದಂತೆ ಬದುಕಬಹುದು.ನಮ್ಮ ಮುಂದಿನ ಪೀಳಿಗೆ ಸತ್ಪ್ರಜೆಗಳಾಗುವಂತೆ ಮಾಡಬಹುದು ಅಲ್ಲವೇ?

ಈ ನಿಟ್ಟಿನಲ್ಲಿ ಸ್ವಾತಂತ್ರ್ಯ ದಿನಾಚರಣೆ ಆಚರಿಸುತ್ತಾ ಭಾರತಾಂಬೆಯ ನಿಜ ಮಕ್ಕಳಾಗುವ ಪಣ ತೊಡೋಣವೇ? ನಮ್ಮ ಭಾಷೆ, ಸಂಸ್ಕೃತಿ, ವೇಷಭೂಷಣ ಗೌರವಿಸುವ ಪಣ ತೊಡೋಣವೇ? ನಮ್ಮ ತನದಿಂದ ವಿಶ್ವದ ಗೌರವ ಸಂಪಾದಿಸೋಣ. ಅನುಕರಣೆ ನಿಲ್ಲಿಸೋಣ ಎಂದು ಪ್ರಾರ್ಥಿಸುತ್ತೇನೆ.

**-ಶ್ರೀ ಕೃಷ್ಣಾರ್ಪಣಮಸ್ತು**
**ರೂಪಶ್ರೀ ಶಶಿಕಾಂತ್**

# ಸ್ವಾತಂತ್ರ್ಯ ಹೋರಾಟದಲ್ಲಿ ನಗರದ ಬಳ್ಳಾರಿ ಸಿದ್ದಮ್ಮ



ಬಳ್ಳಾರಿ ಸಿದ್ದಮ್ಮ, ಹಾವೇರಿ ಜಿಲ್ಲೆಯ ದುಂಡಸಿ ಗ್ರಾಮದ ಸಂಪ್ರದಾಯಸ್ಥ ಕುಟುಂಬದಲ್ಲಿ 1903ರಲ್ಲಿ ಜನಿಸಿದರು. ತಂದೆ ಕೊಟ್ರೆಗೆ ಬಸೆಟಪ್ಪ'. ಇವರು ವೃತ್ತಿಯಲ್ಲಿ ವ್ಯಾಪಾರಸ್ಥರಾದರೂ ಸ್ವಾತಂತ್ರ್ಯ ಚಳವಳಿಯ ಬಗೆಗೆ ಉತ್ಸಾಹವನ್ನು ಹೊಂದಿದ್ದರು. ತಂದೆ ಸಿದ್ಧಮ್ಮನವರಿಗೆ ಅಂದಿನ ದಿನಪತ್ರಿಕೆಗಳನ್ನು ಮತ್ತು ನಿಯತಕಾಲಿಕೆಗಳನ್ನು ತರಿಸಿಕೊಡುತ್ತಿದ್ದರಿಂದ ರಾಷ್ಟ್ರೀಯವಾದಿ ವಿಚಾರಧಾರೆಗಳನ್ನು ಓದಿ ತಿಳಿಯುತ್ತಿದ್ದರು.

ಸ್ವಾತಂತ್ರ್ಯ ಹೋರಾಟಗಾರರಾದ ಬಳ್ಳಾರಿ ಮುರುಗೆಪ್ಪನವರನ್ನು ವಿವಾಹವಾಗಿದ್ದೂ ಕೂಡ ಇವರು ಸ್ವಾತಂತ್ರ್ಯ ಹೋರಾಟದಲ್ಲಿ ದೊಡ್ಡ ಪ್ರಮಾಣದಲ್ಲಿ ತೊಡಗಿಸಿಕೊಳ್ಳಲು ಕಾರಣವಾಯಿತು. 1930 ರ ದಶಕದಲ್ಲಿ ಹಳೆ ಮೈಸೂರು ಸಂಸ್ಥಾನದಲ್ಲಿ ಸ್ವಾತಂತ್ರ್ಯ ಹೋರಾಟವು ತೀವ್ರಗತಿಯಲ್ಲಿ ನಡೆಯುತ್ತಿತ್ತು. ಆಗ ಎಸ್. ನಿಜಲಿಂಗಪ್ಪ, ಟಿ. ಸಿದ್ದಲಿಂಗಯ್ಯ, ಸರ್ದಾರ್ ವೀರಣ್ಣ ಗೌಡ ಮುಂತಾದ ಸ್ವಾತಂತ್ರ್ಯ ಹೋರಾಟಗಾರರು ಅಗ್ರಪಂಕ್ತಿಯಲ್ಲಿದ್ದರು.

ಬಳ್ಳಾರಿ ಸಿದ್ಧಮ್ಮನವರು 1938 ರಲ್ಲಿ ನಡೆದ ಶಿವಪುರ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಿದ್ದರು. ದಿನಾಂಕ 13-04-1938 ರಂದು ಧ್ವಜಾರೋಹಣ ಮಾಡಿ ದಸ್ತಗಿರಿಯಾದರು. ಒಂದು ತಿಂಗಳ ಕಾಲ ಕಾರಾಗೃಹ ಶಿಕ್ಷೆಯನ್ನೂ ಅನುಭವಿಸಿದರು. ಸಂಸ್ಥಾನದಲ್ಲಿ ಧ್ವಜಾರೋಹಣ ಕಾರ್ಯಕ್ರಮ ನೆರವೇರಿಸಿದ ಪಥಮ ಮಹಿಳೆ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಸಂಸ್ಥಾನದ ಪತ್ರಿಕೆಗಳು ಸಿದ್ಧಮ್ಮನವರ ಸ್ವಾತಂತ್ರ್ಯ ಹೋರಾಟದ ಬಗೆಗಿನ ಬದ್ಧತೆಯನ್ನು ಮೆಚ್ಚಿ ಪ್ರಶಂಸಿಸಿದವು. ಕಾರಾಗೃಹದಿಂದ ಬಿಡುಗಡೆ ಯಾದ ನಂತರ ಸಿದ್ಧಮನವರು ಪೂರ್ಣ ಪ್ರಮಾಣದಲ್ಲಿ ಹೋರಾಟದಲ್ಲಿ ಮುಂದು ವರೆದರು. ನಂತರ 1939 ರಲ್ಲಿ ಚಿತ್ರದುರ್ಗ ಅರಣ್ಯ ಸಾಗರದಲ್ಲಿ ಭಾಗವಹಿಸಿದರು.

ದಾವಣಗೆರೆ ತಾಲ್ಲೂಕಿನ ಆನಗೋಡು ಮತ್ತು ಮಾಯಕೊಂಡ ಅರಣ್ಯ ಪ್ರದೇಶಗಳಲ್ಲಿ ಈಚಲು ಮರಗಳನ್ನು ಕಡಿಯುವ ಚಳುವಳಿಯಲ್ಲಿ ಭಾಗವಹಿಸಿ ದಿನಾಂಕ 29.9.1939 ರಿಂದ 08.09.1940 ರವರೆಗೆ ಜೈಲು ಶಿಕ್ಷೆ ಅನುಭವಿಸಿದರು. ನಂತರ 1942ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿದ್ದರು. ಭಾರತಕ್ಕೆ ಸ್ವಾತಂತ್ರ್ಯ ಬಂದರೂ ಮೈಸೂರು ಸಂಸ್ಥಾನ ಭಾರತ ಒಕ್ಕೂಟಕ್ಕೆ ಸೇರಿಸುವ ತೀರ್ಮಾನ ಪ್ರಕಟಿಸದೇ ಇದ್ದುದರಿಂದ 1947ರಲ್ಲಿ ಅರಮನೆ ಸತ್ಯಾಗ್ರಹ ಅಥವಾ ಮೈಸೂರು ಚಲೋ ಸತ್ಯಾಗ್ರಹ ಪ್ರಾರಂಭವಾಯಿತು. ಈ ಚಳುವಳಿಯಲ್ಲಿ ಬಳ್ಳಾರಿ ಸಿದ್ದಮ್ಮ ಭಾಗವಹಿಸಿದ್ದರು. ಈ ಹೋರಾಟದ ನಂತರ ಮೈಸೂರು ರಾಜ್ಯವು ಭಾರತದ ಒಕ್ಕೂಟಕ್ಕೆ ಸೇರ್ಪಡೆಯಾಯಿತು.

ಇದರೊಂದಿಗೆ ಅಕ್ಟೋಬರ್ 1947 ರಲ್ಲಿ ಹೊಸ ಸರ್ಕಾರವು ಕೆ.ಸಿ. ರೆಡ್ಡಿಯವರ ನೇತೃತ್ವದಲ್ಲಿ ಅಸ್ತಿತ್ವಕ್ಕೆ ಬಂದಿತು. ಸ್ವಾತಂತ್ರ್ಯ ನಂತರ ದಾವಣಗೆರೆ ತಾಲ್ಲೂಕಿನ ಶಾಸಕರಾಗಿ ಸೇವೆ ಸಲ್ಲಿಸಿದರು. ಗ್ರಾಮೀಣ ಬಡ ಮಹಿಳೆಯರ ಆರೋಗ್ಯವನ್ನು ಕಾಪಾಡಲು ಮಾತೃ ಮಂದಿರವನ್ನು ಸ್ಥಾಪಿಸಿ ಅವರಿಗೆ ಹೊಸ ಬೆಳಕಾದರು.

ಇವರ ಈ ಸೇವಾ ಕಾರ್ಯಕ್ಕೆ ರಾಜ್ಯ ಸರ್ಕಾರ ತಾಮ್ರಪತ್ರವನ್ನು ನೀಡಿ ಗೌರವಿಸಿದೆ. ಹೀಗೆ ಬಳ್ಳಾರಿ ಸಿದ್ದಮ್ಮನವರು ಮೈಸೂರಿನ ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯ ವಾಗಿ ಭಾಗವಹಿಸಿ ಮಹಿಳೆಯರ ಗೌರವಕ್ಕೆ ಪಾತ್ರರಾಗಿದ್ದರು.

**- ಸಂಗ್ರಹ**

## ವಿದುರಾಶ್ವತ್ಥ ಧ್ವಜ ಸತ್ಯಾಗ್ರಹದಲ್ಲಿ ಸಿದ್ದಮ್ಮನವರು

ಶಿವಪುರದಲ್ಲಿ ನಡೆದ ಧ್ವಜ ಸತ್ಯಾಗ್ರಹವು ಚಳುವಳಿಗಾರರಿಗೆ ಸ್ಫೂರ್ತಿಯಾಯಿತು. ತಮ್ಮ ತಮ್ಮ ಪಟ್ಟಣಗಳಲ್ಲಿ ಧ್ವಜಾರೋಹಣ ಮಾಡಲು ಜನ ಮುಂದಾದರು. ಅದೇ ರೀತಿ ಕೋಲಾರ ಜಿಲ್ಲೆ ಗೌರಿಬಿದ ನೂರಿನ ವಿದುರಾಶ್ವತ್ಥ ಎಂಬಲ್ಲಿ ಧ್ವಜ ಸತ್ಯಾಗ್ರಹ ಏರ್ಪಾಡಯಿತು. ಈಗಾಗಲೇ ತಿಳಿಸಿರುವಂತೆ ಶಿವಪುರ ರಾಷ್ಟ್ರಕೂಟದ ಪ್ರಭಾವದಿಂದಾಗಿ ಬಳ್ಳಾರಿ ಸಿದ್ದಮ್ಮನವರು ಸೇರಿದಂತೆ ಕೆಲವು ಮಹಿಳಾ ಮುಖಂಡರು ವಿದುರಾಶ್ವತ್ಥಕ್ಕೆ ಬಂದಿಳಿದು ಧ್ವಜಾರೋಹಣ ಮಾಡಿದರು.

## ಭಾರತಾಂಬೆಗೆ ನಮನ

ಭಾರತ ಧ್ವಜವ ಹಾರಿಸಿ ನಾವು
ಭಾರತ ಮಾತೆಗೆ ನಮಿಸೋಣ

ಭಾರತಾಂಬೆಯ ಮಕ್ಕಳು ನಾವು
ಭಾರತಿಯ ಕೊಂಡಾಡೋಣ

ದೇಶ ಪ್ರೇಮದ ಆನಂದದಲಿ
ದೇಶಕಾಗಿ ನಾವು ದುಡಿಯೋಣ
ದೇಶದ ಸಂರಕ್ಷಣೆ ಮಾಡುವ
ದೇಶದ ಯೋಧರ ಸ್ಮರಿಸೋಣ

ದೇಶಕ್ಕಾಗಿ ಹೋರಾಡಿದ ಶ್ರೇಷ್ಠ
ದೇಶಭಕ್ತರಿಗೆ ಬಾಗೋಣ
ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ
ದೇಶಪ್ರೇಮಕೆ ಮಣಿಯೋಣ

ದೇಶದ ಸತ್ಪ್ರಜೆಯಾಗೋಣ ನಾವು
ದೇಶದಭಿವೃದ್ದಿಗೆ ಮಾಡೋಣ
ದೇಶನಿಂದೆಗೆ ಕೆಂಡವಾಗೋಣ --
ದೇಶದ ಸಂಸ್ಕೃತಿ ಉಳಿಸೋಣ

ದೇಶವ ತಾಯಿಯಂತೆ ಪ್ರೀತಿಸುತ.
ದೇಶಕಾಗಿ ಜೀವ ಸವಿಸೋಣ
ದೇಶವು ಸಿರಿಹರಿ ರೂಪವೆ ಎಂದು
ದೇಶಕೆ ಶಿರಬಾಗಿ ನಮಾಸೋಣ

ಶ್ರೀ ಕೃಷ್ಣಾರ್ಪಣಮಸ್ತು
**ರೂಪಶ್ರೀ ಶಶಿಕಾಂತ್**

# ಸ್ವಾತಂತ್ರ್ಯ ಚಳವಳಿಯಲ್ಲಿ ಹರಿಹರ ತಾ.ನ ಪಾತ್ರ



ಸ್ವಾತಂತ್ರ್ಯ ದೊರಕಿ 77 ವರ್ಷ ಕಳೆದಿದೆ. ಅಂತಹ ಚಳುವಳಿಯಲ್ಲಿ ರಾಷ್ಟ್ರಪ್ರೇಮದಿಂದ ತಮ್ಮ ಪ್ರಾಣವನ್ನೇ ಮುಡುಪಾಗಿಟ್ಟ ದಾವಣಗೆರೆ ಜಿಲ್ಲೆ ಹರಿಹರ ತಾಲ್ಲೂಕಿನ ಸ್ವಾತಂತ್ರ್ಯ ಯೋಧರನ್ನು ಸ್ಮರಿಸಬೇಕಿದೆ. ಅದರಲ್ಲೂ ಮಲೇಬೆನ್ನೂರು ಹೋಬಳಿ ಕುಂಬಳೂರಿನ ಹೋರಾಟಗಾರ ದಿ|| ಡಾ. ಕೆ. ಎಚ್ .ಮಹದೇವಪ್ಪ.

1938ರ ಶಿವಪುರ ಕಾಂಗ್ರೆಸ್ ಅಧಿವೇಶನದಲ್ಲಿ ಸ್ವಯಂಸೇವಕರಾಗಿ ಒಂದು ವಾರ ಸೇವೆ, ನಂತರ ಬರುವಾಗ ಚಿತ್ರದುರ್ಗದ ಕಾಂಗ್ರೆಸ್ ಕಚೇರಿಗೆ ತೆರಳಿ ಸದಸ್ಯತ್ವದ ಪುಸ್ತಕ ಪಡೆದು ಕುಂಬಳೂರಲ್ಲಿ 60 ಸದಸ್ಯರ ಸಮಿತಿ ರಚಿಸಿದರು. ಅಲ್ಲಿಂದ ಮಲೇಬೆನ್ನೂರು, ಜಿಗಳಿ, ನಿಟ್ಟೂರು, ನಂದಿತಾವರೆ, ಬೆಳಕೇರಿ, ಸಿರಿಗೆರೆ, ಕೊಕ್ಕನೂರು, ಮುಂತಾದ ಗ್ರಾಮಗಳಿಗೆ ತೆರಳಿ ನೂರಾರು ಸದಸ್ಯರನ್ನು ನೋಂದಾಯಿಸಿ, ತಾಲ್ಲೂಕು ಕಾಂಗ್ರೆಸ್ ಸಮಿತಿ, ಜಿಲ್ಲಾ ಕಾಂಗ್ರೆಸ್ ಸಮಿತಿ ಮತ್ತು ಅಖಿಲ ಭಾರತ ಮಟ್ಟದ ಸದಸ್ಯತ್ವವನ್ನು ಪಡೆದ ಪ್ರಥಮ ಕಾಂಗ್ರೆಸ್ಸಿಗರಾದರು.

ಅದೇ 1938ರಲ್ಲಿ ದಾವಣಗೆರೆಯಲ್ಲಿ ಜರುಗಿದ ಧ್ವಜ ಸತ್ಯಾಗ್ರಹದಲ್ಲಿ ಭಾಗಿಯಾಗಿ, ನಂತರ ಹೆಂಡದಂಗಡಿ ಪಿಕೆಟಿಂಗ್ ಸಪ್ತಾಹದಲ್ಲೂ ಪಾಲ್ಗೊಂಡು ಕಾನೂನು ಬಾಹಿರ ಕೃತ್ಯದಲ್ಲಿ ತೊಡಗಿದರು. ಅರಣ್ಯ ಸತ್ಯಾಗ್ರಹ, 1939ರಲ್ಲಿ ಅಕ್ಟೋಬರ್‌ನಲ್ಲಿ ಜಾರಿ ಮಾಡಿದ 144ನೇ ನಿಷೇಧಾಜ್ಞೆಯನ್ನು ಉಲ್ಲಂಘಿಸಲು ರೈಲಲ್ಲಿ ತೆರಳುವಾಗ ಮಹದೇವಪ್ಪನವರ ಜೊತೆ ಕೆ. ಚನ್ನವೀರಾಚಾರರನ್ನು ಪೊಲೀಸರು ಬಂಧಿಸಿ ಹಾಸನದಲ್ಲಿ ಆರು ತಿಂಗಳು ಜೈಲಲ್ಲಿರಿಸಿದರು.

ಇವರ ಜೊತೆಯಲ್ಲಿ ಎಸ್.ಚನ್ನಯ್ಯ, ಟಿ. ಮರಿಯಪ್ಪ, ಎ. ಜಿ. ಬಂದೀಗೌಡ, ಕೆ. ಚಿಕ್ಕಲಿಂಗಯ್ಯ, ಡಾ. ಪಶುಪತಿರಾವ್, ಕೆ. ಚಾಮುಂಡಯ್ಯ, ಕೆ. ಕೆಂಚಪ್ಪ, ಬಿ. ವಿಶ್ವನಾಥಶೆಟ್ಟಿ, ಕೆ.ವೀರಭದ್ರಪ್ಪ, ಗಾಯಕ್‌ವಾಡ್ ನಾರಾಯಣ ರಾವ್, ಕೊಟ್ರಬಸಪ್ಪ (ದಾವಣಗೆರೆಯ ಕಾಸಲ ಶ್ರೀನಿವಾಸಶೆಟ್ಟಿ, ಬಳ್ಳಾರಿ ಮುರಿಗೆಪ್ಪ, ಸಿದ್ದಮ್ಮ ಕೆ. ಟಿ. ಜಂಭಣ್ಣ, ಗಾಂಜೀ ವೀರಪ್ಪ, ಮಲ್ಲಾಬಾದಿ ಕೊಟ್ರಪ್ಪ, ವಿರೂಪಾಕ್ಷಪ್ಪ, ಮೌನೇಶ್ವರಪ್ಪ, ಸಿದ್ದರಾಮಪ್ಪ) ಮತ್ತಿತರರು ಜೈಲಲ್ಲಿದ್ದವರಾಗಿದ್ದರು. ಹರಿಹರದಲ್ಲಿ ಜರುಗಿದ ಮೈಸೂರು ಕಾಂಗ್ರೆಸ್ ಅಧಿವೇಶನದಲ್ಲಿ ಒಂದು ತಿಂಗಳು ಸೇವಕರಾಗಿ ದುಡಿದ ವ್ಯಕ್ತಿ. 1942ರಲ್ಲಿ ಧಾರವಾಡ ಜಿಲ್ಲೆಯ ಕೆಲವರು ಹರಿಹರದಲ್ಲಿ ತಾರು ಕಂಬ ಕಿತ್ತು ಹಾಕಿದರೆಂಬ ಕಾರಣಕ್ಕೆ ಮತ್ತೆ ಮಹದೇವಪ್ಪ ಮತ್ತು ಚನ್ನವೀರಪ್ಪನವರನ್ನು ಬಂಧಿಸಿ ದೂರದ ಕಪ್ಪತಗುಡ್ಡದಲ್ಲಿರಿಸಿ ಊಟ, ತಿಂಡಿ ಏನೂ ಕೊಡದೇ ಹಿಂಸೆ ಅನುಭವಿಸಿ ಅಲ್ಲಿಂದ ಕಾಲುನಡಿಗೆಯಲ್ಲೇ ಗ್ರಾಮ ತಲುಪಿದರು. ನಂತರ ಧಾರವಾಡ ಜಿಲ್ಲೆಯ ಮೆಣಸಿನಹಾಳ್ ತಿಮ್ಮನಗೌಡ ಇವರ ಬಳಿ ಇದ್ದರೆಂಬ ಗುಮಾನಿ ಮೇಲೆ ಮತ್ತೆ ಪೊಲೀಸ್ ಠಾಣೆಗೆ ಕರೆದೊಯ್ದು ಐದು ದಿನಗಳ ಕಾಲ ಚಿತ್ರಹಿಂಸೆ ನೀಡಿದ್ದಾರೆ. ಹರಿಹರದಲ್ಲಿ ರೈಲು ಹಳಿ ಕಿತ್ತರೆಂಬ ಆರೋಪದ ಮೇಲೆ ಮತ್ತೆ ಮಹದೇವಪ್ಪ, ಚನ್ನವೀರಪ್ಪನವರನ್ನು ಬಂಧಿಸಿದರು.

ದಾವಣಗೆರೆಯಲ್ಲಿ ಭಾರೀ ಮೆರವಣಿಗೆ ನಡೆದು ಗೋಲಿಬಾರ್‌ನಲ್ಲಿ ಇಬ್ಬರು ಸ್ಥಳದಲ್ಲಿ ಸಾವನ್ನಪ್ಪಿದ್ದು, ಇನ್ನೊಬ್ಬ ವಕೀಲರಾದ ಕಲ್ಲಪ್ಪ ಎಂಬುವರ ಕಾಲಿಗೆ ಗುಂಡು ಬಡಿದು ಅಂಗಹೀನರಾದರು.

ಹರಿಹರ ತಾಲ್ಲೂಕು ಸ್ವಾತಂತ್ರ್ಯ ಹೋರಾಟಗಾರರಾದ ಮರಾಠಿ ಹನುಮಂತ ರಾಯರು, ಟಿ. ಗುರುಸಿದ್ದಪ್ಪ, ಎಂ.ಮುರಿಗೆಪ್ಪ, ಮತ್ತು ನಾರಾಯಣ ಸಾ, ಜಿಗಳಿಯ ವೆಂಕಣ್ಣಶೆಟ್ಟಿ, ಕುಂಬಳೂರು ಕಮ್ಮಾರ ಚನ್ನವೀರಪ್ಪ, ನಂದಿ ಗಾವಿಯ ಎನ್. ಎಂ. ಚಂದ್ರಶೇಖರಯ್ಯ, ಹರಳಹಳ್ಳಿಯ ಸಣ್ಣ ಹನುಮಂತಪ್ಪ, ಕೊಪ್ಪದ ಲಾಯರ್ ಕೆ. ಕೆಂಚಪ್ಪ, ಸಿರಿಗೆರೆಯ ಕುಂದೂರು ರಾಮಪ್ಪ, ಮಲೇಬೆನ್ನೂರು ಮಾದಿಗರ ಬಸಪ್ಪ ಹಾಗೂ ಇನ್ನೂ ಅನೇಕರಿಗೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದಿಂದ ಸ್ವಾತಂತ್ರ್ಯ ಯೋಧರ ತಾಮ್ರ ಪತ್ರ ನೀಡಿದ್ದನ್ನು ಮರೆಯುವಂತಿಲ್ಲ.

**- ಡಾ ಸೂರ್ಯನಾಥ್ ಕಾಮತ್,** ಮಾಹಿತಿ ಸಂಗ್ರಹ
ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು

# ಸ್ವಾತಂತ್ರ್ಯ ಹೋರಾಟಗಾರ ಅಮರನಾಥಸ್ವಾಮಿ ಕೊಳಕೂರ್



ಸ್ವಾತಂತ್ರ್ಯ ಹೋರಾಟಗಾರ ಅಮರನಾಥಸ್ವಾಮಿ ಕೊಳುಕೂರ್ ಸೊಪ್ಪಿ ಹಿರೇಮಠ ಅವರು ಕೂಡಲಸಂಗಮದ ಹತ್ತಿರ ಇರುವ ಸಂಗನಾಳ ಗ್ರಾಮದಲ್ಲಿ 26.01.1916 ರಲ್ಲಿ ಜನಿಸುತ್ತಾರೆ. ತಂದೆ ಬಸಯ್ಯ, ತಾಯಿ ಈರಮ್ಮ.

ಜೀವನದ ಬಂಡಿಯನ್ನು ಓಡಿಸಲು ಬಸಯ್ಯ ಅವರು ತಮ್ಮ ಹೆಂಡತಿ, ಮಕ್ಕಳೊಂದಿಗೆ ದಾವಣಗೆರೆಗೆ ಬಂದು ವಿನೋಬನಗರದಲ್ಲಿ ನೆಲೆಸುತ್ತಾರೆ. ಮಕ್ಕಳನ್ನು ಶಾಲೆಗೆ ಸೇರಿಸುತ್ತಾರೆ.

ಬೆಳೆದು ದೊಡ್ಡವರಾದ ಅಮರನಾಥ ಸ್ವಾಮಿಯವರಿಗೆ 1946 ರಲ್ಲಿ ಶಾರದಮ್ಮ ಎನ್ನುವವರೊಂದಿಗೆ ವಿವಾಹ ಆಗುತ್ತದೆ. ಶಾಲೆಯಲ್ಲಿ ಓದುತ್ತಿರುವಾಗಲೇ ಶಿಕ್ಷಕರ, ಸ್ನೇಹಿತರ ಒಡನಾಟದಲ್ಲಿ ಸ್ವಾತಂತ್ರ್ಯ ಸಂಗ್ರಾಮ ಕುರಿತು ತಿಳಿದಿದ್ದರು. ಹಾಗಾಗಿ 20 ನೇ ವಯಸ್ಸಿನಿಂದಲೇ ಚಳುವಳಿಯ ಚಟುವಟಿಕೆಯಲ್ಲಿ ತೊಡಗಿದ್ದರು. 1946 ರಲ್ಲಿ ಸ್ವಾತಂತ್ರ್ಯ ಹೋರಾಟವು ತೀವ್ರತೆಯನ್ನು ಪಡೆದಿತ್ತು, ಹಾಗಾಗಿ ಸ್ವಾಮಿಯವರು ; ವಿವಾಹವಾಗಿ ಕೆಲವೇ ದಿನಗಳಲ್ಲಿ ಸ್ವಾತಂತ್ರ್ಯ ಹೋರಾಟಕ್ಕೆಂದು ಮನೆ ಬಿಟ್ಟು ಹೋಗುತ್ತಾರೆ.

ಇವರ ಕಿರಿಯ ಸಹೋದರ ಶಂಭುಲಿಂಗಯ್ಯ ಅವರು ಕೂಡ ಚಳುವಳಿಯಲ್ಲಿ ಭಾಗವಹಿಸುತ್ತಾರೆ. ಬಳ್ಳಾರಿ ಸಿದ್ದಮ್ಮ, ಖಾದಿ ಸಿದ್ದಪ್ಪ, ಕರೆಪ್ಪರ ರೇವಣಸಿದ್ದಪ್ಪ, ಹುಳ್ಳೇರ್ ಮರುಳಸಿದ್ದಪ್ಪ, ಆಲೂರು ಬಸವರಾಜಪ್ಪ, ಹುಳ್ಳೇರ್ ಹನುಮಂತಪ್ಪ, ಕೋಡಬಳೆ ಚೆನ್ನಬಸಪ್ಪ ಮತ್ತಿತರರದ್ದು ದಾವಣಗೆರೆಯಲ್ಲಿ ಒಂದು ತಂಡ. ಅಮರನಾಥಸ್ವಾಮಿಯವರು ಈ ತಂಡದೊಂದಿಗೆ ಎಲ್ಲಾ ಹೋರಾಟಗಳಲ್ಲೂ ಸಕ್ರಿಯವಾಗಿ ಭಾಗಿಯಾಗುತ್ತಾರೆ. ಚಿತ್ರದುರ್ಗ, ಬಳ್ಳಾರಿ ಕಡೆ ಸಂಚರಿಸುವಾಗ ಅನೇಕ ಬಾರಿ ಪೊಲೀಸರಿಂದ ತಪ್ಪಿಸಿಕೊಂಡಿರುತ್ತಾರೆ. ಒಂದು ಅಜ್ಜಿಯ ಮನೆಯಲ್ಲಿ ರಕ್ಷಣೆ ಪಡೆದ ನಂತರ ; ಅಜ್ಜಿಯ ಒಂದು ಸೀರೆಯುಟ್ಟು ತಪ್ಪಿಸಿಕೊಳ್ಳುತ್ತಾರೆ. ಒಮ್ಮೆ ಸೆರೆ ಸಿಕ್ಕು ಬಳ್ಳಾರಿ ಜೈಲಿನಲ್ಲಿ ಆರು ತಿಂಗಳುಗಳ ಕಾಲ ಸೆರೆವಾಸ ಅನುಭವಿಸುತ್ತಾರೆ.

ಸ್ವಾತಂತ್ರ್ಯ ಸಿಕ್ಕ 1947 ರ ನಂತರ ಮರಳಿ ಮನೆಗೆ ಬರುತ್ತಾರೆ.

ಕೆಲವು ತಿಂಗಳ ನಂತರ ರಕ್ಷಣೆ ಮಾಡಿದ್ದ ಅಜ್ಜಿ ಹತ್ತಿರ ಹೋಗಿ, ಒಂದು ಸೀರೆ ಕೊಟ್ಟು ನಮಸ್ಕರಿಸಿ, ಬರುತ್ತಾರೆ. ಜೀವನೋಪಾಯಕ್ಕಾಗಿ ಕಟ್ಟಿಗೆ ಡಿಪೋ, ಕಿರಾಣಿ ಅಂಗಡಿ ಮಾಡಿಕೊಂಡು, ಹಸುಗಳನ್ನು ಸಾಕಿಕೊಂಡು ಇದ್ದರು.

ಜೊತೆಗೆ ಭಕ್ತರ ಮನೆಗೆ ತೆರಳಿ ಧಾರ್ಮಿಕ ಪೂಜಾ ವಿಧಿ, ವಿಧಾನಗಳನ್ನು ನಡೆಸುತ್ತಾ; ಅನೇಕ ಭಕ್ತರನ್ನು ಹೊಂದಿದ್ದರು.

ಇವರಲ್ಲಿ ಸಮಾಜಕ್ಕೆ ಏನಾದರು ಕಿಂಚಿತ್ತು ಸೇವೆ ಮಾಡಬೇಕು ಎಂಬ ತವಕ ಇತ್ತು. ಹಾಗಾಗಿ ಒಬ್ಬ ಭಕ್ತರು ದಾವಣಗೆರೆಯ ವಸಂತ ಟಾಕೀಸ್ ಹತ್ತಿರ ಒಂದು ಮನೆಯನ್ನು ಬಾಡಿಗೆ ಇಲ್ಲದೇ ಕೊಡುತ್ತಾರೆ, ಅಲ್ಲಿ ಹಾಸ್ಟೆಲ್ ಮಾಡಿ ಓದುವ ಕೆಲವು ಮಕ್ಕಳಿಗೆ ನೆರಳಾಗುತ್ತಾರೆ. ಕಂತಿ ಭಿಕ್ಷೆ ಮಾಡಿಕೊಂಡು ತಂದು ಮಕ್ಕಳನ್ನು ನೋಡಿಕೊಳ್ಳುತ್ತಾರೆ.

ಇವರಿಗೆ ನಾಲ್ಕು ಜನ ಹೆಣ್ಣು ಮಕ್ಕಳು ಅನುಸೂಯಮ್ಮ, ಪಾರ್ವತಮ್ಮ, ಗಿರಿಜಮ್ಮ, ನಾಗರತ್ನ. ಅಮರನಾಥ ಸ್ವಾಮಿಯವರು 15.06.1975 ರಲ್ಲಿ ನಿಧನರಾಗುತ್ತಾರೆ.


ಭಕ್ತನೋರ್ವನ ಇಚ್ಛೆಯಂತೆ ಲಕ್ಷ್ಮಿ ಫ್ಲೋರ್ ಮಿಲ್ ಎದುರಿಗಿರುವ ಅವರ ಜಾಗದಲ್ಲಿ ಸಮಾಧಿ ಮಾಡುತ್ತಾರೆ.

ಪ್ರತಿ ವರ್ಷ ಸ್ವಾಮಿಯವರ ಮಡದಿ, ಮಕ್ಕಳು, ಮೊಮ್ಮಕ್ಕಳು ಸಮಾಧಿಗೆ ಹೋಗಿ ಪೂಜಿಸಿ ಬರುತ್ತಿದ್ದರಂತೆ. ಸರ್ಕಾರ ಇವರಿಗೆ ತಾಮ್ರ ಪತ್ರವನ್ನು ನೀಡಿ ಗೌರವಿಸಿದೆ,

ಇವರ ವಿವಾಹ ಆಮಂತ್ರಣ ಪತ್ರಿಕೆಯನ್ನು, ಸರ್ಕಾರ ಕೊಟ್ಟ ತಾಮ್ರ ಪತ್ರವನ್ನು, ದಾಖಲೆಗಳನ್ನು ಮಕ್ಕಳು ರಕ್ಷಿಸಿ ಇಟ್ಟಿದ್ದಾರೆ.

ಕಾಲದ ಮಿತಿಯಲ್ಲಿ ಕೆಲವು ಕಳೆದು ಹೋಗುತ್ತವೆ ಎನ್ನುವಂತೆ, ಇವರು ಮಾಡಿದ್ದ ಹಾಸ್ಟೆಲ್, ಇವರ ಸಮಾಧಿ ಸ್ಥಳ ನಾಶವಾಗಿ ಹೊಸ ಕಟ್ಟಡಗಳು ನಿಂತಿವೆ.

ಮಡದಿ ಶಾರದಮ್ಮನವರು ವಿನೋಬನಗರದ ತಮ್ಮ ಮನೆಯ ಮೇಲೆ ಪ್ರತಿ ವರ್ಷ ಸ್ವಾತಂತ್ರ್ಯ ದಿನಾಚರಣೆಯಂದು ರಾಷ್ಟ್ರ ಧ್ವಜ ಹಾರಿಸುತ್ತಿದ್ದರು, ಮೂರು ವರ್ಷದ ಹಿಂದೆ ಅವರೂ ಸಹ ನಿಧನರಾದರು.



**- ಶಿವಪ್ರಸಾದ ಕರ್ಜಗಿ,**
ದಾವಣಗೆರೆ.

## ಸ್ವಾತಂತ್ರ್ಯಯಾನ..

ಹಾರುತಿದೆ ಹಾರುತಿದೆ ತಿರಂಗ ಧ್ವಜವು
ಚೆಲ್ಲುತ ಗೆಲ್ಲುತ ಸ್ವಾತಂತ್ರ್ಯದ ನಗುವು
ಭಾರತೀಯರೆಲ್ಲ ಒಂದೇ ಎಂಬ ಭಾವವು
ಅಚ್ಚಳಿಯದೆ ಉಳಿದಿದೆ ಸ್ವಾತಂತ್ರ್ಯ ಹೋರಾಟಗಾರರ ತ್ಯಾಗವು

ಕೆಚ್ಚೆದೆಯ ಕೇಸರಿ ಕಂಪು
ಹಿಮಾಲಯದಿ ಶಾಂತಿ ಇಂಪು
ಹಸಿರಾಗಿಹ ಉಸಿರ ಕಳೆ
ತೂಗುತಿದೆ ಪ್ರಗತಿಯ ಬೆಳೆ

ಹಿಮರಾಶಿಲಿ ಅವಿತ ಇತಿಹಾಸವು
ಜಲರಾಶಿಯಲ್ಲೂ ಜಿನುಗುವ ಪರಾಕ್ರಮವು
ನೆತ್ತರಿನಲ್ಲಿ ಉರಿಯುತ್ತಿದೆ ಸ್ವಾತಂತ್ರ್ಯದ ಹಣತೆಯು
ತಾಯಿ ಭಾರತಾಂಬೆಯ ಮಡಿಲಿನ ಶಕ್ತಿಯು

ಭೇದ-ಭಾವ ಎಲ್ಲ ತೊರೆದು ಭಾವೈಕ್ಯತೆ ಸಾರೋಣ
ಜಾತಿ ಮತದ ಗಡಿಯ ಮೀರಿ ಒಂದಾಗಿ ಬಾಳೋಣ
ನಾಡ ನುಡಿ ಗಡಿಗಳ ರಕ್ಷಣೆಗೆ ಸಿದ್ಧರಾಗಿ ನಿಲ್ಲೋಣ
ಸ್ವಾತಂತ್ರ್ಯ ಹೋರಾಟಗಾರರ ಮೌಲ್ಯಗಳ ಅನುಸರಿಸೋಣ

**- ಬಸವರಾಜ ಕರುವಿನ,** ಬಸವನಾಳು.

# ಸ್ವಾತಂತ್ರ್ಯ ದಿನಾಚರಣೆ : ಇತಿಹಾಸ, ಮಹತ್ವ ಮತ್ತು ಮುಂದಿನ ಪೀಳಿಗೆಯ ಹೊಣೆಗಾರಿಕೆ

ಭಾರತದ ಸ್ವಾತಂತ್ರ್ಯ ದಿನಾಚರಣೆಯ ಆಚರಣೆಯು ಭಾರತದ ಇತಿಹಾಸದಲ್ಲಿಯೇ ಮಹತ್ವದ ದಿನವಾಗಿದೆ. ಪ್ರತಿ ವರ್ಷವೂ ಆಗಸ್ಟ್ 15 ರಂದು ಭಾರತವು ತನ್ನ ಸ್ವಾತಂತ್ರ್ಯವನ್ನು ಹೊಗಳಿ, ದೇಶ ದ್ರೋಹಿಗಳ ವಿರುದ್ಧ ನಡೆಸಿದ ನಿರಂತರ ಹೋರಾಟವನ್ನು ಸ್ಮರಿಸುತ್ತದೆ. ಈ ದಿನವು ಕೇವಲ ದೇಶದ ಸ್ವಾತಂತ್ರ್ಯದ ಪ್ರಜ್ಞೆಯನ್ನು ಮೆಲುಕು ಹಾಕಲು ಮಾತ್ರವಲ್ಲ, ಇಂದಿನ ಮತ್ತು ಮುಂದಿನ ಪೀಳಿಗೆಯ ಜನತೆಗೆ ಜಾಗೃತಿ ಮೂಡಿಸುವ ಗುರಿಯನ್ನೂ ಹೊಂದಿದೆ.

**ಸ್ವಾತಂತ್ರ್ಯದ ಹೋರಾಟದ ಪೈಪೋಟಿ :** ಭಾರತವು ಬ್ರಿಟಿಷರ ಆಳ್ವಿಕೆಗೆ ಒಳಪಟ್ಟಿದ್ದಾಗ, ದೇಶದ ಜನತೆ ದುರ್ಬಲ ಸ್ಥಿತಿಯಲ್ಲಿತ್ತು. ಬ್ರಿಟಿಷರು ಭಾರತದ ಸಂಪತ್ತನ್ನು ಕಿತ್ತುಕೊಳ್ಳುವುದರ ಜೊತೆಗೆ ಸ್ಥಳೀಯರನ್ನು ಶೋಷಿಸುತ್ತಿದ್ದರು. ಈ ಅವಸ್ಥೆಯೊಂದಿಗೆ, ಅನೇಕ ದೇಶಭಕ್ತರು ಬ್ರಿಟಿಷರ ವಿರುದ್ಧ ಹೋರಾಟ ನಡೆಸಲು ಮುಂದಾದರು. ಈ ಹೋರಾಟವು ಸಾಮಾನ್ಯವಾಗಿ ಎರಡು ದಿಕ್ಕುಗಳಲ್ಲಿ ನಡೆಯಿತು: ಸಹಿಷ್ಣುತೆ ಮತ್ತು ಅಸಹಿಷ್ಣುತೆ. ಮಹಾತ್ಮ ಗಾಂಧಿಯವರ (Non-Cooperation Movement) ಅಸಹಕಾರ ಚಳವಳಿ (Civil Disobedience Movement) ಈ ಹೋರಾಟಕ್ಕೆ ಉದಾಹರಣೆಗಳಾಗಿವೆ. ಇವುಗಳಲ್ಲಿ ಗಾಂಧಿಯವರು ಸಹನೆ ಮತ್ತು ಹಿಂಸೆ ಮುಕ್ತ ಹೋರಾಟದ ಮಾರ್ಗವನ್ನು ಅನುಸರಿಸಿದರು. ಇತರೆ ನಾಯಕರಾದ ನೇತಾಜಿ ಸುಭಾಷ್ ಚಂದ್ರ ಬೋಸ್, ನೆಹರು, ಭಗತ್ ಸಿಂಗ್, ಚಂದ್ರಶೇಖರ್ ಆಜಾದ್ ಮತ್ತು ಇತರರು ಅಸಹಿಷ್ಣುತಾ ಹೋರಾಟದ ಮಾರ್ಗವನ್ನು ಅನುಸರಿಸಿದರು. ಈ ಎಲ್ಲಾ ಹೋರಾಟದ ಫಲವಾಗಿ, ಭಾರತವು 1947ರ ಆಗಸ್ಟ್ 15ರಂದು ಬ್ರಿಟಿಷರಿಂದ ದೇಶ ಸ್ವತಂತ್ರವಾಯಿತು.

**ಸ್ವಾತಂತ್ರ್ಯದ ಮಹತ್ವ :** ಸ್ವಾತಂತ್ರ್ಯದ ಹೋರಾಟವು ಬಲವಂತದ ಶೋಷಣೆಯಿಂದ ಮುಕ್ತಿಯನ್ನು ಮಾತ್ರವಲ್ಲ, ದೇಶದ ಜನತೆಗೆ ಹೊಸ ಉತ್ಸಾಹವನ್ನು ಮತ್ತು ಆತ್ಮ ಗೌರವವನ್ನು ಕೊಟ್ಟಿತು. ಸ್ವಾತಂತ್ರ್ಯವು ಕೇವಲ ರಾಜಕೀಯ ಶಕ್ತಿ ಮತ್ತು ಆಡಳಿತ ಮಾಡುವ ಹಕ್ಕನ್ನು ಮಾತ್ರ ನೀಡಿದುದಲ್ಲ, ಅದು ನಮ್ಮ ದೇಶದ ಅತೀತವಾದ ಧಾರ್ಮಿಕ, ಸಾಂಸ್ಕೃತಿಕ ಮತ್ತು ಭಾಷೆಯ ವೈವಿಧ್ಯತೆಯ ಮೆಲುಕು ಹಾಕಲು ಸಹ ಅನುವಾಗಿಸಿತು. ಸ್ವಾತಂತ್ರ್ಯ ದಿನವು ನಮ್ಮ ಹೋರಾಟಗಾರರ ತ್ಯಾಗವನ್ನು ಸ್ಮರಿಸುವ ದಿನ. ಅವರು ತಮ್ಮ ಸ್ವಾತಂತ್ರ್ಯದ ಕನಸುಗಳಿಗಾಗಿ ತಮ್ಮ ಪ್ರಾಣವನ್ನು ಹೋರಾಟಕ್ಕೆ ಅರ್ಪಿಸಿದರು. ನಮ್ಮ ಸ್ವಾತಂತ್ರ್ಯ ಹೋರಾಟದ ನಾಯಕರಿಗೆ, ಬಲಿದಾನಿಗಳಿಗೆ ಗೌರವ ಸಲ್ಲಿಸುವ ಒಂದು ದಿನವಾಗಿದ್ದು, ನಾವು ಅವರ ತ್ಯಾಗವನ್ನು ನಮ್ಮ ಸಂಸ್ಕೃತಿಯಲ್ಲಿ ಅಂಕಿತಗೊಳಿಸಬೇಕಾಗಿದೆ.

**ಮುಂದಿನ ಪೀಳಿಗೆಯ ಹೊಣೆಗಾರಿಕೆ :** ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವುದು ಮುಂದಿನ ಪೀಳಿಗೆಯ ಪ್ರಮುಖ ಹೊಣೆಗಾರಿಕೆಯಾಗಿದೆ. ಭಾರತವು ತಂತ್ರಜ್ಞಾನ, ಆರ್ಥಿಕತೆ ಮತ್ತು ಶಿಕ್ಷಣದ ಅಖಾಡದಲ್ಲಿ ಪ್ರಗತಿ ಸಾಧಿಸುತ್ತಿದ್ದರೂ, ದೇಶವು ಇನ್ನೂ ಕೆಲವು ಸವಾಲುಗಳನ್ನು ಎದುರಿಸುತ್ತಿದೆ. ಬಡತನ, ಬೇರೆ ಸಾಗುವಿಕೆ, ಶಿಕ್ಷಣದ ಅಸಮಾನತೆ, ಭ್ರಷ್ಟಾ



ಚಾರ, ಮತ್ತು ಸಾಂಪ್ರದಾಯಿಕ ಹಿಂಸಾಚಾರ ಹೀಗೆ ಹಲವಾರು ಸವಾಲುಗಳು ಇಂದಿಗೂ ನಮ್ಮ ದೇಶವನ್ನು ಕಾಡುತ್ತಿವೆ.ಇಂತಹ ಸವಾಲುಗಳನ್ನು ಎದುರಿಸಲು ಮುಂದಿನ ಪೀಳಿಗೆಯವರು ತಮ್ಮ ಹೊಣೆಗಾರಿಕೆಯನ್ನು ನಿಭಾಯಿಸ ಬೇಕಾಗಿದೆ. ಅವರು ಜಾಗೃತರಾಗಿದ್ದು, ಶ್ರದ್ಧೆಯಿಂದ ದೇಶವನ್ನು ನಿರ್ಮಾಣ ಮಾಡುವ ಹೊಣೆಗಾರರು. ಶಿಕ್ಷಣ, ಉತ್ತಮ ರಾಜಕೀಯ ಜ್ಞಾನ, ಮತ್ತು ಪ್ರಜಾಪ್ರಭುತ್ವದ ಸ್ಥಾಪನೆ ನಮ್ಮ ಮುಂದಿನ ಪೀಳಿಗೆಗೆ ಅತ್ಯವಶ್ಯಕವಾಗಿದೆ. ಅಲ್ಲದೆ, ದೇಶದ ಸಮುದಾಯದೊಳಗಿನ ಬಾಂಧವ್ಯವನ್ನು ಪೋಷಿಸುವುದು, ಧಾರ್ಮಿಕ ಸಹಿಷ್ಣುತೆ ಮತ್ತು ಸಮಾನತೆ ಬೆಳೆಸುವುದು ಕೂಡಾ ಈ ಹೊಣೆಗಾರಿಕೆಗೆ ಸೇರಬಹುದು. ಇದು ಹೊಸ ತಂತ್ರಜ್ಞಾನಗಳ ಉಪಯೋಗವನ್ನು ಸಮರ್ಥ ವಾಗಿ ಮಾಡುವುದರೊಂದಿಗೆ, ಭಾರತೀಯ ಸಂಸ್ಕೃತಿಯ ಅತ್ಯಂತ ತತ್ವಶಾಸ್ತ್ರಗಳನ್ನು ಉಳಿಸಿಕೊಳ್ಳಬೇಕಾಗಿದೆ.

**ಸಂಸ್ಕೃತಿಯ ಉಳಿವು ಮತ್ತು ಭಾವೀ ಪ್ರಯತ್ನಗಳು :** ನಮ್ಮ ಸಂಸ್ಕೃತಿಯ ಶ್ರೇಷ್ಠತೆಯನ್ನು ಪೋಷಿಸುವುದು ಮತ್ತು ನವೀ ಕರಣದ ಹಾದಿಯಲ್ಲಿ ನಡೆಯುವ ಪ್ರಯತ್ನಗಳು ಭಾರತದ ಮುಂದಿನ ಪೀಳಿಗೆಯ ಕಾರ್ಯವಾಗಬೇಕು. ನಾವು ಜಾಗತೀ ಕರಣದ ಪ್ರಭಾವವನ್ನು ಎದುರಿಸುತ್ತಿದ್ದರೂ, ನಮ್ಮ ಸಂಸ್ಕೃತಿಯ ಮೌಲ್ಯಗಳನ್ನು ಪೋಷಿಸುವುದು ಮುಖ್ಯವಾಗಿದೆ. ಭಾರತದ ಸಂಸ್ಕೃತಿಯ ವಿಭಿನ್ನತೆಯನ್ನು, ಭಾಷೆ, ಧರ್ಮ ಮತ್ತು ಪರಂಪ ರೆಯ ವೈವಿಧ್ಯತೆಯನ್ನು ಬೆಳೆಸುವುದು ಅವಶ್ಯಕವಾಗಿದೆ. ನಮ್ಮ ಸಂಸ್ಕೃತಿಯನ್ನು ಪೋಷಿಸುವ ಜೊತೆಗೆ, ಆರ್ಥಿಕ ಮತ್ತು ಸಾಂಸ್ಕೃತಿಕ ದೃಷ್ಟಿಕೋನಗಳನ್ನು ಹೊಂದಿದ ಪ್ರಗತಿಪರ ನಿಲು ವನ್ನು ಸ್ವೀಕರಿಸಬೇಕಾಗಿದೆ. ಈ ಪ್ರಯತ್ನವು ಕೇವಲ ಸರ್ಕಾರದ ಮಟ್ಟದಲ್ಲಿ ಮಾತ್ರವಲ್ಲ, ಪ್ರತಿಯೊಬ್ಬ ನಾಗರಿಕನೂ ತಮ್ಮ ಆದರ್ಶ ಮತ್ತು ಕೃತ್ಯಗಳಿಂದ ದೇಶದ ಏಕತೆಯನ್ನು ಪೋಷಿಸ ಬೇಕು.

ಒಟ್ಟಿನಲ್ಲಿ, ದೇಶವನ್ನು ಅಭಿವೃದ್ಧಿಯ ಹಾದಿಯಲ್ಲಿ ಮುನ್ನಡೆಸಲು ಪ್ರತಿಯೊಬ್ಬ ಭಾರತೀಯರೂ ತಮ್ಮ ಕೈಲಾದಷ್ಟು ಕೊಡುಗೆಯನ್ನು ನೀಡಬೇಕು.


**ಸಾಂಸ್ಕೃತಿಕ ಮಹತ್ವದ ಸಂಭ್ರಮ :** ಪ್ರತಿಯೊಬ್ಬ ಭಾರತೀಯನ ಜೀವನದಲ್ಲಿ ಸ್ವಾತಂತ್ರ್ಯ ದಿನವು ಕೇವಲ ಆಚರಣೆಯ ದಿನವಾಗಿರದೆ, ಅದರ ಹಿಂದಿರುವ ತತ್ವಗಳನ್ನು ಅರ್ಥಮಾಡಿಕೊಳ್ಳುವ ದಿನವಾಗಿರಬೇಕು. ಇದು ಕೇವಲ ಒಂದು ಪಾರಂಪರಿಕ ಆಚರಣೆ ಮಾತ್ರವಲ್ಲ, ನಮ್ಮ ದೇಶದ ಬೆಳವಣಿಗೆಗೆ, ಪ್ರಗತಿಗೆ, ಹಾಗೂ ಜಾಗೃತಿಯ ಸಂಕೇತವಾಗಿದೆ. ನಾವು ನಮ್ಮ ದೇಶವನ್ನು ಹೆಮ್ಮೆಯಿಂದ ಅವಲೋಕಿಸುವಾಗ, ಅದರ ಹಿಂದಿರುವ ತತ್ವಗಳನ್ನು ನಾವು ಅರ್ಥಮಾಡಿಕೊಳ್ಳುವುದು ಮುಖ್ಯವಾಗಿದೆ. ಈ ತತ್ವಗಳನ್ನು ಮುಂದಿನ ಪೀಳಿಗೆಯವರು ಅರ್ಥಮಾಡಿಕೊಳ್ಳುವುದರ ಮೂಲಕ, ಅವರಲ್ಲಿ ಒಂದು ಸಮರ್ಥ ಹಾಗೂ ಸಪ್ರಜ್ಞ ವ್ಯಕ್ತಿತ್ವವನ್ನು ಬೆಳೆಸಬಹುದು.

ಸ್ವಾತಂತ್ರ್ಯ ದಿನಾಚರಣೆ ಪ್ರತಿಯೊಬ್ಬ ಭಾರತೀಯನ ಜೀವನದಲ್ಲಿ ಮಹತ್ವದ ಸ್ಥಾನವನ್ನು ಹೊಂದಿದ್ದು, ನಮ್ಮ ದೇಶದ ಹೋರಾಟಗಾರರ ತ್ಯಾಗ ಮತ್ತು ಶ್ರದ್ಧೆಯನ್ನು ಸ್ಮರಿಸಲು, ಹಾಗೂ ಮುಂದಿನ ಪೀಳಿಗೆಯವರಿಗೆ ಪ್ರಜ್ಞೆ ಮತ್ತು ಹೊಣೆಗಾರಿಕೆಯನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ.

ಅಂತಿಮವಾಗಿ, ಭಾರತವು ತನ್ನ ಸ್ವಾತಂತ್ರ್ಯವನ್ನು ಪೋಷಿಸುವ ಮತ್ತು ಮುಂದಿನ ಪೀಳಿಗೆ ಕೈಲಾದಷ್ಟು ಕೊಡುಗೆಯನ್ನು ನೀಡುವ ಮೂಲಕ, ತನ್ನ ರಾಷ್ಟ್ರದ ಏಕತೆಯನ್ನು ಪೋಷಿಸಬೇಕು. ಸ್ವಾತಂತ್ರ್ಯ ದಿನವು ಭಾರತವನ್ನು ಮಾತ್ರವಲ್ಲ, ಪ್ರಪಂಚದಲ್ಲಿಯೇ ಒಂದು ಶ್ರೇಷ್ಠ ರಾಷ್ಟ್ರವಾಗಲು ಅಗತ್ಯವಾದ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ಮತ್ತು ರಾಜಕೀಯ ಬೆಳವಣಿಗೆಗಳಿಗೆ ಸ್ಫೂರ್ತಿಯಾಗಬೇಕು.

**- ಡಾ ವೆಂಕಟೇಶ್ ಬಾಬು ಎಸ್.**
ದಾವಣಗೆರೆ.

ವಾರ್ತಾ ಮತ್ತು ಸಾರ್ವಜನಿಕ
ಸಂಪರ್ಕ ಇಲಾಖೆ







'ನಿಜವಾದ ಸ್ವಾತಂತ್ರ್ಯ ಅಂದರೆ ಕೇವಲ ಕೆಲವರು ಅಧಿಕಾರವನ್ನು ಸ್ವಾಧೀನಪಡಿಸಿಕೊಳ್ಳುವುದಲ್ಲ, ಬದಲಾಗಿ ಪ್ರತಿಯೊಬ್ಬರಿಗೂ ಸಾಮರ್ಥ್ಯವನ್ನು ನೀಡುವುದೇ ನಿಜವಾದ ಸ್ವಾತಂತ್ರ್ಯ' - ಮಹಾತ್ಮ ಗಾಂಧೀಜಿ




**ಶಕ್ತಿ**

ಯೋಜನೆಯಡಿ ಮಹಿಳೆಯರು ಮತ್ತು ಹೆಣ್ಣುಮಕ್ಕಳ ಉಚಿತ ಬಸ್ ಪ್ರಯಾಣದ **ಟ್ರಿಪ್ ಗಳು 270 ಕೋಟಿ** ದಾಟಿದ್ದು, ಇದಕ್ಕಾಗಿ ಸರ್ಕಾರ ಈವರೆಗೂ **6,541 ಕೋಟಿ ರೂ.** ವೆಚ್ಚ ಮಾಡಿದೆ.



**ಗೃಹ ಜ್ಯೋತಿ**

ಯೋಜನೆಯಡಿ ಪ್ರತಿ ಮನೆಗೆ ನೀಡುತ್ತಿರುವ **200 ಯೂನಿಟ್** ಉಚಿತ ವಿದ್ಯುತ್ ನಿಂದಾಗಿ **1.6 ಕೋಟಿ** ಮನೆಗಳ ದೀಪ ಬೆಳಗುತ್ತಿದ್ದು, ಇದಕ್ಕಾಗಿ ಸರ್ಕಾರ ಈವರೆಗೂ ಒಟ್ಟು **8,844 ಕೋಟಿ ರೂ.** ವಿನಿಯೋಗಿಸಿದೆ.



**ಗೃಹಲಕ್ಷ್ಮಿ**

ಯೋಜನೆಯಡಿ ಪ್ರತಿ ತಿಂಗಳು ಮಹಿಳೆಯರಿಗೆ ನೀಡುತ್ತಿರುವ **2000 ರೂಪಾಯಿ** ರಾಜ್ಯದ **1.25 ಕೋಟಿ** ಮಹಿಳೆಯರನ್ನು ಸಶಕ್ತಗೊಳಿಸುತ್ತಿದ್ದು, ಇದಕ್ಕಾಗಿ ಸರ್ಕಾರ ಈವರೆಗೂ ಒಟ್ಟು **25,259 ಕೋಟಿ ರೂ.** ಭರಿಸಿದೆ.



**ಅನ್ನಭಾಗ್ಯ**

ಯೋಜನೆಯಡಿ **4.08 ಕೋಟಿ** ಜನರಿಗೆ ಹೆಚ್ಚುವರಿ 5 ಕೆ.ಜಿ. ಆಹಾರಧಾನ್ಯದ ಬದಲಿಗೆ 170 ರೂ.ನಂತೆ ಇದುವರೆಗೂ ಸರ್ಕಾರ **7,763 ಕೋಟಿ ರೂ.** ಪಾವತಿಸಿದೆ.



**ಯುವನಿಧಿ**

ಯೋಜನೆಯಡಿ ಡಿಪ್ಲೊಮಾ ಮತ್ತು ಪದವೀಧರರಿಗೆ ಪ್ರತಿ ತಿಂಗಳು ನೀಡುತ್ತಿರುವ **1500-3000 ರೂ.** ರಾಜ್ಯದ **1.31 ಲಕ್ಷ** ನಿರುದ್ಯೋಗಿ ಯುವಕರನ್ನು ಸಶಕ್ತಗೊಳಿಸಿದೆ. ಇದಕ್ಕಾಗಿ ಸರ್ಕಾರವು ಈವರೆಗೂ **91 ಕೋಟಿ ರೂ.** ನೀಡಿದೆ.

## "ಸಮಾಜದ ಎಲ್ಲಾ ವರ್ಗಗಳಿಗೂ...

ಹಸಿವಿನಿಂದ ಸ್ವಾತಂತ್ರ್ಯ
ಬಡತನದಿಂದ ಸ್ವಾತಂತ್ರ್ಯ
ಕತ್ತಲೆಯಿಂದ ಸ್ವಾತಂತ್ರ್ಯ
ಸಂಕೋಲೆಗಳಿಂದ ಸ್ವಾತಂತ್ರ್ಯ
ನಿರುದ್ಯೋಗದಿಂದ ಸ್ವಾತಂತ್ರ್ಯ

... ಸಿಕ್ಕಾಗ ಮಾತ್ರ ನಿಜವಾದ ಸ್ವಾತಂತ್ರ್ಯ ಸಿಕ್ಕಿದಂತಾಗುತ್ತದೆ."



**ಶ್ರೀ ಡಿ. ಕೆ. ಶಿವಕುಮಾರ್**
ಮಾನ್ಯ ಉಪಮುಖ್ಯಮಂತ್ರಿಗಳು



**ಶ್ರೀ ಸಿದ್ದರಾಮಯ್ಯ**
ಸನ್ಮಾನ್ಯ ಮುಖ್ಯಮಂತ್ರಿಗಳು

## ಕರ್ನಾಟಕ ಸರ್ಕಾರ...

# ಗ್ಯಾರಂಟಿ ಸರ್ಕಾರ...

**ನುಡಿದಂತೆ ನಡೆದಿದ್ದೇವೆ...**

ಶಕ್ತಿ — ಮಹಿಳೆಯರಿಗೆ ಬಸ್ ಪ್ರಯಾಣ ಉಚಿತ

ಗೃಹ ಜ್ಯೋತಿ — ಪ್ರತಿ ಮನೆಗೆ 200 ಯೂನಿಟ್‌ವರೆಗೆ ವಿದ್ಯುತ್ ಉಚಿತ

ಗೃಹಲಕ್ಷ್ಮಿ — ಪ್ರತಿ ಮನೆಯೊಡತಿಗೆ ಪ್ರತಿ ತಿಂಗಳು ₹2000

ಅನ್ನಭಾಗ್ಯ — ಬಡವರಿಗೆ ಪ್ರತಿ ತಿಂಗಳು 10 kg

ಯುವನಿಧಿ — ಪ್ರತಿ ತಿಂಗಳು ನಿರುದ್ಯೋಗ ಭತ್ಯೆ ₹3000 | ₹1500

"ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಮೂಲಭೂತ ಕರ್ತವ್ಯ"

CMofKarnataka dipr.karnataka.gov.in

ಕರ್ನಾಟಕ ವಾರ್ತೆ

# ಗ್ಯಾರಂಟಿ ಪರಿಷ್ಕರಿಸಿ: ಜಾರಕಿಹೊಳಿ



ಬೆಂಗಳೂರು, ಆ. 14 - ಗ್ಯಾರಂಟಿ ಯೋಜನೆ ಪರಿಷ್ಕರಿಸಿ, ಬಡವರಿಗಷ್ಟೇ ಸೀಮಿತಗೊಳಿಸ ಬೇಕೆಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅಭಿಪ್ರಾಯ ಪಟ್ಟಿದ್ದಾರೆ.

ಉಳ್ಳವರಿಗೂ ಈ ಯೋಜನೆ ನೀಡುವುದರಿಂದ ಯಾವುದೇ ಪ್ರಯೋಜನವಿಲ್ಲ. ಅದರ ಬದಲು ಕಡುಬಡವರಿಗೆ ಸವಲತ್ತುಗಳನ್ನು ನೀಡಿ, ಅವರ ಆರ್ಥಿಕ ಮಟ್ಟವನ್ನು ಹೆಚ್ಚಿಸೋಣ ಎಂದವರು ಹೇಳಿದ್ದಾರೆ.

ಇದು ನನ್ನ ಸ್ವಂತ ಅಭಿಪ್ರಾಯವಲ್ಲ. ರಾಜ್ಯದ ಬಹುಜನರ ಅಭಿಪ್ರಾಯವಾಗಿದೆ. ಸಾರ್ವಜನಿಕರ ಅಭಿಪ್ರಾಯದಂತೆ ಯೋಜನೆ ಪರಿಷ್ಕರಿಸಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಪಕ್ಷದ ವರಿಷ್ಠರ ಗಮನಕ್ಕೆ ತಂದಿದ್ದೇವೆ ಎಂದರು.

ದೆಹಲಿಯಿಂದ ಹಿಂತಿರುಗಿದ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸರ್ಕಾರ ಮತ್ತು ಪಕ್ಷ ಯಾವ ತೀರ್ಮಾನ ತೆಗೆದುಕೊಳ್ಳುತ್ತದೋ ಅದಕ್ಕೆ ನಾವು ಬದ್ದರಾಗಿರುತ್ತೇವೆ. ಆದರೆ ಸಾರ್ವಜನಿಕರ ಅಭಿಪ್ರಾಯದಂತೆ ಬಡವರಿಗಷ್ಟೇ ಸವಲತ್ತು ಮೀಸಲಿರ ಬೇಕು. ಗ್ಯಾರಂಟಿ ಯೋಜನೆಗಳಲ್ಲಿ ಕೆಲವು ನನಗೂ ದೊರೆಯುತ್ತಿವೆ. ಅಷ್ಟೇ ಅಲ್ಲ ಸರ್ಕಾರಿ ನೌಕರರಿಗೂ ಇದರ ಸೌಲಭ್ಯ ದೊರೆಯುತ್ತಿದೆ ಎಂದು ಹೇಳಿದರು.

ಇತಿಮಿತಿಯಲ್ಲಿ ವಿದ್ಯುತ್ ಬಳಕೆ ಮಾಡುವುದರಿಂದ ನನ್ನ ಮನೆಯ ವಿದ್ಯುತ್ ಬಿಲ್ ಶೂನ್ಯ ಬರುತ್ತದೆ. ನನಗೆ ಯೋಜನೆ ಕೊಡಿ ಎಂದು ನಾವೇನು ಅರ್ಜಿ ಹಾಕಿಲ್ಲ. ಅದು ಸ್ವಯಂ ಪ್ರೇರಿತವಾಗಿ ಬಂದಿದೆ.

ಇನ್ನು ಶಕ್ತಿ ಯೋಜನೆಯಡಿ ನಮ್ಮ ಕುಟುಂಬದವರು ಸಾರಿಗೆ ಸಂಸ್ಥೆ ಬಸ್‌ನಲ್ಲಿ ಪ್ರಯಾಣಿಸಿದರೆ, ಅವರಿಗೂ ಸವಲತ್ತು ದೊರೆಯುತ್ತಿದೆ. ಹೀಗಾಗಿ ಯೋಜನೆಯನ್ನು ಪರಿಷ್ಕರಿಸಿ, ಕಡುಬಡವರಿಗಷ್ಟೇ ಮೀಸಲಿರಿಸಲು ನನ್ನ ಮನವಿ ಎಂದು ಜಾರಕಿಹೊಳಿ ಹೇಳಿದರು.

ರಾಜ್ಯಾದ್ಯಂತ ಕಾರ್ಯಕರ್ತರು, ಸಾರ್ವಜನಿಕರು, ಸರ್ಕಾರಿ ನೌಕರರು ಇದೇ ಅಭಿಪ್ರಾಯ ಹೊಂದಿದ್ದಾರೆ. ನನ್ನ ಇಲಾಖೆಯ ಹಿರಿಯ ಅಧಿಕಾರಿಯ ಮನೆಯಲ್ಲಿ ಏಳು ಮಂದಿ ಸರ್ಕಾರಿ ನೌಕರರಿದ್ದಾರೆ. ಅವರೆಲ್ಲ ಕುಟುಂಬದವರಿ ಗೃಹ ಜ್ಯೋತಿ ಸವಲತ್ತು ದೊರೆಯುತ್ತಿದೆ.

ನಮಗೆ ಇದರ ಅವಶ್ಯಕತೆ ಇಲ್ಲ ಎಂದು ಅವರೇ ನನ್ನ ಬಳಿ ಹೇಳಿಕೊಂಡಿದ್ದಾರೆ. ನಾವು ವಿದ್ಯುತ್ ಬಿಲ್ ಭರಿಸುವ ಶಕ್ತಿ ನಮಗಿದೆ. ನಮ್ಮಂಥವರಿಗೆ ನೀಡುವ ಬದಲು ಬಡವರಿಗೆ ನೀಡಿ ಎಂದು ಮನವಿ ಮಾಡಿಕೊಂಡಿದ್ದಾರೆ.

ಇನ್ನು ನನ್ನ ಕುಟುಂಬದಲ್ಲೇ ಐವರು ಜನಪ್ರತಿನಿಧಿಗಳಿದ್ದಾರೆ. ಅವರೆಲ್ಲರಿಗೂ ಈ ಸೌಲಭ್ಯ ದೊರೆಯುತಿದೆ. ನಮಗೆ ಇದರ ಅವಶ್ಯಕತೆ ಇಲ್ಲ ಎಂದರು.

ಉಳ್ಳವರಿಗೆ ಈ ಸವಲತ್ತಿನ ಅಗತ್ಯವಿಲ್ಲ ಎಂದು ವರಿಷ್ಠರ ಗಮನಕ್ಕೆ ತಂದಿದ್ದೇವೆ. ಅಲ್ಲದೆ, ರಾಜ್ಯದಲ್ಲಿ ಗ್ಯಾರಂಟಿ ಯೋಜನೆಯ ಬಗ್ಗೆ ಸಾರ್ವಜನಿಕರ ಅಭಿಪ್ರಾಯಗಳನ್ನು ತಿಳಿ ಹೇಳಿದ್ದೇವೆ. ವರಿಷ್ಠರು ಯಾವ ನಿರ್ಧಾರ ಕೈಗೊಳ್ಳುತ್ತಾರೋ, ಅದಕ್ಕೆ ನಾವು ಬದ್ಧರಾಗಿರುತ್ತೇವೆ ಎಂದು ತಿಳಿಸಿದರು.

ಲೋಕಸಭಾ ಚುನಾವಣೆಯಲ್ಲಿ ಪಕ್ಷಕ್ಕೆ ಹಿನ್ನಡೆಯಾಗಿದೆ ಎಂಬ ಹಿನ್ನೆಲೆಯಲ್ಲಿ ಗ್ಯಾರಂಟಿ ಯೋಜನೆ ಕಡಿತ ಮಾಡಲು ಹೊರಟಿದ್ದೀರಾ? ಎಂಬ ಪ್ರಶ್ನೆಯನ್ನು ಸರಾಸಗಟವಾಗಿ ತಳ್ಳಿ ಹಾಕಿ, ಹಿಂದೆ ಬಿಜೆಪಿಯವರು ಎರಡು-ಮೂರು ಲಕ್ಷ ಅಂತರದಿಂದ ಆಯ್ಕೆಯಾಗುತ್ತಿದ್ದರು.

ಆದರೆ ಈ ಬಾರಿ ನಮ್ಮ ಕಡೆ ಶೇಕಡ 50 ರಷ್ಟು ಸ್ಥಾನಗಳು ಕಾಂಗ್ರೆಸ್‌ಗೆ ಲಭ್ಯವಾಗಿವೆ. ಆದರೆ ಬಿಜೆಪಿಯ ಆಯ್ಕೆ ಅಂತರ 20 ರಿಂದ 25 ಸಾವಿರಕ್ಕೆ ಕುಸಿದಿದೆ. ಗ್ಯಾರಂಟಿಯಿಂದ ಲಾಭವಾಗಿಲ್ಲ ಎನ್ನಲು ಸಾಧ್ಯವಿಲ್ಲ. ಆದರೆ ನಿರೀಕ್ಷಿತ ಗುರಿ ಮುಟ್ಟಲು ಸಾಧ್ಯವಾಗಲಿಲ್ಲ ಎಂದು ಸಮರ್ಥಿಸಿಕೊಂಡರು.

### ಗ್ಯಾರಂಟಿ ಪರಾಮರ್ಶೆಯ ಅಗತ್ಯವಿದೆ : ಎಂ.ಬಿ. ಪಾಟೀಲ್

ಗ್ಯಾರಂಟಿಗಳ ಪ್ರಯೋಜನವನ್ನು ಬಿಪಿಎಲ್ ಕುಟುಂಬಗಳಿಗೆ ಮಾತ್ರ ನೀಡಬೇಕು, ಬೇರೆಯವರಿಗೆ ಬೇಡ ಎಂದು ಭಾರಿ ಮತ್ತು ಮಧ್ಯಮ ಕೈಗಾರಿಕೆ ಸಚಿವ ಎಂ.ಬಿ. ಪಾಟೀಲ್ ಅಭಿಪ್ರಾಯ ಪಟ್ಟಿದ್ದಾರೆ.

ಗ್ಯಾರಂಟಿಗಳು ಕಾಂಗ್ರೆಸ್ ಪಕ್ಷದ ಬದ್ಧತೆಗಳು, ಹೀಗಾಗಿ ಅವುಗಳು ಮುಂದುವರೆಯುತ್ತವೆ. ಆದರೆ, ಬಡ ಕುಟುಂಬಗಳಿಗೆ ಮಾತ್ರ ಈ ಯೋಜನೆ ಇರಬೇಕು ಎಂದರು.

ರಾಜ್ಯದಲ್ಲಿ ಶೇ. 82 ರಷ್ಟು ಬಿಪಿಎಲ್ ಕುಟುಂಬಗಳಿವೆ. ಆ ಕುಟುಂಬಗಳು ಪ್ರಯೋಜನ ಪಡೆಯಬೇಕೆಂಬುದು ಗುರಿಯಾಗಿದೆ. ನಮ್ಮಂತಹವರು ಇದರ ಲಾಭ ಪಡೆಯುವುದರಲ್ಲಿ ಏನು ಪ್ರಯೋಜನ ಎಂಬ ಚಿಂತನೆ ಬಹಳ ದಿನಗಳಿಂದ ನಡೆಯುತ್ತಿದೆ ಎಂದವರು ಹೇಳಿದರು.

ಗ್ಯಾರಂಟಿ ಯೋಜನೆಗಳ ಬಗ್ಗೆ ಸಮಗ್ರ ಪರಾಮರ್ಶೆಯ ಅಗತ್ಯವಿದೆ. ಸೂಕ್ತ ಸಂದರ್ಭದಲ್ಲಿ ಸೂಕ್ತ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದರು.

# ಸಿರಿಗೆರೆ ಶ್ರೀಗಳನ್ನು ಬೆಂಬಲಿಸಿ, ಮೆಳ್ಳೇಕಟ್ಟೆಯಲ್ಲಿ ನಿರ್ಣಯ



ದಾವಣಗೆರೆ, ಆ. 14 - ತಾಲ್ಲೂಕಿನ ಮೆಳ್ಳೇಕಟ್ಟೆ ಗ್ರಾಮಸ್ಥರು ಬಿ.ಆರ್.ನಾಗರಾಜಪ್ಪ ಅವರ ಅಧ್ಯಕ್ಷತೆ ಮತ್ತು ಕಾರ್ಯದರ್ಶಿ ಡಿ.ಟಿ.ಹನುಮಂತಪ್ಪ ಅವರ ಸಮ್ಮುಖದಲ್ಲಿ ಗ್ರಾಮದ ಶ್ರೀ ವೀರಭದ್ರ ಸ್ವಾಮಿ ದೇವಸ್ಥಾನದಲ್ಲಿ ನಿನ್ನೆ ನಡೆದ ಸಭೆಯಲ್ಲಿ ತರಳಬಾಳು ಬೃಹನ್ಮಠ ಮತ್ತು ಜಗದ್ಗುರುಗಳ ಬಗ್ಗೆ ಕೆಲವರು ಮಾಡುತ್ತಿರುವ ಸುಳ್ಳು ವದಂತಿಗಳನ್ನು ಖಂಡಿಸಿ ಹಾಗೂ ಮುಂದಿನ ದಿನಗಳಲ್ಲಿ ಮಠದ ವಿಷಯದಲ್ಲಿ ಜಗದ್ಗುರುಗಳು ತೆಗೆದುಕೊಳ್ಳುವ ನಿರ್ಣಯಗಳನ್ನು ಬೆಂಬಲಿಸಲು ನಿರ್ಣಯ ಕೈಗೊಳ್ಳಲಾಯಿತು.

# ಶಿವಮೊಗ್ಗ ಹಾಲು ಒಕ್ಕೂಟ ಕಾಂಗ್ರೆಸ್ ತೆಕ್ಕೆಗೆ

## 14 ನಿರ್ದೇಶಕರ ಚುನಾವಣಾ ಆಯ್ಕೆಯಲ್ಲಿ ಬಿಜೆಪಿ 5 ಕಾಂಗ್ರೆಸ್ 9 ರ ಮುನ್ನಡೆ ?

### ದಾವಣಗೆರೆ ಜಿಲ್ಲಾ ಬಿಜೆಪಿ, ಕಾಂಗ್ರೆಸ್ ತಲಾ 2 ಸ್ಥಾನ



ಕಾಂಗ್ರೆಸ್‌ನ ಹನುಮನಹಳ್ಳಿ ಬಸಣ್ಣ, ದಾವಣಗೆರೆ ಚೇತನ್, ಸೋಮಶೇಖರ್, ಬಿಜೆಪಿಯ ಎಚ್.ಕೆ. ಬಸಪ್ಪ, ಹರಿಹರ ಜಗದೀಶಪ್ಪ ಬಣಕಾರ್ ಗೆಲುವು

ದಾವಣಗೆರೆ, ಆ. 14 - ದಾವಣಗೆರೆ ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘದ ನಾಲ್ಕು ನಿರ್ದೇಶಕರ ಚುನಾವಣೆಯಲ್ಲಿ ಕಾಂಗ್ರೆಸ್ ಎರಡು ಮತ್ತು ಬಿಜೆಪಿ ಎರಡು ಸ್ಥಾನಗಳನ್ನು ಪಡೆಯುವಲ್ಲಿ ಯಶಸ್ವಿಯಾಗಿವೆ.

ಕಾಂಗ್ರೆಸ್ ಬೆಂಬಲಿತರಾಗಿದ್ದ ಹೊನ್ನಾಳಿ ತಾಲ್ಲೂಕು, ಹನುಮನಹಳ್ಳಿ ಬಿ.ಜಿ. ಬಸವರಾಜಪ್ಪ 166 ಮತಗಳ ಪಡೆದು ಆಯ್ಕೆಯಾದರೆ ದಾವಣಗೆರೆಯ ಚೇತನ್, ಸೋಮಪ್ಪ 211 ಮತಗಳನ್ನು ಪಡೆದು ಆಯ್ಕೆಯಾಗಿದ್ದಾರೆ. ಬಿಜೆಪಿ ಬೆಂಬಲಿತ ರಾಗಿದ್ದ ಚನ್ನಗಿರಿ ಹೆಚ್.ಕೆ. ಬಸಪ್ಪ 176 ಮತಗಳ ಪಡೆದು ಆಯ್ಕೆಯಾದರೆ ಹರಿಹರದ ಜಗದೀಶಪ್ಪ ಬಣಕಾರ್ 182 ಮತಗಳ ಪಡೆದು ಆಯ್ಕೆಯಾಗಿದ್ದಾರೆ.

ಹನುಮನಹಳ್ಳಿ ಬಸಣ್ಣನವರ ಪ್ರತಿಸ್ಪರ್ಧಿಗಳಾಗಿ ಸ್ಪರ್ಧಿಸಿದ್ದ ಸ್ವತಂತ್ರ ಅಭ್ಯರ್ಥಿ ಹೊನ್ನಾಳಿ ತಾಲ್ಲೂಕು ಹಿರೇಗೋಣ್ಗೆರೆ ಬಿ.ಎಮ್. ಬಸವರಾಜಪ್ಪ 164 ಮತಗಳ ಪಡೆದರೆ, ಬಿಜೆಪಿ ಬೆಂಬಲಿತ ಅಭ್ಯರ್ಥಿ ಕುಂದೂರ್ ಅನಿಲ್ ಕುಮಾರ್ 133 ಮತಗಳನ್ನು ಮತ್ತೊಬ್ಬ ಸ್ವತಂತ್ರ ಅಭ್ಯರ್ಥಿ ನ್ಯಾಮತಿ ತಾಲ್ಲೂಕು ಎಚ್.ಕೆ. ಸುರೇಶ್ 38 ಮತಗಳ ಮಾತ್ರ ಪಡೆದಿರುವರು.

ದಾವಣಗೆರೆ ಚೇತನ್ ಸೋಮಪ್ಪ ಪ್ರತಿಸ್ಪರ್ಧಿ ಹೆಚ್ ಕೆ ಪಾಲಾಕ್ಷಪ್ಪ 143 ಮತಗಳ ಪಡೆದರು. ಚನ್ನಗಿರಿ ಎಚ್.ಕೆ. ಬಸಪ್ಪ ಪ್ರತಿಸ್ಪರ್ಧಿ ಕತ್ತಲಗೆರೆ ನಾಗರಾಜ್ 114 ಮತಗಳ ಪಡೆದರು. ಹರಿಹರ ಜಗದೀಶಪ್ಪ ಬಣಕಾರ್ ಪ್ರತಿಸ್ಪರ್ಧಿ ಡಿಸಿ ಶಾಂತವೀರಪ್ಪ 92 ಮತಗಳ ಪಡೆದಿರುವರೆಂದು ತಿಳಿದು ಬಂದಿದೆ.

ಹನುಮನಹಳ್ಳಿ ಬಸಣ್ಣನವರು ತಮ್ಮ ತಂಡದ ಚೇತನ್‌ಸೋಮಶೇಖರಪ್ಪನವರನ್ನ ಮಾತ್ರ ಗೆಲ್ಲಿಸಿಕೊಳ್ಳಲು ಸಾಧ್ಯವಾದರೆ ಚನ್ನಗಿರಿ ಹೆಚ್‌ಕೆ ಬಸಪ್ಪ ತಮ್ಮ ತಂಡದ ಜಗದೀಶಪ್ಪ ಬಣಕಾರರನ್ನ ಮಾತ್ರ ಗೆಲ್ಲಿಸಿಕೊಳ್ಳಲು ಸಾಧ್ಯವಾಗಿದ್ದು ಕಾಂಗ್ರೆಸ್ ಎರಡು ಬಿಜೆಪಿ ಎರಡು ಸಮಬಲದ ಪ್ರದರ್ಶನಕ್ಕೆ ಸಾಕ್ಷಿಯಾಗಿವೆ.

2024 ರಿಂದ 29ರ ಐದು ವರ್ಷಗಳ ಅವಧಿಗೆ ನಡೆದ ಶಿವಮೊಗ್ಗ ದಾವಣಗೆರೆ ಚಿತ್ರದುರ್ಗ ಸಹಕಾರಿ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ ನಿಯಮಿತದ 14 ನಿರ್ದೇಶಕರ ಚುನಾವಣೆಗೆ 31 ಅಭ್ಯರ್ಥಿಗಳು ಸ್ಪರ್ಧಿಸಿದ್ದರು ಇಂದು ಬೆಳಗ್ಗೆ 9:00 ರಿಂದ ಸಂಜೆ 4ರ ವರೆಗೆ ಮಾಚೇನಹಳ್ಳಿ ಶಿ ಮುಲ್ಕೇಂದ್ರ ಕಚೇರಿಯಲ್ಲಿ ಚುನಾವಣೆ ನಡೆಯಿತು ಇಬ್ಬರು ಅವಿರೋಧ ಆಯ್ಕೆ. ಶಿವಮೊಗ್ಗ ವಿಭಾಗದ ತೀರ್ಥಹಳ್ಳಿಯಿಂದ ಆರ್ ಎಂ ಮಂಜುನಾಥ್ ಗೌಡ ಸಾಗರ ವಿಭಾಗದ ಹೊಸನಗರದಿಂದ ವಿದ್ಯಾಧರ್ ಅವಿರೋಧವಾಗಿ ಆಯ್ಕೆಯಾಗಿರುವರು

ಚುನಾವಣೆ ಮೂಲಕ ಆಯ್ಕೆಯಾದ ವರು. ಶಿವಮೊಗ್ಗ ವಿಭಾಗದಿಂದ ಚುನಾವಣೆ ಮೂಲಕ ಇಬ್ಬರು ಆಯ್ಕೆಯಾಗಿರುವರು ಭದ್ರಾವತಿ ಡಿ ಎನ್ ಆನಂದ್ ಶಿವಮೊಗ್ಗ ತಾಲ್ಲೂಕು ಹೆಚ್ ಬಿ ದಿನೇಶ್ ಸಾಗರ ವಿಭಾಗದಿಂದ ಆಯ್ಕೆಯಾದ ಇಬ್ಬರು ಶಿಕಾರಿಪುರ ಟಿ ಶಿವಶಂಕ್ರಪ್ಪ ಸೊರಬ ಟಿ ಎಸ್ ದಯಾನಂದ್ ಗೌಡ್ರು ಆಯ್ಕೆಯಾಗಿರುವರು.

ಚಿತ್ರದುರ್ಗ ವಿಭಾಗದಿಂದ ಆಯ್ಕೆ ಯಾದ 4 ನಿರ್ದೇಶಕರು ಹೊಸ್ದುರ್ಗ ಬಿ ಆರ್ ರವಿಕುಮಾರ್ ಚಳ್ಳಕೆರೆ ಬಿಸಿ ಸಂಜೀವ್ ಮೂರ್ತಿ ಚಿತ್ರದುರ್ಗ ಜಿಪಿ ರೇವಣಸಿದ್ದಪ್ಪ ಹೊಳಲ್ಕೆರೆ ಜಿ ಬಿ ಶೇಖರಪ್ಪ ಇವರುಗಳು ಚುನಾವಣೆ ಮೂಲಕ ಆಯ್ಕೆಯಾಗಿರುವರು.

ಮಧ್ಯ ಕರ್ನಾಟಕದ ಅತಿ ದೊಡ್ಡ ಪ್ರತಿಷ್ಠಿತ ಸಹಕಾರಿ ಸಂಘ ಇದಾಗಿದ್ದು, ಶಿವಮೊಗ್ಗ 264, ಸಾಗರ 256, ದಾವಣಗೆರೆ 362, ಚಿತ್ರದುರ್ಗ 289 ಮತದಾರರ ಬಲವನ್ನು ಹೊಂದಿತ್ತು.

# ಕಾಂಗ್ರೆಸ್ ಜಿಲ್ಲಾಧ್ಯಕ್ಷರ ಹೇಳಿಕೆಗೆ ವಿನಯ್ ಖಂಡನೆ



ದಾವಣಗೆರೆ, ಆ. 14- ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರ ಪದಚ್ಯುತಿಗೆ ನಡೆಸುತ್ತಿರುವ ಕುತಂತ್ರಗಳ ಬಗ್ಗೆ ಮಾತನಾಡಿರುವುದೇ ಮಹಾ ಅಪರಾಧವೆಂಬಂತೆ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ. ಮಂಜಪ್ಪ ಅವರು ನನ್ನ ವಿರುದ್ಧ ಹೇಳಿಕೆ ನೀಡಿರುವುದು ಖಂಡ ನೀಯ ಎಂದು ಸ್ವಾಭಿಮಾನಿ ಬಳಗದ ಜಿ.ಬಿ. ವಿನಯ್ ಕುಮಾರ್ ತಿರುಗೇಟು ನೀಡಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಹಿಂದ ವರ್ಗಗಳ ಪರವಾಗಿದ್ದೇವೆ ಎಂದು ಹೇಳಿಕೊಳ್ಳುತ್ತಿರುವ ಕಾಂಗ್ರೆಸ್ ಜಿಲ್ಲಾಧ್ಯಕ್ಷರಾಗಿ ಅದೇ ವರ್ಗಗಳನ್ನು ಪ್ರತಿನಿಧಿಸುತ್ತಿರುವ ನನ್ನ ವಿರುದ್ಧ ಸುದ್ದಿಗೋಷ್ಠಿಯಲ್ಲಿ ಏಕ ವಚನ ಪ್ರಯೋಗಿಸಿರುವುದು ಶೋಷಿತ ವರ್ಗಗಳ ದುರದೃಷ್ಟ ಎಂದರು.

ವಿನಯ್ ಕುಮಾರ್ ಜಾತಿ-ಜಾತಿಗಳ ನಡುವೆ ದ್ವೇಷ ಹರಡುತ್ತಿದ್ದಾರೆ ಎಂಬ ಮಾತುಗಳನ್ನಾಡಿರುವ ಜಿಲ್ಲಾಧ್ಯಕ್ಷರು, ಲೋಕಸಭಾ ಚುನಾವಣೆ ನಡೆಯುವ ಎರಡು ದಿನಗಳ ಮುಂಚೆ ಪ್ರತ್ಯೇಕವಾಗಿ ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲಿರುವ ಕುರುಬ ಸಮುದಾಯದ ಸಭೆಯನ್ನು ಬಾಪೂಜಿ ಬ್ಯಾಂಕ್ ಸಮುದಾಯದಲ್ಲಿ ಕರೆದು 'ವಿನಯ್ ಕುಮಾರ್ ಗೆ ಒಂದೇ ಒಂದು ಮತ' ಹಾಕಬಾರದು ಎಂದು ಹೇಳಿಸಿದವರು ಯಾರು ಎಂದು ಆತ್ಮಾವಲೋಕನ ಮಾಡಿಕೊಳ್ಳಲಿ ಎಂದು ಹೇಳಿದರು.

ಹೊನ್ನಾಳಿಯಲ್ಲಿ ನಡೆದ ಸಭೆಯಲ್ಲಿ ಒಬ್ಬ ಕುರುಬ ಜಾತಿಯ ವ್ಯಕ್ತಿ ಸ್ಪರ್ಧೆ ಮಾಡಿದ್ದಾನೆ ಅಂತಾ ಓಟ್ ಹಾಕ್ತೀರಾ ಎಂದು ಹೇಳಿಸಿದವರು ಯಾರು? ಕಾಂಗ್ರೆಸ್ ಪಕ್ಷದ ಜಿಲ್ಲಾಧ್ಯಕ್ಷರು ಯಾಕೆ ತಡೆಯಲಿಲ್ಲ ? ಎಂದು ವಿನಯ್ ಪ್ರಶ್ನಿಸಿದರು.

2024 ರ ಲೋಕಸಭೆ ಚುನಾವಣೆಯಲ್ಲಿ ನಾನು ಸ್ಪರ್ಧೆ ಮಾಡಿದ್ದು ಪಕ್ಷೇತರ ಅಭ್ಯರ್ಥಿಯಾಗಿ, ನಾನು ಗೆಲ್ಲುವ ವಾತಾವರಣವಿದ್ದಾಗ, ನನಗೆ ಟಿಕೆಟ್ ತಪ್ಪಿಸಲು ಮತ್ತು ನನ್ನ ಮೇಲೆ ಜನರಿಗೆ ತಪ್ಪು ಅಭಿಪ್ರಾಯ ಮೂಡಿಸಲು ಸ್ವಾಮೀಜಿ ಹಾಗೂ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿಸುವಂತೆ ಮಾಡಿ, ಯಾವುದೇ ಮಾತುಕತೆಗೂ ಅವಕಾಶ ನೀಡದ ಸನ್ನಿವೇಶವನ್ನು ಸೃಷ್ಟಿಸಿದರು ಎಂದು ಆರೋಪಿಸಿದರು.

ಅಹಿಂದ ವರ್ಗದ ಪ್ರತಿನಿಧಿಯಾಗಿರುವ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಮಂಜಪ್ಪ ಅವರಿಗೆ ಹೊನ್ನಾಳಿ ವಿಧಾನಸಭಾ ಹಾಗೂ ದಾವಣಗೆರೆ ಲೋಕಸಭಾ ಕ್ಷೇತ್ರಕ್ಕೆ ಟಿಕೆಟ್ ಕೊಡಬೇಕಿತ್ತು. ಜಿಲ್ಲೆಯಲ್ಲಿ ಕಾಂಗ್ರೆಸ್ ಶಾಸಕರುಗಳು ಇಲ್ಲದೇ ಇದ್ದಾಗ ಗೆಲ್ಲುವ ವಾತಾವರಣ ಇಲ್ಲದೇ ಇರುವಾಗ ಅಹಿಂದ ವರ್ಗದವರಿಗೆ ಟಿಕೆಟ್ ನೀಡುತ್ತಾರೆ. 2024 ರಲ್ಲಿ ಗೆಲ್ಲುವ ವಾತಾವರಣವಿದ್ದಾಗ ಟಿಕೆಟ್ ತಪ್ಪಿಸಲಾಗುತ್ತದೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಪ್ರಸನ್ನಕುಮಾರ್, ಮೊಹಮ್ಮದ್ ಅಲ್ತಾಫ್ ಉಪಸ್ಥಿತರಿದ್ದರು.

### ಚುನಾವಣೆಗಾಗಿ ನಾನು ವಲಸೆ ಬಂದವನಲ್ಲ

ನನ್ನೂರು ಕಕ್ಕರಗೊಳ್ಳ. ನಾನು ಚುನಾವಣೆಗಾಗಿ ವಲಸೆ ಬಂದವನಲ್ಲ. ಸಾಧನೆ ಮಾಡಬೇಕೆಂಬ ಉದ್ದೇಶದಿಂದ ರಾಜಕೀಯ ರಂಗವನ್ನು ಆಯ್ಕೆ ಮಾಡಿ ಕೊಂಡಿದ್ದೇನೆ. ಕಾಂಗ್ರೆಸ್ ಜಿಲ್ಲಾಧ್ಯಕ್ಷರು ಒಂದೇ ಕುಟುಂಬದ ಪರವಾಗಿ ಮಾತನಾಡುತ್ತಿದ್ದಾರೆ. ವಿನಯ್ ಕುಮಾರ್ ಸಮಸ್ತ ಶೋಷಿತ ವರ್ಗಗಳ ಪರವಾಗಿ ಮಾತನಾಡುತ್ತಿದ್ದಾನೆ. ಈ ಸತ್ಯವನ್ನು ಜನರು ಅರಿತುಕೊಂಡಿದ್ದಾರೆ. ಜಿಲ್ಲಾ ಕಾಂಗ್ರೆಸ್ ಮುಖಂಡರಿಗೆ ಅಭದ್ರತೆ ಕಾಡುತ್ತಿದೆ ಎಂದು ವಿನಯ್ ಕುಮಾರ್ ತಿಳಿಸಿದರು.

ನಾನು ಕಾಂಗ್ರೆಸ್ ಪಕ್ಷದಲ್ಲಿ ಸಕ್ರಿಯನಾಗಿಲ್ಲ ಎಂದ ಮೇಲೆ ಉಚ್ಚಾ ಟನೆಯ ಪ್ರಶ್ನೆಯೇ ಉದ್ಭವವಾಗುವುದಿಲ್ಲ. ಯಾವ ಪಕ್ಷದಲ್ಲೂ ನಾನು ಗುರುತಿಸಿಕೊಂಡಿಲ್ಲ. ಯಾವ ರಾಜಕೀಯ ಮುಖಂಡರ ಮನೆಗೂ ಭೇಟಿ ನೀಡಿಲ್ಲ. ಪಕ್ಷೇತರನಾಗಿಯೇ ಒಂದು ಕ್ಷೇತ್ರವನ್ನು ಆಯ್ಕೆ ಮಾಡಿ ಮುಂದುವರೆಯುವ ಇಂಗಿತ ವ್ಯಕ್ತಪಡಿಸಿದರು.

ಪಕ್ಷಕ್ಕೆ ನಾನಾಗಿಯೇ ರಾಜೀನಾಮೆ ಕೊಡುವುದಿಲ್ಲ. ಉಚ್ಚಾಟನೆ ಮಾಡಿದರೂ ತೊಂದರೆಯಿಲ್ಲ ಎಂದು ಸ್ಪಷ್ಟಪಡಿಸಿದರು.

### ಯಾರ ಹಂಗಿನಲ್ಲೂ ಇಲ್ಲ, ನಾನು ಸ್ವಾಭಿಮಾನಿ

ನಾನು ಯಾರ ಹಂಗಿನಲ್ಲೂ ಇಲ್ಲ. ನಾನೊಬ್ಬ ಸ್ವಾಭಿಮಾನಿ, ಸ್ವಾವಲಂಬಿ ಕೂಡ ಮತ್ತು ಸ್ವತಂತ್ರವಾಗಿದ್ದೇನೆ. ರಾಜ್ಯಾದ್ಯಂತ 'ನಮ್ಮ ನಡೆ ಸರ್ಕಾರಿ ಶಾಲೆಗಳ ಕಡೆಗೆ' ಎಂದು 'ಸರ್ಕಾರಿ ಶಾಲೆಗಳನ್ನು ಉಳಿಸಿ' ಅಭಿಯಾನವನ್ನು ಪ್ರಾರಂಭಿಸುತ್ತಿದ್ದೇನೆ. ರಾಜಕೀಯವಾಗಿ ಕ್ಷೇತ್ರದಲ್ಲಿ ನನಗಾದ ಅನ್ಯಾಯ, ನಾನು ಎದುರಿಸಿದ ಕುತಂತ್ರಗಳನ್ನು ಬೇರೆ ಯಾರು ಅನುಭವಿಸಬಾರದು ಎನ್ನುವ ಕಾರಣಕ್ಕಾಗಿ ಜಾಗೃತಿ ಮೂಡಿಸುವ ಕಾರ್ಯದಲ್ಲಿ ನಿರತನಾಗಿದ್ದೇನೆ ಎಂದು ವಿನಯ್ ಕುಮಾರ್ ತಿಳಿಸಿದರು.

## ಹಸೀನಾ ವಿರುದ್ಧ ಅಂತರರಾಷ್ಟ್ರೀಯ ಅಪರಾಧ ನ್ಯಾಯಾಧೀಕರಣದಲ್ಲಿ ದೂರು

ಢಾಕಾ, ಆ. 14 - ಬಾಂಗ್ಲಾದೇಶದ ಪದಚ್ಯುತ ಪ್ರಧಾನಮಂತ್ರಿ ಶೇಖ್ ಹಸೀನಾ ಹಾಗೂ ಇತರೆ ಹಲವರು ಮಾನವೀಯತೆ ವಿರುದ್ಧ ಅಪರಾಧ ಎಸಗಿದ್ದಾರೆ ಎಂದು ಅಂತರರಾಷ್ಟ್ರೀಯ ಅಪರಾಧ ನ್ಯಾಯಾಧೀಕರಣದಲ್ಲಿ ದೂರು ದಾಖಲಿಸಲಾಗಿದೆ.

ಬಾಂಗ್ಲಾ ದೇಶದಲ್ಲಿ ಸಂಭವಿಸಿದ ತೀವ್ರ ಹಿಂಸಾಚಾರಗಳ ನಂತರ ಹಸೀನಾ ಅವರು ದೇಶದಿಂದ ಪಲಾಯನ ಮಾಡಿದ್ದರು.

ಬೃಹತ್ ಪ್ರತಿಭಟನೆ ವೇಳೆ ಪೊಲೀಸರ ಗುಂಡಿಗೆ ಬಲಿಯಾಗಿದ್ದ ವಿದ್ಯಾರ್ಥಿಯ ತಂದೆ ಒಬ್ಬರು ದೂರು ದಾಖಲಿಸಿದ್ದಾರೆ.

ಜುಲೈ 1 ರಿಂದ ಆಗಸ್ಟ್ ಐದರ ನಡುವೆ ನಡೆದ ಹತ್ಯೆಗಳ ಬಗ್ಗೆ ಅಂತರರಾಷ್ಟ್ರೀಯ ಅಪರಾಧ ನ್ಯಾಯಾಧೀಕರಣದ ಮೂಲಕ ತನಿಖೆ ನಡೆಸಲಾಗುವುದು ಎಂದು ಬಾಂಗ್ಲಾದೇಶದ ಹಂಗಾಮಿ ಸರ್ಕಾರ ತಿಳಿಸಿತ್ತು.

## ನಟ ದರ್ಶನ್ ನ್ಯಾಯಾಂಗ ಕಸ್ಟಡಿ ವಿಸ್ತರಣೆ

ಬೆಂಗಳೂರು, ಆ. 14 - ರೇಣುಕಸ್ವಾಮಿ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಚಿತ್ರನಟ ದರ್ಶನ್ ತೂಗುದೀಪ್ ಹಾಗೂ ಇತರೆ ಆರೋಪಿಗಳ ನ್ಯಾಯಾಂಗ ಕಸ್ಟಡಿ ಅವಧಿಯನ್ನು ಆ. 28ರ ವರೆಗೆ ವಿಸ್ತರಿಸಲಾಗಿದೆ.

ದರ್ಶನ್ ಸೇರಿದಂತೆ ಎಲ್ಲಾ 17 ಆರೋಪಿಗಳನ್ನು ವಿಡಿಯೋ ಕಾನ್ಫರೆನ್ಸ್ ಮೂಲಕ ಮ್ಯಾಜಿಸ್ಟ್ರೇಟ್ ಎದುರು ಹಾಜರುಪಡಿಸಲಾಯಿತು. ತನಿಖೆ ನಡೆಸಲು ಇನ್ನಷ್ಟು ಸಮಯ ಬೇಕು ಎಂದು ಕಾಮಾಕ್ಷಿಪಾಳ್ಯ ಪೊಲೀಸರು ಮನವಿ ಮಾಡಿಕೊಂಡರು.

ಎಲ್ಲಾ ಆರೋಪಿಗಳು ಅಪರಾಧದಲ್ಲಿ ಭಾಗಿಯಾಗಿರುವ ಬಗ್ಗೆ ಸಾಕಷ್ಟು ಸಾಕ್ಷಿಗಳಿವೆ ಹಾಗೂ ಅವರು ಪ್ರಕರಣದಲ್ಲಿ ಭಾಗಿಯಾಗಿರುವ ಬಗ್ಗೆ ತನಿಖೆ ಮುಂದುವರಿಯುತ್ತಿದೆ. ವಿಧಿ ವಿಜ್ಞಾನ ಪರೀಕ್ಷೆಯ ಅಂತಿಮ ವರದಿ ಬಾಕಿ ಇದೆ. ಈ ಪ್ರಕರಣ ವಿಸ್ತರಿಸಲಾಗಿದ್ದು ಹೆಚ್ಚುವರಿ ಆರೋಪಗಳನ್ನು ದಾಖಲಿಸಲಾಗಿದೆ. ಹೀಗಾಗಿ ನ್ಯಾಯಾಂಗ ಕಸ್ಟಡಿ ವಿಸ್ತರಿಸಬೇಕು ಎಂದು ಪೊಲೀಸರು ಮನವಿ ಮಾಡಿಕೊಂಡಿದ್ದರು

### ಕೆಇಬಿ ಪಿಂಚಣಿದಾರರ ಸಂಘಕ್ಕೆ ಚುನಾವಣೆ

ದಾವಣಗೆರೆ, ಆ. 14- ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಪಿಂಚಣಿದಾರರ ಸಂಘದ ಚುನಾವಣೆ ಇದೇ ದಿನಾಂಕ 28 ರಂದು ನಡೆಯಲಿದ್ದು, ಚುನಾವಣಾ ಪ್ರಕ್ರಿಯೆ ಇಂದು ಆರಂಭಗೊಂಡಿದೆ.

## ಮಲೇಬೆನ್ನೂರಿನಲ್ಲಿ ಇಂದು ಹಂದರಗಂಬ ಪೂಜೆ

ನೀರಾವರಿ ಇಲಾಖೆಯ ಮೈದಾನದಲ್ಲಿ 3ನೇ ವರ್ಷದ ಹಿಂದೂ ಮಹಾಗಣಪತಿ ಪ್ರತಿಷ್ಠಾಪನೆಗಾಗಿ ಇಂದು ಬೆಳಗ್ಗೆ 9 ಗಂಟೆಗೆ ಗೋ ಪೂಜೆ ಮತ್ತು ಹಂದರಗಂಬ ಪೂಜೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು 3ನೇ ವರ್ಷದ ಹಿಂದೂ ಮಹಾಗಣಪತಿ ಸಮಿತಿ ಅಧ್ಯಕ್ಷ ಅಶೋಕ್ ಯರೇಚಿಕ್ಕನಹಳ್ಳಿ ತಿಳಿಸಿದ್ದಾರೆ.






# ಹರಿಹರ : ಅಮೃತೇಶ್ವರ ಸ್ವಾಮಿಗೆ ವಿಶೇಷ ಅಲಂಕಾರ, ಪೂಜೆ, ಅನ್ನಸಂತರ್ಪಣೆ



ಹರಿಹರ,ಅ14- ನಗರದ ದೇವಸ್ಥಾನ ರಸ್ತೆಯ ಕಾಳಮ್ಮದೇವಸ್ಥಾನದ ಪಕ್ಕದಲ್ಲಿ ಶ್ರೀ ಅಮೃತೇಶ್ವರಸ್ವಾಮಿ ಗೆ ಬೆಳಗ್ಗೆ ಅಭಿಷೇಕ ಅಲಂಕಾರ, ಹೋಮ, ಹವನ ಪೂಜಾ ಕಾರ್ಯಗಳೊಂದಿಗೆ ಮೂರ್ತಿ ಪ್ರತಿಷ್ಠಾಪನೆ ನಂತರ ಅನ್ನ ಸಂತರ್ಪಣೆ ಮಾಡಲಾಯಿತು.

ಈ ವೇಳೆ ಶಾಸಕ ಬಿ.ಪಿ.ಹರೀಶ್, ಮಾಜಿ ಶಾಸಕ ಎಸ್.ರಾಮಪ್ಪ, ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್, ಇಂಜಿನಿಯರ್ ಅಮರಾವತಿ ವಿಶ್ವನಾಥ್, ಪತ್ರಕರ್ತ ಎಂ. ಚಿದಾನಂದ ಕಂಚಿಕೇರಿ, ಕಾಂಗ್ರೆಸ್ ಪಕ್ಷದ ಮುಖಂಡ ಸಿ.ಎನ್.ಹುಲುಗೇಶ್, ನಗರಸಭೆ ಸದಸ್ಯರಾದ ನಿಂಬಕ್ಕ ಚಂದಪೂರ್, ನಾಗರತ್ನ ಅವರನ್ನು ಸನ್ಮಾನಿಸಿ, ಗೌರವಿಸಲಾಯಿತು.

ಈ ಸಂದರ್ಭದಲ್ಲಿ ದೇವಸ್ಥಾನ ಸಮಿತಿಯ ಅಧ್ಯಕ್ಷ ಸದಾಶಿವ ಬೊಂಗಾಳೆ, ಕಾಳಪ್ಪ ಬೊಂಗಾಳೆ, ರಾಘವೇಂದ್ರ ಬೊಂಗಾಳೆ, ಎಸ್.ಬಿ. ವಿಜಯಕುಮಾರ್, ಅರುಣ್ ಕುಮಾರ್ ಬೊಂಗಾಳೆ, ದ್ವಾರಕನಾಥ್ ಬೊಂಗಾಳೆ, ಡಾ. ಸಚ್ಚಿನ್ ಬೊಂಗಾಳೆ, ಪ್ರತೀಕ್ ಬೊಂಗಾಳೆ, ಜ್ಞಾನೇಶ್ವರ ಬೊಂಗಾಳೆ, ಶಶಿಕಲಾ, ಪದ್ಮಾವತಿ, ಸುರೇಖಾ ಅರುಣ್ ಕುಮಾರ್ ಬೊಂಗಾಳೆ, ಅನ್ನಪೂರ್ಣ ಮಹೇಂದ್ರಕರ್, ಜಗದೀಶ್ ಮಹೇಂದ್ರಕರ್, ಗಿರಿಜಾ ಖಟಾವ್ಕರ್, ಹರಿಪ್ರಸಾದ್, ಪರಶುರಾಮ್, ಭೋಜರಾಜ್ ಹೋವಳೆ ಇತರರು ಹಾಜರಿದ್ದರು.





**ಮನಿ ಪ್ಲಾಂಟ್ ಮಲ್ಟಿಪರ್ಪಸ್ ಸೌಹಾರ್ದ ಸಹಕಾರಿ ಸಂಘ ನಿಯಮಿತ**

**ಹೆಚ್.ಎಂ. ರಸ್ತೆ, ದಾವಣಗೆರೆ-577 001.**

**ಫೋನ್ : 08192 275566**

**78ನೇ ಸ್ವಾತಂತ್ರ್ಯ ದಿನಾಚರಣೆಯ ಶುಭಾಶಯಗಳು**

**11ನೇ ವಾರ್ಷಿಕ ಸಾಮಾನ್ಯ ಸಭೆಯ ನೋಟೀಸು**

ದಾವಣಗೆರೆ ಎಂ.ಸಿ.ಸಿ. ಎ ಬ್ಲಾಕ್‌ನಲ್ಲಿರುವ ಶ್ರೀ ಸುಕೃತೀಂದ್ರ ಕಲಾ ಮಂದಿರದಲ್ಲಿ ದಿನಾಂಕ : 24.08.2024ರ ಶನಿವಾರದಂದು ಬೆಳಿಗ್ಗೆ 11.30 ಗಂಟೆಗೆ 11ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ಸಹಕಾರಿಯ ಅಧ್ಯಕ್ಷರಾದ, ಶ್ರೀ ಡಿ. ನಾಗರಾಜಮೂರ್ತಿಯವರ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ. ಸರ್ವ ಸದಸ್ಯರು ಸಕಾಲಕ್ಕೆ ಆಗಮಿಸಬೇಕಾಗಿ ವಿನಂತಿ. ಈಗಾಗಲೇ ಸಾಮಾನ್ಯ ಸಭೆಯ ನೋಟೀಸನ್ನು ಸದಸ್ಯರುಗಳಿಗೆ ಕಳುಹಿಸಲಾಗಿದೆ. ತಲುಪದೇ ಇದ್ದವರು ಇದನ್ನೇ ಆಹ್ವಾನವೆಂದು ಭಾವಿಸಿ, ಸಭೆಗೆ ಆಗಮಿಸಬೇಕಾಗಿ ವಿನಂತಿ.

ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ
ಎಸ್.ಸಿ. ಉಮಾದೇವಿ, ಮುಖ್ಯಕಾರ್ಯನಿರ್ವಾಹಣಾಧಿಕಾರಿ

# ವೈದ್ಯೆ ಅತ್ಯಾಚಾರ : ವೈದ್ಯರಿಂದ ಪ್ರತಿಭಟನೆ

ದಾವಣಗೆರೆ, ಆ. 14 – ಪಶ್ಚಿಮ ಬಂಗಾಳದ ಕೊಲ್ಕೊತಾದ ಆರ್.ಜಿ. ಕರ್ ವೈದ್ಯಕೀಯ ಕಾಲೇಜಿನ ಕ್ಯಾಂಪಸ್ ಸೆಮಿನಾರ್ ಹಾಲ್‌ನಲ್ಲಿ ವೈದ್ಯೆಯ ಮೇಲೆ ನಡೆದ ಅತ್ಯಾಚಾರ ಹಾಗೂ ಹತ್ಯೆಯನ್ನು ಖಂಡಿಸಿ ನಗರದ ಐ.ಎಂ.ಎ. ಘಟಕದ ವತಿಯಿಂದ ಪ್ರತಿಭಟನೆ ಹಾಗೂ ಕ್ಯಾಂಡಲ್ ಲೈಟ್ ಮೆರವಣಿಗೆ ನಡೆಸಲಾಯಿತು.

ಈ ವೇಳೆ ಮಾತನಾಡಿದ ಜೆ.ಜೆ.ಎಂ. ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲರಾದ ಡಾ. ಶುಕ್ಲಾ ಶೆಟ್ಟಿ, ವೈದ್ಯಕೀಯ ವೃತ್ತಿಗೆ ಆಯ್ಕೆಯಾಗುತ್ತಿರುವ ಮಹಿಳೆಯರ ಸಂಖ್ಯೆ ಹೆಚ್ಚಾಗುತ್ತಿದೆ. ದೇಶದ ಎಲ್ಲಾ ಆಸ್ಪತ್ರೆಗಳು ಹಾಗೂ ಸಂಸ್ಥೆಗಳಲ್ಲಿ ವೈದ್ಯರ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದರು.

ಐ.ಎಂ.ಎ. ಅಧ್ಯಕ್ಷ ಡಾ. ಹರ್ಷ ಮಾತನಾಡಿ, ಈ ಪ್ರಕರಣದ ಬಗ್ಗೆ ನಿಷ್ಪಕ್ಷಪಾತ ತನಿಖೆ ನಡೆಸಿ ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸಬೇಕು. ಕೆಲಸದ ಸ್ಥಳದಲ್ಲಿ ವೈದ್ಯರ, ವಿಶೇಷವಾಗಿ ಮಹಿಳೆಯರ ಸುರಕ್ಷತೆ ಸುಧಾರಿಸಲು ತುರ್ತು ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದರು.

ಕಾರ್ಯದರ್ಶಿ ಡಾ. ಸುರೇಂದ್ರ ಮಾತನಾಡಿ, ಈ ಪ್ರಕರಣದಲ್ಲಿ ನಿಖರವಾಗಿ ಕಾರ್ಯನಿರ್ವಹಿಸಲು ವಿಫಲವಾದರೆ ಐ.ಎಂ.ಎ. ವತಿಯಿಂದ ದೇಶಾದ್ಯಂತ ಪ್ರತಿಭಟನೆ ನಡೆಸಲಾಗುವುದು ಎಂದರು.

ಪ್ರತಿಭಟನೆಯಲ್ಲಿ ಐ.ಎಂ.ಎ. ಸದಸ್ಯರು, ಜೆ.ಜೆ.ಎಂ. ವೈದ್ಯಕೀಯ ಕಾಲೇಜು, ಎಸ್.ಎಸ್. ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್ ವಿದ್ಯಾರ್ಥಿಗಳು, ಐ.ಎಂ.ಎ. ಮಹಿಳಾ ವೈದ್ಯ ವಿಭಾಗ, ಖಾಸಗಿ ನರ್ಸಿಂಗ್ ಹೋಂ ಒಕ್ಕೂಟದ ಸದಸ್ಯರು ಭಾಗವಹಿಸಿದ್ದರು.

ಡಾ. ರಜನಿ, ಡಾ. ರಶ್ಮಿ ಶೆಟ್ಟಿ, ಡಾ. ಪ್ರೇಮಾ ಪ್ರಭುದೇವ್, ಡಾ. ಅನುರೂಪ, ಡಾ. ಬಿ.ಪಿ. ರಾಜೇಶ್, ಡಾ. ರವೀಂದ್ರ ಬಣಕಾರ್, ಡಾ. ಇ.ಜೆ. ಹರೀಶ್, ಡಾ. ಕೆ. ವಿಜಯ ಕುಮಾರ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.



ದಾವಣಗೆರೆಯಲ್ಲಿ ಐ.ಎಂ.ಎ. ಘಟಕದ ವತಿಯಿಂದ ಪ್ರತಿಭಟನೆ ಹಾಗೂ ಕ್ಯಾಂಡಲ್ ಲೈಟ್ ಮೆರವಣಿಗೆ ನಡೆಸಲಾಯಿತು.

# ಜಿಲ್ಲೆಯಾದ್ಯಂತ 34.7 ಮಿ.ಮೀ. ಧಾರಾಕಾರ ಮಳೆ





ಜಗಳೂರು ತಾಲ್ಲೂಕಿನಲ್ಲಿ ಮಳೆಯಿಂದಾಗಿ ಜಲಾವೃತಗೊಂಡಿರುವ ಹೊಲ.

**ತಗ್ಗು ಪ್ರದೇಶಗಳಿಗೆ ನುಗ್ಗಿದ ನೀರು, ಉಕ್ಕಿ ಹರಿದ ಹಳ್ಳಗಳು, 22 ಮನೆ, 70 ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿ**

ದಾವಣಗೆರೆ, ಆ. 14 - ಬುಧವಾರ ಬೆಳಗಿನ ಜಾವ ನಗರದಲ್ಲಿ ಸುರಿದ ಧಾರಾಕಾರ ಮಳೆಯಿಂದಾಗಿ, ತಗ್ಗು ಪ್ರದೇಶಗಳಲ್ಲಿ ನೀರು ನುಗ್ಗಿದೆ.

ನಗರದ ಶೇಖರಪ್ಪ ನಗರ, ಭರತ್ ಕಾಲೋನಿ, ಈರುಳ್ಳಿ ಮಾರುಕಟ್ಟೆ, ಬಂಬೂ ಬಜಾರ್ ಸೇರಿದಂತೆ ಹಲವೆಡೆ ತಗ್ಗು ಪ್ರದೇಶಗಳ ಜನರು ಸಮಸ್ಯೆ ಎದುರಿಸಿದರು. ಮಂಡಕ್ಕಿ ಭಟ್ಟಿ ಬಳಿಯ ನಾಗನಹಳ್ಳಿ ಹಳ್ಳದಲ್ಲಿ ನೀರು ಉಕ್ಕಿ ಹರಿದಿತ್ತು. ಬೇತೂರು ಗ್ರಾಮದ ತಗ್ಗು ಪ್ರದೇಶಗ ಳಿಗೆ ನೀರು ನುಗ್ಗಿತ್ತು. ಹೆಚ್. ಕಲ್ಪನಹಳ್ಳಿ ಗ್ರಾಮದಲ್ಲೂ ನೀರು ನುಗ್ಗಿ ಸಮಸ್ಯೆ ಉಂಟಾಗಿತ್ತು.

ದಾವಣಗೆರೆ ಜಿಲ್ಲೆಯಲ್ಲಿ ಒಟ್ಟಾರೆ 34.7 ಮಿ.ಮೀ. ಮಳೆಯಾಗಿದೆ. ಜಗಳೂರು ತಾಲ್ಲೂಕಿನಲ್ಲಿ ಅತಿ ಹೆಚ್ಚಿನ 71.7 ಮಿ.ಮೀ. ಮಳೆಯಾಗಿದೆ. ದಾವಣಗೆರೆ ತಾಲ್ಲೂಕಿನಲ್ಲಿ 44.8 ಮಿ.ಮೀ.ನಷ್ಟು ಮಳೆಯಾಗಿದೆ. ಹರಿಹರ ದಲ್ಲಿ 21.7 ಮಿ.ಮೀ., ಚನ್ನಗಿರಿಯಲ್ಲಿ 19.4 ಮಿ.ಮೀ., ಹೊನ್ನಾಳಿಯಲ್ಲಿ 12.1 ಮಿ.ಮೀ., ನ್ಯಾಮತಿಯಲ್ಲಿ 8.9 ಮಿ.ಮೀ. ಮಳೆಯಾಗಿದೆ. ಜಗಳೂರಿನಲ್ಲಿ ಧಾರಾಕಾರ ಮಳೆ ಸುರಿದ ಕಾರಣ, 65 ಹೆಕ್ಟೇರ್ ಕೃಷಿ ಜಮೀನು ಜಲಾವೃತವಾಗಿದೆ. ಎರಡು ಮಾಳಿಗೆ ಮನೆಗಳು ಕುಸಿದಿವೆ. ಜಗಳೂರು ಹೊಸ ಬಡಾವಣೆಯಲ್ಲಿ ನೀರು ನಿಂತು ಜನರು ಪರದಾಡಿದ್ದಾರೆ.

ಮಳೆಯಿಂದಾಗಿ ಜಿಲ್ಲೆಯ ನಾಲ್ಕು ಪಕ್ಕಾ ಮನೆಗಳಿಗೆ ತೀವ್ರ ಹಾನಿಯಾಗಿದೆ. 5 ಪಕ್ಕಾ ಮನೆಗಳಿಗೆ ಹಾಗೂ 13 ಕಚ್ಚಾ ಮನೆಗಳಿಗೆ ಭಾಗಶಃ ಹಾನಿಯಾಗಿದೆ.

ಮಳೆಯಿಂದಾಗಿ 20 ಹೆಕ್ಟೇರ್ ಪ್ರದೇಶದ ಮೆಕ್ಕೆಜೋಳ, 20 ಹೆಕ್ಟೇರ್ ಪ್ರದೇಶದ ಈರುಳ್ಳಿ, 10 ಹೆಕ್ಟೇರ್ ಪ್ರದೇಶದ ರಾಗಿ ಹಾಗೂ 20 ಹೆಕ್ಟೇರ್ ಪ್ರದೇಶದ ಅಡಿಕೆ ಬೆಳೆಗೆ ಹಾನಿಯಾಗಿದೆ. ಒಟ್ಟಾರೆ ಮಳೆಯಿಂದಾಗಿ 28 ಲಕ್ಷ ರೂ.ಗಳ ಹಾನಿಯಾಗಿದೆ ಎಂದು ಅಂದಾಜಿಸಲಾಗಿದೆ.

# ತಿರಂಗಾ ಅಭಿಯಾನ : ಗಾಜಿನ ಮನೆಯಲ್ಲಿ ರಂಗೋಲಿ ಚಿತ್ತಾರ



ದಾವಣಗೆರೆ, ಆ. 14 - ಹರ್ ಘರ್ ತಿರಂಗಾ ಅಭಿಯಾನದ ಅಂಗವಾಗಿ ಗಾಜಿನ ಮನೆಯಲ್ಲಿ ಹಮ್ಮಿಕೊಳ್ಳಲಾಗಿದ್ದ ರಂಗೋಲಿ ಸ್ಪರ್ಧೆಯಲ್ಲಿ 52 ವಿವಿಧ ಬಗೆಯ ರಂಗೋಲಿ ಚಿತ್ತಾರಗಳನ್ನು ಬಿಡಿಸಲಾಗಿತ್ತು.

ರಂಗೋಲಿ ಸ್ಪರ್ಧೆಯಲ್ಲಿ ಅಂಗನವಾಡಿ ಕಾರ್ಯಕರ್ತೆಯರು, ಸ್ವ ಸಹಾಯ ಸಂಘದ ಮಹಿಳೆಯರು, ಜನಸಾಮಾನ್ಯ ಮಹಿಳೆಯರು ಮತ್ತು ಇಲಾಖೆಯಲ್ಲಿ ಕೆಲಸ ಮಾಡುವ ಮಹಿಳೆಯರು ಭಾಗವಹಿಸಿದ್ದರು.

ಹಳೆಚಿಕ್ಕನಹಳ್ಳಿ ನಾಗಮ್ಮ ಇವರ ರಂಗೋಲಿ 'ಒಂದೆಡೆ ದೇಶ ಕಾಯುವ ಸೈನಿಕರು, ಮತ್ತೊಂದೆಡೆ ತನ್ನ ಗಂಡನಿಗಾಗಿ ಕಾಯುತ್ತಿರುವ ಗರ್ಭಿಣಿ' ದೃಶ್ಯ ಬಿಂಬಿಸಿತ್ತು. ಈ ರಂಗೋಲಿ ಪ್ರಥಮ ಬಹುಮಾನ ಪಡೆಯಿತು.

ಸಂಧ್ಯಾ ಇವರು ಬಿಡಿಸಿದ 'ಅನೇಕತೆಯಲ್ಲಿ ಏಕತೆಯ ಗೌರವ, ಮೆರಾ ಭಾರತ್ ಮಹಾನ್ ರಂಗೋಲಿ' ದ್ವಿತೀಯ ಬಹುಮಾನ ಪಡೆಯಿತು. ಸೌಭಾಗ್ಯ ಇವರು ಬಿಡಿಸಿದ 'ನನ್ನ ಧ್ವಜ ಸದಾ ಮೇಲೆ' ತೃತೀಯ ಬಹುಮಾನ ಪಡೆಯಿತು. ವನಜಾಕ್ಷಿ, ಮಂಜುಳಾ, ಸುಶೀಲಾ ಇವರು ಬಿಡಿಸಿದ ರಂಗೋಲಿಗಳಿಗೆ ಸಮಾಧಾನಕರ ಬಹುಮಾನ ನೀಡಲಾಯಿತು.

ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿಯವರು ಬಹುಮಾನ ವಿತರಣೆ ಮಾಡಿದರು. ಈ ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ಬಿ. ಇಟ್ನಾಳ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ರಾಜಾನಾಯ್ಕ್, ತೋಟಗಾರಿಕೆ ಇಲಾಖೆ ಉಪನಿರ್ದೇಶಕ ರಾಘವೇಂದ್ರ ಪ್ರಸಾದ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ತೀರ್ಪುಗಾರರಾಗಿ ವಸಂತ ಕೆ.ಆರ್, ಶಾಂತಯ್ಯ ಮಠ್, ರೇಷ್ಮಾ ಫರ್ವೀನ್ ಭಾಗವಹಿಸಿದ್ದರು.

# ಲ್ಯಾಟಿನ್ ಅಮೆರಿಕಕ್ಕೆ ದಾವಿವಿ ಕುಲಪತಿ - ಕುಲಸಚಿವರ ಪ್ರವಾಸ





ದಾವಣಗೆರೆ,ಆ.14- ವೈಜ್ಞಾನಿಕ ಪ್ರಕಟಣೆಗಳ ಅವಲೋಕನ ಕುರಿತು ವಿಶೇಷ ಉಪನ್ಯಾಸ ನೀಡಲು ಮತ್ತು ವೈಜ್ಞಾನಿಕ ಸಂಶೋಧನೆಗಳ ಒಡಂಬಡಿಕೆಗಾಗಿ ಲ್ಯಾಟಿನ್ ಅಮೆರಿಕ ಪ್ರಾಂತ್ಯದ ಚಿಲಿ ದೇಶದ ವಿಶ್ವವಿದ್ಯಾಲಯದ ಆಹ್ವಾನದ ಮೇರೆಗೆ ದಾವಣಗೆರೆ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಬಿ.ಡಿ. ಕುಂಬಾರ ಮತ್ತು ಕುಲಸಚಿವ ಪ್ರೊ.ಯು.ಎಸ್. ಮಹಾಬಲೇಶ್ವರ ಅವರು ನಾಡಿದ್ದು ದಿನಾಂಕ 16ರಿಂದ ಪ್ರವಾಸ ಕೈಗೊಳ್ಳಲಿದ್ದಾರೆ.

ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಳ್ಳಲು ಇದೊಂದು ಒಳ್ಳೆಯ ಅವಕಾಶ. ದಾವಣಗೆರೆ ವಿಶ್ವವಿದ್ಯಾನಿಲಯ ಮತ್ತು ತಾರಾಪಾಕಾ ವಿಶ್ವವಿದ್ಯಾನಿಲಯಗಳು ಈಗಾಗಲೇ 10ಕ್ಕೂ ಹೆಚ್ಚು ವೈಜ್ಞಾನಿಕ ಸಂಶೋಧನೆಗಳಲ್ಲಿ ಜಂಟಿಯಾಗಿ ಕಾರ್ಯ ನಿರ್ವಹಿಸುತ್ತಿವೆ. ಅದರ ಮುಂದುವರಿದ ಭಾಗವಾಗಿ, ದಾವಣಗೆರೆ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಚಿಲಿಯಲ್ಲಿ ಸಂಶೋಧನಾ ಅಧ್ಯಯನ ಕೈಗೊಳ್ಳಲು ಮತ್ತು ತಾಂತ್ರಿಕ ವಿನಿಮಯ ಮಾಡಿಕೊಳ್ಳಲು ನೆರವಾಗಲಿದೆ ಎಂದು ಕುಲಪತಿ ಪ್ರೊ.ಬಿ.ಡಿ.ಕುಂಬಾರ ಹೇಳಿದ್ದಾರೆ.

ಪ್ರೊ.ಮಹಾಬಲೇಶ್ವರ ಅವರು ಗಣಿತಶಾಸ್ತ್ರದಲ್ಲಿ ಹೊಸ ಮಾದರಿ ಸಂಶೋಧನಾ ವಿಧಾನ ಮತ್ತು ಪ್ರವೃತ್ತಿಗಳು ಹಾಗೂ ಗಣಿತಶಾಸ್ತ್ರದಲ್ಲಿ ಕೃತಕ ಬುದ್ಧಿಮತ್ತೆಯ ಬಳಕೆ ಕುರಿತು ಉಪನ್ಯಾಸ ನೀಡಲಿದ್ದಾರೆ.

## ಕೇಂದ್ರ, ಗಣಿ ಕಂಪನಿಗಳಿಂದ ಪೂರ್ವಾನ್ವಯ ತೆರಿಗೆ ವಸೂಲಿ

ನವದೆಹಲಿ, ಆ. 14 - ಏಪ್ರಿಲ್ 1, 2005 ರಿಂದ ಪೂರ್ವಾನ್ವಯ ಆಗುವಂತೆ ಕೇಂದ್ರ ಸರ್ಕಾರ ಹಾಗೂ ಗಣಿ ಕಂಪನಿಗಳಿಂದ ಖನಿಜಗಳ ಹಕ್ಕಿಗೆ ಸಂಬಂಧಿಸಿದಂತೆ ರಾಯಧನ ಹಾಗೂ ತೆರಿಗೆ ಬಾಕಿ ವಸೂಲಿ ಮಾಡುವಂತೆ ಸುಪ್ರೀಂ ಕೋರ್ಟ್ ಆದೇಶ ಹೊರಡಿಸಿದೆ. ಇದು ಗಣಿ ರಾಜ್ಯಗಳಿಗೆ ಹೆಚ್ಚಿನ ನೆರವು ನೀಡಲಿದೆ. ಕಳೆದ ಜುಲೈ 25ರಂದು ತೀರ್ಪು ನೀಡಿದ್ದ ಸುಪ್ರೀಂ ಕೋರ್ಟ್, ಖನಿಜಗಳ ಮೇಲೆ ತೆರಿಗೆ ಹೇರುವ ಹಕ್ಕು ರಾಜ್ಯಗಳಿಗೆ ಇದೆಯೇ ಹೊರತು ಸಂಸತ್ತಿಗೆ ಇಲ್ಲ ಎಂದು ತಿಳಿಸಿತ್ತು. ಬುಧವಾರ ಈ ತೀರ್ಪನ್ನು ಪೂರ್ವಾನ್ವಯಗೊಳಿಸುವ ಕುರಿತು ಆದೇಶ ಹೊರಡಿಸಲಾಗಿದೆ.

ಏಪ್ರಿಲ್ 1, 2026 ರಿಂದ ಆರಂಭವಾಗುವಂತೆ 12 ವರ್ಷಗಳ ಅವಧಿಯಲ್ಲಿ ತೆರಿಗೆ ಮೊತ್ತವನ್ನು ರಾಜ್ಯಗಳಿಗೆ ಪಾವತಿಸಬೇಕು ಎಂದು ತೀರ್ಪಿನಲ್ಲಿ ತಿಳಿಸಲಾಗಿದೆ.

## ಮಂಜುನಾಥ ಕಲ್ಲೇದೇವರ ಅವರಿಗೆ ರಾಷ್ಟ್ರಪತಿ ಪದಕ



ದಾವಣಗೆರೆ, ಆ.14- ಜಿಲ್ಲೆಯ ಬೆರಳು ಮುದ್ರೆ ಘಟಕದ ಪೊಲೀಸ್ ಉಪನಿರೀಕ್ಷಕ ಮಂಜುನಾಥ ಎಸ್. ಕಲ್ಲೇದೇವರ ಅವರು ರಾಷ್ಟ್ರಪತಿಯವರ ಶ್ಲಾಘನೀಯ ಪೊಲೀಸ್ ಸೇವಾ ಪದಕಕ್ಕೆ ಭಾಜನರಾಗಿದ್ದಾರೆ.

ಮಂಜುನಾಥ್ ಅವರು, 2002ನೇ ಬ್ಯಾಚ್ ಬೆರಳು ಮುದ್ರೆ ಘಟಕದ ಪಿಎಸ್‌ಐ ಆಗಿ ನೇಮಕ ಹೊಂದಿದ್ದು, ಹಾವೇರಿ ಜಿಲ್ಲೆ, ಬೆಳಗಾವಿ ನಗರ, ಬೆಂಗಳೂರು ಸಿಟಿ, ನಂತರ ಹಾಲಿ ದಾವಣಗೆರೆ ಜಿಲ್ಲಾ ಪೊಲೀಸ್ ಕಛೇರಿಯ ಬೆರಳು ಮುದ್ರೆ ಘಟಕದಲ್ಲಿ ಪಿಎಸ್‌ಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

2017 ರಲ್ಲಿ ಮುಖ್ಯ ಮಂತ್ರಿಗಳ ಪದಕಕ್ಕೂ ಮಂಜುನಾಥ್ ಭಾಜನರಾಗಿದ್ದರು. ಮಂಜುನಾಥ ಅವರನ್ನು ಎಸ್ಪಿ ಉಮಾ ಪ್ರಶಾಂತ್ ಸೇರಿದಂತೆ ಹಿರಿಯ ಅಧಿಕಾರಿಗಳು ಅಭಿನಂದಿಸಿದ್ದಾರೆ.

## ವಿನೇಶ್‌ಗೆ ದೊರಕದ ಪದಕ

ಪ್ಯಾರಿಸ್, ಆ. 14 - ಒಲಂಪಿಕ್ ಪಂದ್ಯಾವಳಿಯಲ್ಲಿ ಬೆಳ್ಳಿ ಪದಕ ಪಡೆಯಲು ಭಾರತೀಯ ಕುಸ್ತಿಪಟು ವಿನೇಶ್ ಫೋಗಟ್ ಅವರು ದಾಖಲಿಸಿದ ಮನವಿಯನ್ನು ಕ್ರೀಡಾ ಮಧ್ಯಸ್ಥಿಕೆ ನ್ಯಾಯಾಲಯ (ಸಿ.ಎ.ಎಸ್.) ತಳ್ಳಿ ಹಾಕಿದೆ. ನಿಯಮಗಳಿಗಿಂತ 100 ಗ್ರಾಂ ತೂಕ ಹೆಚ್ಚಾಗಿದ್ದ ಕಾರಣದಿಂದಾಗಿ ಫೋಗಟ್ ಅವರಿಗೆ ಪದಕ ನಿರಾಕರಿಸಲಾಗಿತ್ತು. 50 ಕೆ.ಜಿ. ಫ್ರೀಸ್ಟೈಲ್ ವಿಭಾಗದಲ್ಲಿ ತಮಗೆ ಪದಕ ನಿರಾಕರಿಸಿದ್ದನ್ನು ಪ್ರಶ್ನಿಸಿ ಫೋಗಟ್ ಅವರು ಅರ್ಜಿ ದಾಖಲಿಸಿದ್ದರು. ಆದರೆ ಫೋಗಟ್ ಅವರ ಅರ್ಜಿಯನ್ನು ತಿರಸ್ಕರಿಸಲಾಗಿದೆ ಎಂದು ಸಿ.ಎ.ಎಸ್. ಒಂದು ಸಾಲಿನ ಹೇಳಿಕೆಯಲ್ಲಿ ತಿಳಿಸಿದೆ.



ಸ್ವಾತಂತ್ರ್ಯ ದಿನಾಚರಣೆ ಶುಭಾಶಯಗಳು
ST. JOSEPH TIMES
OLD CLOCKS & Analog Watches
EXCHANGE OFFER
30% OFFER
ಹೋಲ್‌ಸೇಲ್ ದರದಲ್ಲಿ ವಾಲ್‌ಕ್ಲಾಕ್‌ಗಳು ದೊರೆಯುತ್ತವೆ.
smart watch
buy 1 get 1 free...
ಸಂಪರ್ಕಿಸಿ :
91081 79012



WANTED
Full time with stay young lady with minimum
S.S.S.L.C. qualification is required
to take care of two and half year boy.
Apply with biodata and referance within 7 days
Contact : 96861 95323
Shanthala
Chamarajpet, Davangere.



॥ ಶ್ರೀ ಮರುಳಸಿದ್ದೇಶ್ವರ ಪ್ರಸನ್ನ ॥



"ಸಮೃದ್ಧಿ" ನಿಲಯದ ಗೃಹ ಪ್ರವೇಶ ಆಹ್ವಾನ



ದಿ॥ ಶ್ರೀ ಕೆ.ಜಿ. ಸಿದ್ದಪ್ಪಗೌಡ್ರು, ದಿ॥ ಶ್ರೀಮತಿ ಉಜ್ಜಮ್ಮ ಕೆ.ಜಿ. ಮತ್ತು ಶ್ರೀಮತಿ ಗಿರಿಜಮ್ಮ ಕೆ.ಜಿ. ಇವರ ಮಗನಾದ
ಶ್ರೀಮತಿ ಯಶೋಧ ಮತ್ತು ಶ್ರೀ ಕೆ.ಜಿ. ಲೋಕೇಶ್
ಸದಸ್ಯರು, ಪುರಸಭೆ, ಮಲೇಬೆನ್ನೂರು. ಇವರು ಮಾಡುವ ವಿಜ್ಞಾಪನೆಗಳು.



ನಾವು ಮಲೇಬೆನ್ನೂರಿನಲ್ಲಿ ನೂತನವಾಗಿ ನಿರ್ಮಿಸಿರುವ 'ಸಮೃದ್ಧಿ' ನಿಲಯದ ಗೃಹ ಪ್ರವೇಶವನ್ನು ದಿನಾಂಕ : 15.08.2024ರ ಗುರುವಾರ ಹಮ್ಮಿಕೊಂಡಿದ್ದೇವೆ. ತಾವುಗಳು ಈ ಶುಭ ಸಮಾರಂಭಕ್ಕೆ ಕುಟುಂಬ ಪರಿವಾರ ಸಮೇತರಾಗಿ ಆಗಮಿಸಿ, ನಮ್ಮ ಮನಸ್ಸಂತೋಷಪಡಿಸಲು ಆತ್ಮೀಯ ವಿನಂತಿ.

ಗೃಹಪ್ರವೇಶ ದಿನಾಂಕ : 15.08.2024ನೇ ಗುರುವಾರ, ಭೋಜನ : ಮಧ್ಯಾಹ್ನ 12 ರಿಂದ
ಸ್ಥಳ : 'ಸಮೃದ್ಧಿ' ನಿಲಯ, ವಾಲ್ಮೀಕಿ ಬಡಾವಣೆ, ಇಂದಿರಾ ನಗರ, ಮಲೇಬೆನ್ನೂರು.

ತಮ್ಮ ಆಗಮನಾಭಿಲಾಷಿಗಳು :
ಶ್ರೀಮತಿ ಯಶೋಧ ಮತ್ತು ಶ್ರೀ ಕೆ.ಜಿ. ಲೋಕೇಶ್
ಚಿ॥ ಸುದೀಪ್ ಪಾಟೀಲ್ ಕೆ.ಜಿ., ಕು॥ ವಂದನ ಕೆ.ಜಿ.

ತಮ್ಮ ಸುಖಾಗಮನ ಬಯಸುವವರು : ದಿ॥ ಶ್ರೀ ಕೆ.ಜಿ. ಸಿದ್ದಪ್ಪಗೌಡ್ರುರವರ ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಮತ್ತು ಕರೇಗೌಡ್ರು ವಂಶಸ್ಥರು ಹಾಗೂ ಬಂಧು-ಮಿತ್ರರು. ಫೋ. : 9945705867, 9611499366



ದಿ ಇಂಡಿಯನ್ ಸೌಹಾರ್ದ ಕೋ ಆಪ್. ಸೊಸೈಟಿ ನಿಯಮಿತ, ಹರಿಹರ.
ಹೆಚ್.ಎಂ. ಬಸಪ್ಪ ಕಾಂಪ್ಲೆಕ್ಸ್, 1ನೇ ಮಹಡಿ, ಫಕ್ಕೀರಸ್ವಾಮಿ ಮಠದ ಹತ್ತಿರ,
ಶಿವಮೊಗ್ಗ ರಸ್ತೆ, ಹರಿಹರ-577601. ಫೋ. : 93790 77001

6ನೇ ವರ್ಷದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆ

ಸಹಕಾರಿಯ 6ನೇ ವರ್ಷದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ದಿನಾಂಕ 15.08.2024 ನೇ ಗುರುವಾರ ಬೆಳಿಗ್ಗೆ 11.00 ಘಂಟೆಗೆ ಸಹಕಾರಿಯ ಅಧ್ಯಕ್ಷರಾದ ಶ್ರೀಯುತ ಹುಲಿಗೇಶ್ ಸಿ.ಎನ್. ಇವರ ಅಧ್ಯಕ್ಷತೆಯಲ್ಲಿ ಐರಣಿ ಮಠದ ಸಮುದಾಯ ಭವನದಲ್ಲಿ ಸಭೆ ಕರೆಯಲಾಗಿದೆ. ಸಹಕಾರಿಯ ಸರ್ವ ಸದಸ್ಯರುಗಳು ಸಕಾಲಕ್ಕೆ ಆಗಮಿಸಿ, ಸಭೆಯನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿಸಿಕೊಳ್ಳುತ್ತೇವೆ.

ಆಡಳಿತ ಮಂಡಳಿಯ ಸದಸ್ಯರು



ಹುಲಿಗೇಶ್ ಸಿ.ಎನ್. ಅಧ್ಯಕ್ಷರು | ಮಲ್ಲೇಶಪ್ಪ ಕೆ.ಹೆಚ್. ಉಪಾಧ್ಯಕ್ಷರು | ಪ್ರಭುದೇವ್ ಎಂ.ಬಿ. ನಿರ್ದೇಶಕರು | ಜೋಸೆಫ್ ದಿವಾಕರ್ ನಿರ್ದೇಶಕರು | ಭಕ್ತಸಿಂಗ್ ನಿರ್ದೇಶಕರು | ರಿಯಾಜ್ ಅಹಮದ್ ನಿರ್ದೇಶಕರು | ಮಾರುತಿ ಶೆಟ್ಟಿ ನಿರ್ದೇಶಕರು



ಶ್ರೀಮತಿ ವನಜಾಕ್ಷಿ ನಿರ್ದೇಶಕರು | ಸೈಯದ್ ಆಸೀಫ್ ಅಹಮದ್, ನಿರ್ದೇಶಕರು | ಉಮಾಶಂಕರ್ ನಿರ್ದೇಶಕರು | ಜಗದೀಶ್ ಚೂರಿ ನಿರ್ದೇಶಕರು | ಸುಕುಮಾರ್ ಹೆಚ್.ಎಂ. ನಿರ್ದೇಶಕರು | ಶ್ರೀಮತಿ ಸುಜಾತ ಡ್ಯಾನಿಯಲ್, ನಿರ್ದೇಶಕರು | ಮಹೇಶ್ವರಪ್ಪ ಜಿಗಳಿ ನಾಮ ನಿರ್ದೇಶಕರು | ಮಂಜುನಾಥ್ ಕೆ.ಎಂ. ನಾಮ ನಿರ್ದೇಶಕರು

ಸಿಬ್ಬಂದಿ ವರ್ಗ ಮತ್ತು ಪಿಗ್ಮಿ ಸಂಗ್ರಾಹಕರು



ರವೀಂದ್ರನಾಥ್ ಆರ್.ಎಸ್. ಮು. ಕಾರ್ಯನಿರ್ವಾಹಣಾಧಿಕಾರಿ | ಸಂತೋಷ್ ವಿ.ಡಿ. ಎಸ್.ಡಿ.ಎ. | ಚಂದ್ರಶೇಖರ್ ಎಸ್.ಎನ್. ಪಿಗ್ಮಿ ಸಂಗ್ರಾಹಕರು | ಮಂಜುನಾಥ್ ಎ. ಪಿಗ್ಮಿ ಸಂಗ್ರಾಹಕರು | ಹನುಮಂತಪ್ಪ ಟಿ.ಎಸ್. ಪಿಗ್ಮಿ ಸಂಗ್ರಾಹಕರು | ಸಂದೀಪ್ ಎಸ್.ಎನ್. ಪಿಗ್ಮಿ ಸಂಗ್ರಾಹಕರು | ಇಮ್ಯಾನುಯಲ್ ಮಧುಕರ್ ಪಿಗ್ಮಿ ಸಂಗ್ರಾಹಕರು



ಮಲ್ಲೇಶ್ ಆರ್. ಪಿಗ್ಮಿ ಸಂಗ್ರಾಹಕರು | ಅನಿಲ್ ಪಿ.ಜಿ. ಪಿಗ್ಮಿ ಸಂಗ್ರಾಹಕರು | ರವಿಕುಮಾರ್ ಎಸ್. ಪಿಗ್ಮಿ ಸಂಗ್ರಾಹಕರು | ಸತೀಶ್ ಪಿ. ಪಿಗ್ಮಿ ಸಂಗ್ರಾಹಕರು | ಇರ್ಷದ್ ಅಲಿ ಪಿಗ್ಮಿ ಸಂಗ್ರಾಹಕರು | ಅರುಣ್‌ಕುಮಾರ್ ಎಸ್. ಪಿಗ್ಮಿ ಸಂಗ್ರಾಹಕರು

ಠೇವಣಿಗಳ ಮೇಲಿನ ಬಡ್ಡಿ ದರ

| | |
|---|---|
| 1) 30 ದಿನಗಳ ಮೇಲ್ಪಟ್ಟು 90 ದಿನಗಳವರೆಗೆ | 6% |
| 2) 91ದಿನಗಳ ಮೇಲ್ಪಟ್ಟು 180 ದಿನಗಳವರೆಗೆ | 7% |
| 3) 181 ದಿನಗಳ ಮೇಲ್ಪಟ್ಟು 12 ತಿಂಗಳವರೆಗೆ | 8% |
| 4) 12 ತಿಂಗಳವರೆಗೆ ಮೇಲ್ಪಟ್ಟು 36 ತಿಂಗಳವರೆಗೆ | 9% |
| 5) 36 ತಿಂಗಳ ಮೇಲ್ಪಟ್ಟು | 10% |

7 ವರ್ಷ 1 ತಿಂಗಳಿಗೆ ನಿಮ್ಮ ಹಣ ದ್ವಿಗುಣವಾಗುವುದು.

ಸಾಲಗಳ ಮೇಲಿನ ಬಡ್ಡಿ ದರಗಳು

| | |
|---|---|
| 1) ಹೊಸ ವಾಹನಾಧಾರಿತ ಸಾಲ | 12% |
| 2) ಜಾಮೀನು ಆಧಾರಿತ ಸಾಲ | 16% |
| 3) ಕಟ್ಟಡ ಆಧಾರಿತ ಸಾಲ | 13% |

ಹೊಸ ವಾಹನಕ್ಕೆ 90% ಸಾಲವನ್ನು ತಕ್ಷಣ ಮಾಡಿಕೊಡಲಾಗುವುದು.

ಹಿರಿಯ ನಾಗರಿಕರಿಗೆ 12 ತಿಂಗಳ ಮೇಲ್ಪಟ್ಟ ಠೇವಣಿಗಳಿಗೆ ಶೇ. 1% ಹೆಚ್ಚುವರಿ ಬಡ್ಡಿ ಕೊಡಲಾಗುವುದು.

| ಕ್ರ.ಸಂ. | ವಿವರ | 2019-2020 | 2020-2021 | 2021-2022 | 2022-2023 | 2023-2024 |
|---|---|---|---|---|---|---|
| 01 | ಸದಸ್ಯರ ಸಂಖ್ಯೆ | 1424 | 1605 | 1817 | 2003 | 2100 |
| 02 | ಸದಸ್ಯರ ಷೇರು | 59,61,000-00 | 78,88,000-00 | 1,07,71,500-00 | 1,47,97,000-00 | 1,81,15,500-00 |
| 03 | ಠೇವಣಿಗಳು | 2,48,96,654-00 | 3,56,31,242-00 | 6,80,91,848-00 | 7,92,22,476.00 | 9,94,24,415-84 |
| 04 | ಬಿಲ್ಡಿಂಗ್ ಫಂಡ್ | 1,54,821-00 | 24,04,837-00 | 72,37,339-56 | 1,35,38,867.56 | 2,07,04,500-56 |
| 05 | ಸಾಲಗಳು | 3,21,68,371-00 | 4,43,68,919-00 | 6,51,59,871-00 | 9,22,19,900-00 | 12,80,53,028-00 |
| 06 | ಲಾಭಾಂಶ | 10,99,680-00 | 15,26,361-56 | 16,32,923-00 | 20,60,026.00 | 32,06,113-00 |
| 07 | ವಾರ್ಷಿಕ ವ್ಯವಹಾರ | 23,20,59,464-00 | 40,57,58,795-00 | 67,35,10,916-00 | 1,04,26,18,368.56 | 1,39,99,10,263-40 |

ದಿನಾಂಕ : 15.08.2024
ಸ್ಥಳ : ಹರಿಹರ.

ಕಾರ್ಯಕಾರಿ ಮಂಡಳಿಯ ಆದೇಶದ ಮೇರೆಗೆ
ರವೀಂದ್ರನಾಥ್ ಆರ್.ಎಸ್., ಮುಖ್ಯ ಕಾರ್ಯನಿರ್ವಾಹಣಾಧಿಕಾರಿ

ವಿ.ಸೂ. : ಈಗಾಗಲೇ ಸದಸ್ಯರಿಗೆ ಆಹ್ವಾನಗಳನ್ನು ಕಳುಹಿಸಲಾಗಿದ್ದು, ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಸಭೆಗೆ ಹಾಜರಾಗಬೇಕಾಗಿ ವಿನಂತಿ.


KA/SK/DVG-028/2024-2026. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas